|| ಜೈ ಭಾರತಮಾತಾ ||

# ನೀತಿ ಕಥೆಗಳು

## ಮಕ್ಕಳಿಗೆ-ಮಧು

ಲೇಖಕಿ

ಜಗ್ಗು ಪ್ರಿಯದರ್ಶಿನಿ

ಸಂಪಾದಕರು ಮತ್ತು ಪ್ರಕಾಶಕರು :

ಜಗ್ಗು ಪ್ರಿಯದರ್ಶಿನಿ

10 ನೇ ಕ್ರಾಸ್, ಸೋಮೇಶ್ವರ ಎಕ್ಸ್‌ಟೆನ್ಷನ್

ತು ಮ ಕೂ ರು - 572 102

ಎಲ್ಲಾ ಹಕ್ಕುಗಳು : ಲೇಖಕಿಯವರದು

ಮೊದಲ ಮುದ್ರಣ : ಜನವರಿ 1982

ಬೆಲೆ : ರೂ. 5-50

Paper used for Printing of this Book was made available
by the Government at concessional rate.

ಮುದ್ರಕರು :-

ಭಗವಾನ್ ಆರ್ಟ್ ಪ್ರಿಂಟರ್ಸ್

ಲಿಂಕ್ ರೋಡ್, ಮಲ್ಲೇಶ್ವರಂ, ಬೆಂಗಳೂರು-560 003.

# ನನ್ನ-ಬಿನ್ನಹ

ಮಾನವನು ವಿದ್ಯಾವಂತನಾದರೆ ಮಾತ್ರ ಸಾಲದು, ಸುಸಂಸ್ಕೃತನಾಗಿ ಬಾಳುವುದು ಮುಖ್ಯ. ಮನುಷ್ಯನ ಉತ್ತಮ ನಡವಳಿಕೆಯೇ ಸಂಸ್ಕೃತಿ. ವಿದ್ಯೆಗೂ, ಸಂಸ್ಕೃತಿಗೂ ಅಂತರವಿದೆ. ವಿದ್ಯಾವಂತರಲ್ಲದ ಅನೇಕರು ಮಾನವ ಮೌಲ್ಯವನ್ನರಿತು ತಮ್ಮ ಉತ್ತಮ ಗುಣಗಳಿಂದ ಪರೋಪಕಾರಿಗಳಾಗಿ ಬದುಕಿನ ಸಾರ್ಥಕತೆಯನ್ನು ಪಡೆದವರುಂಟು.

ಆದ್ದರಿಂದ ವಿದ್ಯೆಯ ಜೊತೆ ಜೊತೆಗೆ ಉತ್ತಮ ಗುಣಗಳನ್ನು ಬೆಳಸಿ ಕೊಳ್ಳುವುದು ಮುಖ್ಯ. ಸುಸಂಸ್ಕೃತರಾದ ಪ್ರಜೆಗಳೇ ದೇಶದ ಆಸ್ತಿ, ಇಂದು ಪುಟಾಣಿಗಳಾಗಿರುವ ನಮ್ಮ ಶಾಲಾ ಮಕ್ಕಳು ಮುಂದೆ ಸತ್ಪ್ರಜೆಗಳಾಗಿ ಬಾಳುವ ಗುರಿಯನ್ನು ನಾವು ಸಾಧಿಸ ಬೇಕಾಗಿದೆ. ಪ್ರಾಮಾಣಿಕತೆ, ಪರೋಪಕಾರ, ಪ್ರಾಣಿದಯೆ, ಧರ್ಮಶ್ರದ್ಧೆ, ಕಷ್ಟ ಸಹಿಷ್ಣುತೆ, ಸ್ನೇಹಪರತೆ. ಮುಂತಾದ ಉತ್ತಮ ಗುಣಗಳನ್ನು ಪಾಠದ ಜೊತೆ-ಜೊತೆಗೆ ಮಕ್ಕಳಲ್ಲಿ ಮೂಡಿಸುತ್ತಾ ಬರಬೇಕು. ಇದಕ್ಕೆ ನೀತಿ ಬೋಧೆ ಬಹಳ ಉತ್ತಮ ಮಾರ್ಗ.

ನಾನು ಉಪಾಧ್ಯಾಯಿನಿಯಾಗಿ 33ವರ್ಷ ಉನ್ನತ ಪ್ರಾಥಮಿಕ ಶಾಲಾ ಮಕ್ಕಳೊಂದಿಗೆ ಒಡನಾಡಿದ್ದೇನೆ. ಉಸಿರಾಡಿದ್ದೇನೆ. ಮಕ್ಕಳಿಗೆ ಕತೆಯೆಂದರೆ ಪ್ರಾಣ, ನಾನು ಮಕ್ಕಳಿಗೆ ಸ್ವಾರಸ್ಯವಾಗಿ ನೀತಿ ಕಥೆಗಳನ್ನು ಹೇಳುತ್ತಿದ್ದೆ. ಕಥೆ ಯಲ್ಲಿಯ ನೀತಿ, ಮತ್ತು ಆದರ್ಶ ಮಕ್ಕಳಮನಸ್ಸಿನ ಮೇಲೆ ಬಹಳ ಪರಿಣಾಮ ಕಾರಿಯಾಗಿ ಅವರಿಗೆ ಉತ್ತಮ ಮಾರ್ಗದರ್ಶನ ನೀಡುತ್ತವೆ, ಎಂಬುದು ನನ್ನ ಅನುಭವದ ಮಾತು. ನಾನು ಮಕ್ಕಳಿಗಾಗಿ ನಾಟಕ, ಕವನ, ಹಾಸ್ಯ ಸಂಭಾಷಣೆಗಳನ್ನು ಬರೆದು ಅವರನ್ನು ತಯಾರಿಸಿ ಪ್ರದರ್ಶಿಸಿದ್ದುಂಟು. ಆದರೆ ಬರೆದದ್ದನೆಲ್ಲಾ ಪ್ರಕಟಿಸುವುದು ಸಾಧ್ಯವಿಲ್ಲದ ಮಾತು.

ಅಖಿಲ ಭಾರತ ೫೧ನೇ ಕನ್ನಡ ಸಾಹಿತ್ಯ ಸಮ್ಮೇಳನ ಧರ್ಮಸ್ಥಳದಲ್ಲಿ ನಡೆದಾಗ ಕೀರ್ತಿಶೇಷ ಜಿ.ಪಿ. ರಾಜರತ್ನಂ ರವರು ಸಭೆಯಲ್ಲಿ ಭಾಷಣ ಮಾಡಿ

ದಾಗ ಕಳ-ಕಳಿಯಿಂದ ಹೇಳಿದ ಮಾತು "ದೊಡ್ಡ-ದೊಡ್ಡ ಗ್ರಂಥ, ಕಾದಂಬರಿ, ಕಥೆ, ಕವನಗಳನ್ನು ಬರೆಯುವ ಸಾಹಿತಿಗಳು ಬೇಕಾದಷ್ಟು ಜನರಿದ್ದಾರೆ. ಆದರೆ ಮಕ್ಕಳಿಗಾಗಿ ಮಕ್ಕಳ ಸಾಹಿತ್ಯವನ್ನು ಬರೆಯುವವರು ಬಹಳ ಕಡಿಮೆ" ಎಂದರು. ಆ ಮಾತು ನನ್ನ ಮನಸ್ಸಿಗೆ ಮುಟ್ಟಿತು. ಅದೇ ಸ್ಫೂರ್ತಿಯೇ ನನ್ನಿಂದ ಈ ನೀತಿ ಕತೆಗಳನ್ನು ಬರೆದು ಪ್ರಕಟಿಸುವಂತೆ ಮಾಡಿತೆನ್ನ ಬಹುದು. "ಬರೆಯ ಬಹುದು ಆದರೆ ಮುದ್ರಣ ಮಾಡಿಸುವುದು ಕಷ್ಟ" ಮುದ್ರಣಕ್ಕಾಗಿ ಸರ್ಕಾರಕ್ಕೆ ರಿಯೊಯಿತಿ ದರದಲ್ಲಿ ಕಾಗದಕ್ಕೆ ಬರೆದು ಕೊಂಡೆ, ಅದು ಒದಗಲು ಸಾಕಷ್ಟು ಕಾಲಾವಕಾಶ ಬೇಕಾಯಿತು. ಕಥೆಗೊಂದು ಚಿತ್ರ ಬರೆಸುವುದಕ್ಕಾಗಿ ಮತ್ತೆ ಅವನ್ನು ಬ್ಲಾಕ್ ಮಾಡಿಸುವುದಕ್ಕಾಗಿ ಬಹಳಷ್ಟು ಕಾಲ ವ್ಯಯವಾಯಿತು. ಆದರೂ ಸರ್ಕಾರದಿಂದ ಕಾಗದ ಬೇಗ ಬರುವಂತೆ ಸಹಾಯ ಮಾಡಿದ ನ್ಯೂ ಬೆಂಗಳೂರು ಪ್ರಿಂಟರ್ಸ್ ಮಾಲಿಕರಾದ ಕೆ. ಶಾಮಣ್ಣ ನವರಿಗೂ, ಕತೆಗೊಂದು ಚಿತ್ರವನ್ನು ಬಹಳ ಅಂದವಾಗಿ ಬರೆದು ಕೊಟ್ಟ ಅಮೃತೂರಿನ ಚಿತ್ರ ಕಲಾವಿದ ಶ್ರೀಮಾನ್ ರಘು ಕುಮಾರ್ ರವರಿಗೂ, ಚಿತ್ರಗಳನ್ನು ಅಂದವಾಗಿ ಬ್ಲಾಕ್ ಮಾಡಿಸಿಕೊಟ್ಟ ತುಮಕೂರು ಕಾರ್ಟೂನ್ ಪ್ರೆಸ್ ಮಾಲಿಕರಾದ ಶ್ರೀಮಾನ್ ಪರಮ ಶಿವಯ್ಯರ್ ರವರಿಗೂ ನಾನು ತುಂಬ ಕೃತಜ್ಞಳಾಗಿದೇನೆ. ಇದರಲ್ಲಿರತಕ್ಕ ನೀತಿ ಕಥೆಗಳು ಕೆಲವು ನನ್ನ ಕಲ್ಪಿತ ಕಥೆಗಳು, ಕೆಲವು ಯಾವಾಗಲೋ ಕೇಳಿದ ಆಧಾರಿತ ಮತ್ತೆ ಕೆಲವು ವಯೋವೃದ್ಧರೂ, ಜ್ಞಾನವೃದ್ಧರೂ, ಸಂಸ್ಕೃತಪಂಡಿತರೂ ಆದ ನಮ್ಮ ತೀರ್ಥರೂಪು ರವರು ಮಹಾರಾಜರ ಕಾಲದ ಅನೇಕ ತಾವು ಕಂಡು ಕೇಳಿದ ವಿಷಯವನ್ನು ಹೇಳಿ ಅದನ್ನು ಕಥೆಯ ರೂಪದಲ್ಲಿ ಬರೆಯಲು ನನಗೆ ಮಾರ್ಗದರ್ಶನ ಮಾಡಿದ್ದಾರೆ.

ಅವರ ಪೂಜ್ಯ ಪಾದಗಳಿಗೆ ಶಿರಬಾಗಿ ಅವರ ಆಶೀರ್ವಚನವನ್ನು ಬೇಡುತ್ತೇನೆ ಮಕ್ಕಳಿಗೆ ಕಥೆಯೆಂದರೆ ಜೇನಿನಷ್ಟು ರುಚಿ, ಆದ್ದರಿಂದ ಈ ರುಚಿಕರವಾದ ನೀತಿ ಕಥೆಗಳ ಪುಸ್ತಕಕ್ಕೆ "ಮಕ್ಕಳಿಗೆ ಮಧು" ಎಂಬ ಶೀರ್ಷಿಕೆಯನ್ನಿಟ್ಟೆ. ಈ ಮಧುವನ್ನು ಎಲ್ಲಾ ಮಕ್ಕಳೂ ಸವಿಯುವಂತಾದರೆ ನಾನು ಬರೆದದ್ದು ಸಾರ್ಥಕ ವಾಯಿತೆಂಬ ತೃಪ್ತಿ ನನಗೆ.

ಇನ್ನು ಪುಸ್ತಕ ರೂಪವಾಗಿ ಅಂದವಾಗಿ ಮುದ್ರಿಸಿ ಕೊಟ್ಟ ಬೆಂಗಳೂರು ಮಲ್ಲೇಶ್ವರಂ ನಲ್ಲಿರುವ ಭಗವಾನ್ ಆರ್ಟ್ ಪ್ರಿಂಟರ್ಸ್ ಮಾಲಿಕರಾದ ಶ್ರೀಮಾನ್ ಸಾಯಿನಾಥ್ ರವರಿಗೆ ನಾನು ಪ್ರತ್ಯೇಕ ಕೃತಜ್ಞತೆಗಳನ್ನರ್ಪಿಸ ಬೇಕಾಗಿದೆ, ಏಕೆಂದರೆ ಮುದ್ರಣ ಕಾರ್ಯದಲ್ಲಿ ಬೇಕಾದಷ್ಟು ಅಡಚಣೆಗಳುಂಟಾಗುವುದು ಸಾಮಾನ್ಯ, ಅಂತಹುದರಲ್ಲಿ ನಾನು ತುಮಕೂರಿನಲ್ಲಿದ್ದರೂ ಮುದ್ರಣ ಕಾರ್ಯವನ್ನು ಪ್ರಾರಂಭಿಸಿ ಶ್ರೀಮಾನ್ ಸಾಯಿನಾಥ್ ರವರು ಮುಂದುವರಿಸಿದರು, ವಿಧಿವಶಾತ್ ಅದೇ ಸಮಯದಲ್ಲಿ ಒಂದು ಆಘಾತದಲ್ಲಿ ನನ್ನ ಕಾಲು ಮುರಿದು ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯಬೇಕಾಯಿತು, ಆಗಲೂ ಸಹ ಸಾಯಿನಾಥ್ ರವರು ನಾನಿದ್ದ ಆಸ್ಪತ್ರೆಗೆ ಬಂದು ನನ್ನ ಅಭಿಪ್ರಾಯವನ್ನು ಕೇಳಿ ಸಹಕರಿಸಿ ಮುದ್ರಣವನ್ನು ಅಂದವಾಗಿಯೂ ಶೀಘ್ರವಾಗಿಯೂ ಮುಗಿಸಿ ಕೊಟ್ಟಿದ್ದಕ್ಕಾಗಿ ನಾನು ಅವರಿಗೆ ಎಷ್ಟು ಧನ್ಯವಾದಗಳನ್ನರ್ಪಿಸಿದರೂ ಅದು ಅಲ್ಪವೇ, ಕರಡು ಪ್ರತಿಗಳನ್ನೂ ಸಹ ಅವರೇ ತಿದ್ದಿ ನನಗೆ ಉಪಕರಿಸಿದ್ದಾರೆ, ಹಾಗೂ ಎಲ್ಲೋ ಒಂದೊಂದು ಮುದ್ರಣ ದೋಷ ಉಳಿದು ಬಿಟ್ಟಿದೆ, ಅದನ್ನು 'ಹಿರಿಯ ಓದುಗರು ಮಕ್ಕಳಿಗೆ ತಿದ್ದಿ ಕೊಡ ಬೇಕಾಗಿ ವಿನಂತಿಸಿ ಕೊಳ್ಳುತ್ತೇನೆ ಬೆಂಗಳೂರಿನಲ್ಲಿಯೇ ಇರತಕ್ಕ ನನ್ನ ಸಹೋದ ರಿಯರು ಮುದ್ರಣ ಕಾರ್ಯದಲ್ಲಿ ಅನೇಕವಿಧ ಸಹಾಯ ಮಾಡಿ ನನಗೆ ಪ್ರೋತ್ಸಾಹ ನೀಡಿದ್ದಾರೆ, ಅವರಿಗೆ ನಾನು ಕೃತಜ್ಞಳು, ಮಕ್ಕಳ ಕಥೆ ಬರೆಯುವಂತೆ ಪ್ರೋತ್ಸಾಹ ನೀಡಿದ ನಮ್ಮ ವಿದ್ಯಾ ಇಲಾಖೆಗೂ ವಿದ್ಯಾಧಿಕಾರಿಗಳಿಗೂ ನಾನು ಕೃತಜ್ಞತೆ ಯನ್ನು ಅರ್ಪಿಸುತ್ತೇನೆ.

ಬೆಂಗಳೂರು ಜಯನಗರದ ರಾಷ್ಟ್ರೀಯ ವಿದ್ಯಾಲಯದ ಪ್ರಿಂಸಿಪಾಲರಾಗಿರುವ ಶ್ರೀಮತಿ ಚಿ.ನ. ಮಂಗಳರವರು ಈ ಪುಸ್ತಕಕ್ಕೆ ಮುನ್ನುಡಿ ಬರೆದು ತಮ್ಮ ಒಂದು ಅಮೂಲ್ಯವಾದ ಅಭಿಪ್ರಾಯವನ್ನು ಬರೆದಿರುತ್ತಾರೆ. ಅವರಿಗೆ ಅನೇಕ ಕಾರ್ಯಭಾರ ವಿದ್ದರೂ ಇದ್ದುದರಲ್ಲಿಯೇ ಅವಕಾಶ ಮಾಡಿಕೊಂಡು ಬರೆದು ಕೊಟ್ಟಿದ್ದಕ್ಕಾಗಿ ಅವರಿಗೆ ನಾನು ತುಂಬಾ ಕೃತಜ್ಞತಳಾಗಿದ್ದೇನೆ.

ರಾಜ್ಯ ಪ್ರಶಸ್ತಿ ಪಡೆದ ಶಿಕ್ಷಕಿ
J. ಚಿನ್ನಮ್ಮ

ಜಗ್ಗು ಪ್ರಿಯದರ್ಶಿನಿ
ತುಮಕೂರು.

# ಮುನ್ನುಡಿ

"ಮಕ್ಕಳೇ ದೇವರು" ಎಂಬ ಮಾತನ್ನು ಸಾರಿ ಸಾರಿ ಹೇಳುವ ನಾವು ಅವರ ಸರ್ವತೋಮುಖ ಪ್ರಗತಿಗಾಗಿ ಕಾರ್ಯೋನ್ಮುಖರಾಗುವುದು ವಿರಳ. ಆದರಲ್ಲೂ ಮಕ್ಕಳ ಸಾಹಿತ್ಯವಂತೂ ನಮ್ಮಲ್ಲಿ ಅತಿ ವಿರಳ. ಮಕ್ಕಳಿಗಾಗಿ ಸಾಹಿತ್ಯ ರಚಿಸಿದವರು ಕನ್ನಡದಲ್ಲಿ ಬೆರಳೆಣಿಸುವಷ್ಟು ಜನ. ಆಂಗ್ಲ ಭಾಷೆಯಲ್ಲಿರುವ ವಿಪುಲವಾದ ಸಾಹಿತ್ಯರಾಶಿಯನ್ನು ನೋಡಿದಾಗ, ರಷ್ಯನರು ಮಕ್ಕಳಿಗಾಗಿ ಸುಲಭ ಬೆಲೆಯಲ್ಲಿ ಅತ್ಯಂತ ಆಕರ್ಷಕವಾದ ಪುಸ್ತಕಗಳನ್ನು ನಮ್ಮ ದೇಶದ ರಸ್ತೆ ರಸ್ತೆಯಲ್ಲೂ ಮಾರುತ್ತಿರುವಾಗ ಕನ್ನಡದಲ್ಲಿ ಏಕೆ ಹೀಗಿಲ್ಲಾ ಎನ್ನಿಸುತ್ತದೆ. ಬರೆಯುವವರೂ ಕಡಿಮೆ ಬರೆದದ್ದನ್ನು ಅಚ್ಚುಹಾಕಿಸುವುದು ಇನ್ನೂ ಕಡಿಮೆ.

ಸೋದರಿ ಶ್ರೀಮತಿ ಜಗ್ಗು ಪ್ರಿಯದರ್ಶಿನಿ ಕನ್ನಡದ ಉತ್ತಮ ಬರಹಗಾರರಲ್ಲೊಬ್ಬರು. ಅನುಭವಿ ಅಧ್ಯಾಪಕಿಯೂ ಕೂಡ. ಮಕ್ಕಳ ಜೊತೆ ಮಕ್ಕಳಿಗಾಗಿ 35 ವರುಷದ ತಮ್ಮ ಬಾಳು ಸವೆಸಿದವಳು. ಅಲ್ಲದೆ ಸಾಹಿತ್ಯ ಅವರಿಗೆ ತಾಯಮನೆಯ ಕೊಡುಗೆ. ತಂದೆ ಪ್ರಖ್ಯಾತ ಸಂಸ್ಕೃತ ವಿದ್ವಾಂಸರಾದ ಶ್ರೀ ಜಗ್ಗು ಶಿಂಗ್ರೈಯ್ಯಂಗಾರ್ಯರು. ಹೀಗೆ ಸಾಹಿತ್ಯ ಸಂಸ್ಕೃತಿಗಳ ಸಂಗಮದಲ್ಲಿ ಮಿಂದಿರುವ ಶ್ರೀಮತಿ ಪ್ರಿಯದರ್ಶಿನಿ "ಮಕ್ಕಳಿಗೆ ಮಧು" ಎಂಬ ಈ ಕಥಾ ಸಂಕಲನ ಹೊರ ತಂದಿದ್ದಾರೆ. ಇದು ತುಂಬಾ ಸಂತೋಷದ ವಿಷಯ.

ಕಥೆಗಳು ಬರೀ ಕಲ್ಪನೆಯ ಕಟ್ಟುಕಥೆಗಳಾಗಿರದೆ ಮಾನವೀಯತೆಯನ್ನು ಮೌಲ್ಯತೆಯನ್ನೂ ಮೈಗೂಡಿಸಿಕೊಂಡಿದೆ. ಚಿಕ್ಕಂದಿನಿಂದಲೂ ಉತ್ತಮ ಭಾವನೆಗಳನ್ನು ಬೆಳೆಸಿಕೊಳ್ಳುವಂತೆ ಪ್ರೋತ್ಸಾಹಿಸುವ ಈ ಕಥಾಸಂಕಲನ ಮಕ್ಕಳಿಗೆ ಖಂಡಿತವಾಗಿಯೂ ಮೆಚ್ಚುಗೆಯಾಗುವುದರಲ್ಲಿ ಸಂದೇಹವಿಲ್ಲ.

ಸೋದರಿ ಪ್ರಿಯದರ್ಶಿನಿಯವರಿಂದ ಇನ್ನೂ ಅನೇಕ ಉತ್ತಮ ಗ್ರಂಥಗಳು ಹೊರಬರಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

**ಚಿ.ನ. ಮಂಗಳ**

# ಅವತರಣಿಕೆ


1 ಪೀಠಿಕೆ

2 ಜೂಜಿನ ಜಾಣತನ

3 ಕಸ್ತೂರಿ ಮಹಲ್

4 ಸಿಕ್ಕಿದ ನಿಧಿ

5 ಪುಣ್ಯದ ಕೋಳಿ

6 ಇಂದ್ರ ಪದವಿಯೂ ಬೇಡ

7 ಪಾಪದ ಫಲ

8 ಮಮತೆಯ ಬೆಲೆ

9 ಬುದ್ಧಿವಂತ ಬಾಲಕ

10 ವಿಚಿತ್ರ ಮಕ್ಕಳ ಭವಿಷ್ಯ

11 ಸತ್ಯಸಂಧ ಕಳ್ಳ

12 ಪೆದ್ದ [ಭಟ್ಟ

13 ಒಂದು ಗೋಣಿ ಹಣ್ಣು ಒಂದು ಗೋಣಿ ಕಾಯಿ

14 ಅಡಕೆಯಲ್ಲಿ ಹೋದಮಾನ ಆನೆಕೊಟ್ಟರೂ ಬಾರದು

15 ಜಟ್ಟಿ ಹುಡುಗ

16 ಅಂಗಗಳ ಬೆಲೆ

17 ಅನಾಯ ಘನತೆ

# ನಂಬಿಕೆ

ಮಧುರಾ ನಗರಿಯನ್ನು ಮಧುಸೇನನೆಂಬ ರಾಜ ಆಳುತ್ತಿದ್ದ. ಅವನು ಬಹಳ ದಯಾಳು ತನ್ನ ಪ್ರಜೆಗಳನ್ನು ಮಕ್ಕಳಂತೆ ಪ್ರೀತಿಸುತ್ತಿದ್ದ, ಪ್ರಜೆಗಳಿಗೆ ಏನು ತೊಂದರೆ ಯಾದರೂ ವಿಚಾರಿಸಿ ಪರಿಹಾರ ಮಾಡುತ್ತಿದ್ದ.

ಪ್ರಜೆಗಳೂ ರಾಜನನ್ನು ಪ್ರೀತಿಸುತ್ತಿದ್ದರು, ರಾಜನ ಬಳಿ ಬುದ್ಧಿವಂತ ರಾದ ಮಂತ್ರಿಗಳಿದ್ದರು. ಸಮಯ ಬಂದಾಗ ರಾಜನು ಮಂತ್ರಿಗಳ ಸಲಹೆ ಪಡೆಯುತ್ತಿದ್ದನು.

ಒಂದು ಬಾರಿ ಮಂತ್ರಾಲೋಚನೆ ಸಭೆ ನಡೆಯಿತು, ರಾಜನು ತನ್ನ ಮಂತ್ರಿಗಳನ್ನು ಸಭೆಗೆ ಕರೆಸಿಕೊಂಡಿದ್ದ. ಆಗ ರಾಜ ಹೇಳಿದ ನನ್ನ ರಾಜ್ಯದಲ್ಲಿ ಪ್ರಜೆಗಳೆಲ್ಲರೂ ರಾಜ ಭಕ್ತಿಯುಳ್ಳವರು ನನಗೆ ಯಾರೂ ದ್ರೋಹ ಬಗೆಯು ವವರಿಲ್ಲ ಎಂದನು.

ಕೆಲವು ಮಂತ್ರಿಗಳು ರಾಜನ ಮಾತನ್ನು ಅನುಮೋದಿಸಿದರು ॥ ಹೌದು ಮಹಾಸ್ವಾಮಿ ! ತಮ್ಮ ರಾಜ್ಯದ ಪ್ರತಿಯೊಬ್ಬ ಪ್ರಜೆಯೂ ಸ್ವಾಮಿ ನಿಷ್ಟೆಯುಳ್ಳ ವರಾಗಿದ್ದಾರೆ, ತಮ್ಮ ಆಜ್ಞೆಯನ್ನು ತಪ್ಪದೆ ಪಾಲಿಸುತ್ತಾರೆ ಎಂದರು. ರಾಜನು ಹಿಗ್ಗಿಹೋದ.

ಆದರೆ ಸತ್ಯಸೇನನೆಂಬ ಮಂತ್ರಿಯು "ಮಹಾಸ್ವಾಮಿ" ತಾವು ಎಲ್ಲರನೂ ನಂಬಬಾರದು ನಿಮಗೆ ಮೋಸ ಮಾಡುವ ಪ್ರಜೆಗಳೂ ಇದ್ದಾರೆ॥ ಎಂದ

ರಾಜನ ಮುಖ ಸ್ವಲ್ಪ ಗಂಟಿಕ್ಕಿತು,? ಸಿಟ್ಟಿನಿಂದ" ಇದೇನು ಸತ್ಯಸೇನ! ನೀನು ಹೀಗೆ ಹೇಳುವಿ ? ನಮ್ಮ ಪ್ರಜೆಗಳಲ್ಲಿ ಅಂತಹ ತಪ್ಪನ್ನು ಏನುಕಂಡಿದ್ದಿ ನನ್ನ ಆಜ್ಞೆಯನ್ನು ತಪ್ಪದೆ ಪಾಲಿಸುತ್ತಾರೆ" ಎಂದ

ಮಹಾಸ್ವಾಮಿ ! ತಮ್ಮ ನಂಬಿಕೆ ತಪ್ಪಾಗಬಹುದು ಜನಗಳೆಂದ ಮೇಲೆ ಒಳ್ಳೆಯವರೂ ಇರುತ್ತಾರೆ, ಮೋಸಗಾರರೂ ಇರುತ್ತಾರೆ ಎಂದ ಸತ್ಯಸೇನ.


"ಅಂತಹ ಪ್ರಜೆ ಯಾರೆಂದು ತೋರಿಸಿಕೊಡು" ಎಂದು **ರಾಜ ಸಿಟ್ಟಿನಿಂದ** ಹೇಳಿದ

ಸತ್ಯಸೇನ ಭಯಪಡಲಿಲ್ಲ. "ಮಹಾಸ್ವಾಮಿ ! ಹತ್ತು ದಿನ **ಕಾಲಾವಕಾಶ ಕೊಡಿ** ಸತ್ಯ ಸಂಗತಿಯನ್ನು ತೋರಿಸಿಕೊಡುತ್ತೇನೆ" ಎಂದ "ಹಾಗೆಯೇ **ಆಗಲಿ"** ಎಂದು ರಾಜ ಸಭೆಯನ್ನು ಮುಕ್ತಾಯ ಮಾಡಿದ

ಸತ್ಯಸೇನ ಆ ದಿನವೇ ಅರಮನೆಯ ಮುಂದೆ ಒಂದು ದೊಡ್ಡ ಸಿಮೆಂಟ್ ತೊಟ್ಟಿಯನ್ನು ಕಟ್ಟಿಸಿದ, ಮತ್ತು ಊರಿನಲ್ಲೆಲ್ಲಾ ಡಂಗುರ ಹೊಡಿಸಿದ ಏನೆಂದರೆ; "ಈ ಊರಿನ ಪ್ರತಿಯೊಬ್ಬರ ಮನೆಯಿಂದಲೂ ಒಂದು ಸೇರು ಗಟ್ಟಿ ಹಾಲನ್ನು ತಂದು ಅರಮನೆಯ ಮುಂದಿರುವ ಸಿಮೆಂಟ್ ತೊಟ್ಟಿಗೆ ಸುರಿಯ ಬೇಕು, ವೇಳೆ–ನಾಳೆ ರಾತ್ರಿ 8 ಘಂಟೆಯ ಮೇಲೆ ಬೆಳಗಿನ ಜಾವ ನಾಲ್ಕು ಗಂಟೆ ಯೊಳಗೆ ಎಲ್ಲರೂ ತಪ್ಪದೆ ತಂದು ಹಾಕತಕ್ಕದ್ದು. ಇದು ರಾಜಾಜ್ಞೆ" ಎಂದು ಪ್ರಕಟಿಸಿದ, ಈ ವಿಷಯವನ್ನು ರಾಜನಿಗೆ ತಿಳಿಸಿದ

ಪ್ರಜೆಗಳೆಲ್ಲರೂ ಅವರವರ ಮನೆಯಲ್ಲಿ ಮಾತನಾಡಿಕೊಂಡರು ನಾಳೆ ರಾತ್ರಿ ವೇಳೆಗೆ ಒಂದು ಸೇರು ಹಾಲನ್ನು ಹೊಂಚಿಕೊಳ್ಳಬೇಕು" ಎಂದು

ಮಾರನೆಯ ದಿನ ರಾತ್ರಿ ಎಂಟು ಗಂಟೆಯಾದ ನಂತರ ಒಬ್ಬೊಬ್ಬರಾಗಿ ಚೊಂಬುಗಳಲ್ಲಿ ಹಾಲನ್ನು ತಂದು ತೊಟ್ಟಿಗೆ ಸುರಿಯಲು ಶುರುಮಾಡಿದರು, ತೊಟ್ಟಿಯ ಬಳಿ ಕತ್ತಲಾಗಿದ್ದುದರಿಂದ ಜನರು ಬುಡ-ಬುಡನೆ ಸುರಿಯುವ ಶಬ್ದ ಮಾತ್ರ ಕೇಳಿಸುತ್ತಿತ್ತು. ಸುರಿಯಲು ಬಂದವರು "ಏನಪ್ಪಾ ! ರಾಮಣ್ಣಾ ಹಾಲು ಸುರಿದೆಯಾ ? ಎಂದು ಸೋಮಣ್ಣಾ ಕೇಳಿದರೆ "ಇದೋ ಈಗ ತಾನೇ ಸುರಿದೆನಲ್ಲಾ !" ಎನ್ನುತ್ತಿದ್ದ, ಹೀಗೆಯೇ ಮಾತನಾಡಿಕೊಂಡು ಒಬ್ಬರಿಗೊಬ್ಬರು ಕತ್ತಲಲ್ಲಿ ಸುರಿದು ಹೋಗುತ್ತಿದ್ದರು



ಜನರು ತೊಟ್ಟಿಗೆ ಹಾಲು ಸುರಿಯುತ್ತಿರುವುದು.

ಬೆಳಕು ಹರಿದ ಕೂಡಲೇ ಸತ್ಯಸೇನ ಮಹಾರಾಜರನ್ನು ಜೊತೆಯಲ್ಲಿ ಕರೆದುಕೊಂಡು ಬಂದ. ಮಹಾಸ್ವಾಮೀ ! ತಮ್ಮ ಪ್ರಜೆಗಳು ತೊಟ್ಟಿಗೆ ಹಾಲನ್ನು ಸುರಿದಿದ್ದಾರೆ ತಮ್ಮ ರಾಜ್ಯದಲ್ಲಿ 5,462 ಮನೆಗಳಿವೆ, ತಮ್ಮ ಆಜ್ಞೆಯ ಪ್ರಕಾರ ಅಷ್ಟು ಸೇರು ಹಾಲು ತೊಟ್ಟಿಯಲ್ಲಿರ ಬೇಕಲ್ಲವೇ ? ನೋಡೋಣ, ಎಂದು ರಾಜನನ್ನು ತೊಟ್ಟಿಯ ಬಳಿ ಕರೆತಂದ.

ರಾಜನು ತೊಟ್ಟಿಯಲ್ಲಿ ಕಂಡದ್ದೇನು ? "ಬರೀ ಬಿಳಿಯ ನೀರು" ಇದೇನು ಮಂತ್ರಿ! ಬರೀ ಹಾಲನ್ನು ಸುರಿಯಲು ಅಪ್ಪಣೆ ಮಾಡಿರಲಿಲ್ಲವೇ ? ಎಂದ ರಾಜ.

ಅದಕ್ಕೆ ಮಂತ್ರಿ ''ನಾನು ನಿಮ್ಮ ಪ್ರಜೆಗಳ ಸತ್ಯಸಂಧತೆಯನ್ನು ಪರೀಕ್ಷಿಸಲು ರಾತ್ರಿ ಕತ್ತಲಲ್ಲಿ ತಂದು ಸುರಿಯಿರಿ ಎಂದು ಅಪ್ಪಣೆಮಾಡಿದ್ದು. ಕೆಲವರು ಪ್ರಜೆಗಳು ಒಳ್ಳೆಯ ಹಾಲನ್ನೇ ತಂದು ಸುರಿದಿದ್ದಾರೆ, ಮತ್ತೆ ಕೆಲವರು ಹಾಲೂ, ನೀರೂ ಬೆರೆಸಿ ಸುರಿದಿದ್ದಾರೆ, ಇನ್ನು ಕೆಲವರು ಕತ್ತಲಾದ್ದರಿಂದ ಯಾರಿಗೂ ಕಾಣುವುದಿಲ್ಲ ಎಂದು ಒಂದೊಂದು ಚೊಂಬು ನೀರನ್ನೇ ಸುರಿದುಹೋಗಿದ್ದಾರೆ.

ಇದು ನಿಮಗೆ ಪ್ರಜೆಗಳು ಮಾಡಿರುವ ಮೋಸ, ದ್ರೋಹ, ತಾನೇ ಮಹಾಸ್ವಾಮಿ; ಹೋಗಲಿ ಪ್ರತಿಯೊಬ್ಬ ಮನೆಯವರೂ ತಪ್ಪದೆ ಬಂದು ಸುರಿದಿದ್ದಾರೆಯೇ? ಅದನ್ನಾದರೂ ಪರೀಕ್ಷಿಸೋಣ, ಎಂದು ಅಳತೆಮಾಡಿಸಿದ ಅಷ್ಟು ಹಾಲನ್ನೂ, 5462 ಸೇರು ಇರಬೇಕಾದದ್ದಕ್ಕೆ 3250 ಸೇರು ಇತ್ತು. ಮಹಾಸ್ವಾಮಿ, ಇದರಲ್ಲಿಯೂ ಮೋಸ ಪ್ರತಿಯೊಂದು ಮನೆಯವರೂ ತಂದುಹಾಕಿಲ್ಲ, ತಮ್ಮ ಮನಸ್ಸಿಗೆ ಈಗ ತಿಳಿಯಿತಲ್ಲವೇ? ಎಂದ ಮಂತ್ರಿ.

ಮಂತ್ರಿಯ ಬುದ್ಧಿವಂತಿಕೆಗೆ ರಾಜ ಮೆಚ್ಚಿದ, ಆದರೆ ತನ್ನ ಪ್ರಜೆಗಳ ವಿಶ್ವಾಸ, ನಂಬಿಕೆ ಕಡಮೆಯಾಯಿತು.

ಮಕ್ಕಳೇ. — ನಂಬಿಕೆ ಎನ್ನುವುದು ತಾಯಿಗೆ ಸಮಾನ, ರಾಜನಿಗೆ ದ್ರೋಹಮಾಡಿದ ಪ್ರಜೆಗಳು ದೇಶಕ್ಕೇ ದ್ರೋಹಮಾಡಿದಂತೆ, ಅಂತಹ ದ್ರೋಹಿಗಳಿರುವ ದೇಶವು ನಾಶವಾಗುವುದು ಖಂಡಿತ.

———

## ಜೂಜಿನ ಜಾಣತನ

ಧರ್ಮಪುರಿಯಲ್ಲಿ ವೀರಸೇನನೆಂಬ ರಾಜ ರಾಜ್ಯವಾಳುತ್ತಿದ್ದ ಅವನು ಪ್ರಜೆಗಳನ್ನು ವಾತ್ಸಲ್ಯದಿಂದ ಕಾಪಾಡುತ್ತಿದ್ದ. ಪ್ರಜೆಗಳು ಸುಖ ಸಂತೋಷದಿಂದ ಬಾಳಲು ಎಲ್ಲಾ ಅನುಕೂಲವನ್ನೂ ಮಾಡಿದ್ದ.

ತನ್ನ ಪ್ರಜೆಗಳಿಂದ ಯಾವ ಕಲಾ ಪ್ರದರ್ಶನವಾದರೂ ಸಭೆ ಸೇರಿಸಿ ಆ ಸಭೆಗೆ ತಾನು ಮುಖ್ಯ ಪ್ರೇಕ್ಷಕನಾಗಿ ಹೋಗಿ ಕುಳಿತು ಕೊಳ್ಳುತ್ತಿದ್ದ. ಚೆನ್ನಾಗಿ ಪ್ರದರ್ಶನ ನೀಡಿದವರಿಗೆ ಬಹುಮಾನ ಕೊಡುತ್ತಿದ್ದ

ಹೀಗಿದ್ದುದರಿಂದ ರಾಜನನ್ನು ಮೆಚ್ಚಿಸಿ ಬಹುಮಾನ ಪಡೆಯಲು ಅನೇಕರು ಅನೇಕ ಕಲೆಗಳನ್ನು ಅಭ್ಯಾಸ ಮಾಡುತ್ತಿದ್ದರು

ಕೋಳಿಕಾಳಗ, ಗೂಳಿಕಾಳಗ, ಮುಂತಾದ ಪ್ರಾಣಿ ಪ್ರದರ್ಶನಗಳನ್ನೂ ರಾಜನು ಮೆಚ್ಚುತ್ತಿದ್ದ, ಆದ್ದರಿಂದ ಆಗಾಗ ಇಂತಹ ಜೂಜುಗಳನ್ನು ಏರ್ಪಡಿಸುತ್ತಿದ್ದರು

ಆ ಊರಿನಲ್ಲಿ ಹನುಮಜೆಟ್ಟಿ ಎಂಬ ಒಬ್ಬ ಜಟ್ಟಿ ಇದ್ದ. ಅವನು ತಾನು ಕುಸ್ತಿ ಮಾಡುವುದಲ್ಲದೆ ಪ್ರಾಣಿಗಳನ್ನೂ ಕುಸ್ತಿಗೆ ತಯಾರು ಮಾಡುತ್ತಿದ್ದ.

ಅವನು ಒಂದು ಬಾರಿ ಹುಂಜನ ಕಾಳಗ ಏರ್ಪಡಿಸಿದ. ಅದನ್ನು ದೊಡ್ಡ ಸಭೆಯಲ್ಲಿ ಪ್ರದರ್ಶಿಸಲು ಏರ್ಪಾಡು ಮಾಡಿದ್ದ, ಸಭಗೆ ಮಹಾರಾಜರನ್ನೂ ಆಹ್ವಾನಿಸಿದ

ಪಂದ್ಯಕ್ಕೆ 100ರೂಪಾಯಿ ಪಣ ಇಟ್ಟ. ಯಾವಹುಂಜ ಸೋತರೂ ಅದರ ಯಜಮಾನ 100ರೂಪಾಯಿ ಕೊಡಬೇಕು ಗೆದ್ದ ಹುಂಜದವನಿಗೆ. ಎಂದು ಒಪ್ಪಂದವಾಯಿತು

ಹುಂಜಗಳ ಕಾಳಗ ಶುರುವಾಯಿತು, ಬಹಳ ಸ್ವಾರಸ್ಯವಾಗಿ ಕಾಳಗ ನಡೆಯಿತು, ಹನುಮಜೆಟ್ಟಿಯ ಹುಂಜ ಗೆದ್ದಿತು, ಆಗ ಸೋತವನು 100 ರೂಪಾಯನ್ನು ಹನುಮಜೆಟ್ಟಿಗೆ ಕೊಟ್ಟುಬಿಟ್ಟ


ಹನುಮಜೆಟ್ಟಿ ಬಹಳ ಬುದ್ಧಿವಂತಕೂಡಾ. ಅವನು ಮಹಾರಾಜರ ಬಳಿ ಹೋಗಿ ಮಹಾಸ್ವಾಮಿ; ಈ ದಿನ ನಾನು ನನ್ನ ಹುಂಜನನ್ನು ತಮ್ಮ ಹೆಸರಿನಲ್ಲಿ ಕಾಳಗಕ್ಕೆ ಬಿಟ್ಟಿದ್ದೆ. ಅದು ಗೆದ್ದದ್ದು ತಮ್ಮ ಅದೃಷ್ಟದಿಂದಲೇ, ಆ ಹಣವು ತಮಗೆ ಸೇರಬೇಕಾದ್ದು ''ತೆಗೆದುಕೊಳ್ಳಿ'' ಎಂದು ಕೊಟ್ಟ

ಮಹಾರಾಜರು ಎಷ್ಟು ಬೇಡವೆಂದರೂ ಹನುಮಜಟ್ಟಿ ಕೇಳಲಿಲ್ಲ ತಾವು ''ಒಪ್ಪಿಸಿಕೊಳ್ಳಬೇಕು'' ಎಂದು ಕೊಟ್ಟುಬಿಟ್ಟ

ಮತ್ತೆ ಕೆಲವು ದಿನ ಬಿಟ್ಟು ಮಹಾರಾಜರ ಬಳಿಗೆ ಹೋಗಿ ''ಮಹಾ ಸ್ವಾಮಿ ! ತಮ್ಮ ಹೆಸರಿನಲ್ಲಿ ಈಸಲ ಟಗರು ಕಾಳಗ ಬಿಟ್ಟಿದ್ದೆ. ಅದೂಗೆದ್ದಿತು. ಇದೂ ಸಹ ನಿಮ್ಮ ಮಹಿಮೆಯೇ ತೆಗೆದುಕೊಳ್ಳಿ 200 ರೂಪಾಯಿ ಪಂದ್ಯಕ್ಕೆ ಇಟ್ಟಿದ್ದುದು'' ಎಂದು 200 ರೂಪಾಯಿಗಳನ್ನು ಮಹಾರಾಜರಿಗೆ ಕೊಟ್ಟನು.

ಮಹಾರಾಜರ ಜೊತೆಯಲ್ಲಿಯೇ ಇದ್ದ ಮಂತ್ರಿಯು ''ಮಹಾಸ್ವಾಮೀ ! ಇದೇನೋ ಬುದ್ಧಿವಂತಿಕೆ. ನೀವು ಈ ಹಣ ತೆಗೆದುಕೊಳ್ಳಬೇಡಿ ಎಂದು ಹೇಳಿದ ಅದಕ್ಕೆ ರಾಜನು ''ಪಾಪ ! ಅವನೇನು ನಮಗೆ ಅನ್ಯಾಯ ಮಾಡುತ್ತಿದಾನೆ ? ಅವನು ಸತ್ಯಸಂಧ, ಆದ್ದರಿಂದ ಹೀಗೆ ಕೊಡುತ್ತಿದಾನೆ. ನಮ್ಮ ಖಜಾನೆಗೆ ಸೇರಿಸು ಮಂತ್ರಿ'' ಎಂದ

ಹೀಗೆಯೇ ಹನುಮಜೆಟ್ಟಿ ಕಾಳಗ ಏರ್ಪಡಿಸದಿದ್ದರೂ ಬೇರೆ ಎಲ್ಲಿಯೋ ಕಾಳಗ ಏರ್ಪಡಿಸಿದ್ದೆ. ನಿಮ್ಮ ಹೆಸರಿನಲ್ಲಿ ಎಂದು ಹೇಳಿ ಮಹಾರಾಜರಿಗೆ 4–5 ಬಾರಿ ಈ ರೀತಿ ನೂರು, ಇನ್ನೂರು ರೂಪಾಯಿಗಳನ್ನು ತಂದುಕೊಟ್ಟ



ಹನುಮಜಟ್ಟಿ ರಾಜನಿಗೆ ಹಣ ಕೊಡುತ್ತಿರುವುದು

ಮಹಾರಾಜರು ಸಂತೋಷದಿಂದ ಅದನ್ನೆಲ್ಲಾ ತೆಗೆದಿಟ್ಟುಕೊಳ್ಳುತ್ತಿದ್ದರು.

ಒಂದು ಬಾರಿ ಹನುಮಜೆಟ್ಟಿ ಮಹಾರಾಜರ ಬಳಿ ಬಂದ ಮಹಾಸ್ವಾಮಿ: ಈ ಬಾರಿ ಗೂಳಿ ಕಾಳಗವನ್ನು ಏರ್ಪಡಿಸಿದ್ದೆ ಸ್ವಾಮಿ: ಐವತ್ತು ಸಾವಿರ ರೂಪಾಯಿ ಪಂದ್ಯಕ್ಕೆ ಜೂಜುಕಟ್ಟಿದ್ದೆವು. ಎಂದು ಅವನು ಹೇಳುತ್ತಿದ್ದಂತೆಯೇ ಮಹಾರಾಜ ಖುಷಿಯಿಂದ

ಹೌದಾ ! ಜಟ್ಟಿ, ನಮ್ಮ ಅದೃಷ್ಟ ತೆರೆಯಿತು "ನೀನು ಬಹಳ ಸತ್ಯಸಂಧ ಕೊಡು ಕೊಡು ಆ ಹಣವನ್ನು" ಎಂದ

ಅದಕ್ಕೆ ಹನುಮಜೆಟ್ಟಿ ಮಹಾಸ್ವಾಮಿ ! " ಇದೂ ತಮ್ಮ ಹೆಸರಿನಲ್ಲಿಯೇ ಜೂಜು ಕಟ್ಟಿದ್ದೆ. ಆದರೆ ಈಸಲ ದುರದೃಷ್ಟ ನಮ್ಮ ಗೂಳಿ ಕಾಳಗದಲ್ಲಿ ಸೋತು

ಹೋಯಿತು, ಆ 50ಸಾವಿರ ರೂಪಾಯನ್ನು ಈಗ ತಾವು ಕೊಡಬೇಕು" ಎಂದ.

ರಾಜನು ಗಾಬರಿಯಿಂದ ಹಾಂ : ಇದೇನು ಅನ್ಯಾಯ ಜೆಟ್ಟಿ'' ಐವತ್ತು ಸಾವಿರ ನಾನೆಲ್ಲಿಂದ ಕೊಡಲಿ ? ಎಂದ

ಆಗ ಅಲ್ಲಿಯೇ ಇದ್ದ ಮಂತ್ರಿ ಮಹಾಸ್ವಾಮಿ ! ನಾನು ಆಗಲೇ ಹೇಳ ಲಿಲ್ಲವೇ ಈ ಜಟ್ಟಿ ಏನೋ ಉಪಾಯಮಾಡುತ್ತಿದಾನೆ ಎಂದು.

ಆದರೆ ಈಗ ಏನೂ ಮಾಡಲು ಸಾಧ್ಯವಿಲ್ಲ, ನೀವು ಧರ್ಮ ಪ್ರಭುಗಳು. ನ್ಯಾಯಬಿಟ್ಟು ನಡೆಯುವುದು ಸರಿಯಲ್ಲ. ಗೆದ್ದಾಗಲೆಲ್ಲಾ ಹಣವನ್ನು ತೆಗೆದು ಕೊಂಡ ಮೇಲೆ ಸೋತಾಗ ಕೊಡಲೇಬೇಕು" ಎಂದ

ಆಗ ರಾಜ ಜಟ್ಟಿಯ ಬುದ್ಧಿವಂತಿಕೆಗೆ ಮೆಚ್ಚಿ ಅವನಿಗೆ 50,000ರೂ ಪಾಯಿಗಳನ್ನು ಕೊಟ್ಟ

ಜಟ್ಟಿ ಸಂತೋಷದಿಂದ ರಾಜನಿಗೆ ಕೈಮುಗಿದು ಸ್ವಾಮಿ ಈಗಲೂ ನಿಮ್ಮ ಹೆಸರಿನಿಂದಲೇ ನಾನು ಬದುಕುತ್ತೇನೆ" ಎಂದು ಹೇಳಿ ಹೋದ

ಹೀಗೆ ಕೆಲಜನರು ತಮ್ಮ ಬುದ್ಧಿವಂತಿಕೆಯಿಂದ ಎಷ್ಟೋ ಕೆಲಸಗಳನ್ನು ಸಾಧಿಸಿಕೊಳ್ಳುತ್ತಾರೆ. ಅಲ್ಲವೇ ? ಪುಟ್ಟಾಣಿಗಳಾ ?

## ಸತ್ತಿಲಿ ಮಹಲ್

ನಾಗಾಪುರ ವೆಂಬುದೊಂದು ಊರು. ಆ ಊರಿನಲ್ಲಿ ಬುದ್ಧ ಎಂಬ ಒಬ್ಬ ಹುಡುಗನಿದ್ದನು. ಅವನು ಬಹಳ ಬಡವ. ತಂದೆ-ತಾಯಿ ಯಾರೂ ಇಲ್ಲ, ಕೂಲಿ-ನಾಲಿ ಮಾಡಿ ಜೀವಿಸುತ್ತಿದ್ದ. ಯೋಗ್ಯನಾದಹುಡುಗ, ಯಾರ ನ್ನಾದರೂ ಬೇಡುವುದೆಂದರೆ ಆವನಿಗೆ ಬಹಳ ನಾಚಿಕೆ

ಒಂದು ದಿನ ಎಲ್ಲಿಯೂ ಕೂಲಿ ಸಿಕ್ಕಲಿಲ್ಲ. ಕೈಯ್ಯಲ್ಲಿ ಕಾಸಿಲ್ಲ ಹೊಟ್ಟೆ

ತುಂಬಾ ಹಸಿವಾಗುತ್ತಿತ್ತು ಬುದ್ಧನಿಗೆ ಈ ದಿನ ಯಾರನ್ನಾದರೂ ಭಿಕ್ಷೆ ಬೇಡಿ ಹೊಟ್ಟೆತುಂಬಿಸಿಕೊಳ್ಳಲೇ ಬೇಕು ಎನಿಸಿತು,

ಹಸಿವಿನಿಂದ ಹಾಗೇ ಕಾಲೂ ಎಳೆದುಕೆಂಡು ಒಂದು ದೊಡ್ಡ ಬಂಗಲೆ ಹತ್ತಿರ ಬಂದ, "ಅಮ್ಮಾ ತಾಯೀ........,ತುಂಬಾಹಸಿವು. ಏನಾದರೂ ತಿನ್ನಲು ಕೊಡಿತಾಯೀ, ಎಂದ"

ಮನೆ ಯಜಮಾನ ಒಳಗಿನಿಂದ ಬಂದು ಹುಡಗನನ್ನು ದುರ-ದುರನೆ ನೋಡಿ : ಲೋ ಕತ್ತೆ ಗಟ್ಟಿಮುಟ್ಟಾಗಿದ್ದೀ ; ಕೂಲಿಮಾಡಿ ತಿನ್ನು ಬೇಡುವು ದಕ್ಕೆ ನಿನಗೆ ನಾಚಿಕೆಯಾಗುವುದಿಲ್ಲವೇ ? ಎಂದು ಬೈದ.

ಸ್ವಾಮಿ : ಈ ದಿನ ಎಲ್ಲೂ ಕೂಲಿಸಿಗಲಿಲ್ಲ. ಅದಕ್ಕಾಗಿ ಬಂದೆ, ಎಂದ. ಲೋ—ಸೋಮಾರಿ ಏನಾದರೂ ವ್ಯಾಪಾರ ಮಾಡೊ. ಬೇಡಿಮಾತ್ರ ತಿನ್ನ ಬಾರದು. ಎಂದ ಮನೆ ಯಜಮಾನ.

ಸ್ವಾಮಿ : ವ್ಯಾಪಾರಕ್ಕೆ ಬಂಡವಾಳ ಬೇಡವೇ ? ನನ್ನಲ್ಲಿ ಒಂದು ಪೈಸಾನೂ ಇಲ್ಲ ಎಂದ ಹುಡುಗ.

ನೀನು ಬುದ್ಧಿವಂತನಾದರೆ ನೋಡು ಆ ಚರಂಡಿ ಬಳಿ ಒಂದು ಸತ್ತಿಲಿ ಬಿದ್ದಿದೆ ಅದೇ ಬಂಡವಾಳ ಸಾಕು, ಹೋಗು ಹೋಗು ಮುಂದೆ ನಡಿ ಎಂದು ಗದರಿ ಗೇಟ್ ಹಾಕಿಕೊಂಡು ಒಳಗೆ ನಡೆದ ಮನೆಯಾತ.

ಹುಡುಗ ಬಡವನಾದರೂ ಮರ್ಯಾದಸ್ಥ ಅವನಿಗೆ ಬಹಳ ಅವಮಾನ ವಾಯಿತು ತಾನು ಇನ್ನು ಯಾರಲ್ಲಿಯೂ ಬೇಡಬಾರದು ಎಂದು ಕೊಂಡ ಮನೆ ಯಜಮಾನ ಹೇಳಿದಂತೆ ಆ ಸತ್ತಿಲಿಯನ್ನು ಎತ್ತಿಕೊಂಡ. ಒಂದು ರಟ್ಟಿನ ಮೇಲೆ ಇಟ್ಟುಕೊಂಡು ಬೀದಿ_ಬೀದಿಯಲ್ಲಿ 1 ಸತ್ತಿಲಿ ಬೇಕೇ ಸತ್ತಿಲಿ.... ಎಂದು ಕೂಗುತ್ತಾ ಹೋದ, ಕೇಳಿದವರು ನಕ್ಕು ಹಾಸ್ಯಮಾಡುತ್ತಾ ಹೋದರು.

ಒಂದು ಬಂಗಲೆಯ ಬಳಿ ಒಂದು ಹುಡಿಗಿ ಮೊಲದಂತೆ ಬಿಳಿಯಾಗಿದ್ದ ಒಂದು ಬೆಕ್ಕನ್ನು ಎತ್ತಿಕೊಂಡು ನಿಂತಿದ್ದಳು. ತನ್ನ ಪ್ರೀತಿಯ ಬೆಕ್ಕಿಗೆ ಈದಿನ ಸರಿಯಾಗಿ ಆಹಾರ ಸಿಕ್ಕಲಿಲ್ಲವಲ್ಲಾ ಎಂದು ಚಿಂತಿಸುತ್ತಿದ್ದಳು.

ಈ ಹುಡುಗ ಇಲಿಬೇಕೇ ; ಎಂದು ಕೂಗಿದ್ದು ಕೇಳಿ ಆಶ್ಚರ್ಯವಾಯಿತ್ತು,

ಹುಡುಗನನ್ನು ಕರೆದು ಏನಪ್ಪಾ ; ಸತ್ತಿಲಿಗೆ ಎಷ್ಟು ದುಡ್ಡು ಕೊಡಬೇಕು ?' ಎಂದು ಕೇಳಿದಳು.

ಹುಡುಗನಿಗೆ ಸದ್ಯ ಸತ್ತಿಲಿಯನ್ನು ಕೊಂಡುಕೊಳ್ಳುವವರು ಒಬ್ಬರು ಸಿಕ್ಕಿದರಲ್ಲಾ : 'ಎಂದು ಸಂತೋಷವಾಯಿತು, ''ತೆಗೆದುಗೂಳ್ಳಿ ನೀವು ಎಷ್ಟಾದರೂ ಕೊಡಿ" ಎಂದ. ಇಲಿಯನ್ನು ಕಂಡಿದ್ದೇತಡ ಬೆಕ್ಕು ಅವಳ ಕೈ ಯಿಂದ ಚಿಮ್ಮಿ ಆ ಇಲಿಯನ್ನು ಗಬಕ್ಕನೆ ಕಚ್ಚಿಕೊಂಡು ಓಡಿತು. ಹುಡುಗಿ ಆ ಮನೆ ಸಾಹುಕಾರನ ಮಗಳು ಅವಳಿಗೆ ಹಣದ ಲಕ್ಷ್ಯವಿರಲಿಲ್ಲ ಒಂದು ರೂಪಾಯಿ ತಂದು ಕೊಟ್ಟಳು ಹುಡುಗನಿಗೆ. ಬುದ್ಧ ಸಂತೋಷದಿಂದ ಆ ಒಂದು ರೂಪಾಯಿಯನ್ನು ತೆಗೆದುಕೊಂಡು ಹೋಗಿ ಪೇಟೆಯಲ್ಲಿ ಕಡಲೆಕಾಯಿ ಯನ್ನು ಕೊಂಡುಕೊಂಡ. ಒಂದು ಶಾಲೆಯ ಬಳಿ ಕುಳಿತು ಮಾರಿದ. ಆದರಿಂದ ಎರಡು ರೊಪಾಯಿ ಬಂದಿತು. ಒಂದು ರೂಪಾಯಿ ಲಾಭ ಬಂದಂತಾ ಯಿತು.

ಬುದ್ಧನಿಗೆ ಬಹಳ ಸಂತೋಷವಾಯಿತು. ಸ್ವಲ್ಪ ದುಡ್ಡಿಗೆ ತಿಂಡಿ ತಿಂದು ನೀರು ಕುಡಿದ. ಉಳಿಗಿದ್ಧ ಹಣಕ್ಕೆ ಪೇಟೆಯಲ್ಲಿ ಕಡಲೆ ಕಾಳು ಕೊಂಡು ತಂದ. ಅದನ್ನು ಬೇಯಿಸಿ ಉಸಲಿ ಮಾಡಿದ.

ಕೂಲಿಯ ಜನರು ಓಡಾಡುವ ಕಡೆ ಮಾರಲು ಕುಳಿತ. ಒಂದು ಗಡಿಗೆ ಯಲ್ಲಿ ನೀರು. ಒಂದು ಲೋಟ ಇಟ್ಟುಕೊಂಡ.

ಕೂಲಿಯಾಳುಗಳು ಕಷ್ಟಪಟ್ಟು ದುಡಿದು ಬಂದು ಒಂದಾಣೆ-ಎರಡಾಣೆಗೆ ಉಸಲಿ ಕೊಂಡು ತಿಂದು ನೀರುಕುಡಿದು ತೃಪ್ತಿಯಿಂದ ಹೋದರು.

ಈ ದಿನವೂ ಬುದ್ಧನಿಗೆ ತನ್ನ ಬಂಡವಾಳಕ್ಕಿಂತ ಎರಡರಷ್ಟು ಲಾಭ ಬಂತು. ಹೀಗೆಯೇ ಪ್ರತಿದಿನ ಕಡಲೆ ಉಸಲಿ, ಅಥವಾ ಹೆಸರು ಕಾಳು, ಹೀಗೆ ಮಾಡಿ ಮಾರತೊಡಗಿದ.

ಆ ಬಡ ಜನರಿಗೆ ಬೇರೆ ಕಡೆಗಿಂತಲೂ ಬುದ್ಧನು ಧಾರಾಳವಾಗಿ ಕೊಡು ತ್ತಿದ್ದುದರಿಂದ ಅವರು ತಿಂದು ತೃಪ್ತಿಯಿಂದ "ಚೆನ್ನಾಗಿ ಬದುಕು, ಮಗನೇ" ಎಂದು ಹರಿಸಿಹೋಗುತ್ತಿದ್ದರು.

ಕೈಯಲ್ಲಿ ಸ್ವಲ್ಪ ಕಾಸು ಕೂಡಿದ ಮೇಲೆ ಅದೇ ಸ್ಥಳದಲ್ಲಿ ಒಂದು ಸಣ್ಣ


ಗುಡಿಸಲು ಕಟ್ಟಿಕೊಂಡ. ಬಡವರನ್ನು ಕಂಡರೆ ಬಹಳ ದಯೆ ಬುದ್ಧನಿಗೆ. ತನಗೆ ಹೆಚ್ಚು ಲಾಭ ಬಂದಾಗ ಬಡಜನರಿಗೆ ಹೆಚ್ಚು ಹೆಚ್ಚು ಉಸಲಿ ಕೊಟ್ಟು ಬಿಡುತ್ತಿದ್ದ.

ಅವನ ಉದಾರ ಸ್ವಭಾವದಿಂದ ಬುದ್ಧ ಬಡವರ ಬಂದುವಾದ, ಅವರೆಲ್ಲರ ಅಚ್ಚು ಮೆಚ್ಚಿನ ಗೆಳೆಯು ನಾದ. ಈಗ ಉಸಲಿ ಜೊತೆಗೆ ಇಡ್ಲಿ, ಚಹಾ, ಕಾಫಿ ಎಲ್ಲಾ ತಯಾರಿಸುತ್ತಿದ್ದ.

ಅವನ ನಯ-ವಿನಯ ಬಂದವರನ್ನು ಆದರಿಸುವ ರೀತಿ ಇವೆಲ್ಲಾ ನೋಡಿ ಅನೇಕ ಹಣವಂತರೂ ಅವನ ಚಹಾ ಅಂಗಡಿಗೆ ಬಂದು ಇಡ್ಲಿ, ಉಸಲಿ, ತಿಂದು ಹಣಕೊಟ್ಟು ಹೋಗುತ್ತಿದ್ದರು.

ಅವರಲ್ಲಿ ದಾಕ್ಷಿಣ್ಯವಿಲ್ಲದೆ ಹಣ ವಸೂಲಿಮಾಡಿಕೊಳ್ಳುತ್ತಿದ್ದ ಅದನ್ನು ಬಡವರಿಗಾಗಿ ಉಪಯೋಗಿಸುತ್ತಿದ್ದ. ಇವನೂ ಹಣವಂತನಾದ, ಕೂಲಿ ಯಾಳುಗಳು ಬುದ್ಧನಿಗಾಗಿ ಏನು ಮಾಡಲೂ ಸಿದ್ಧರಿದ್ದರು. ಅವರೆಲ್ಲರೂ ಸೇರಿ ಆ ಗುಡಿಸಲನ್ನು ಕಿತ್ತು ಹಾಕಿ ಒಂದು ದೊಡ್ಡದಾದ ಬಂಗಲೆಯನ್ನೇ ಕಟ್ಟಿ ಕೊಟ್ಟರು.

ಬುದ್ಧನು ತನ್ನ ಹಿಂದಿನ ಪರಿಸ್ಥಿತಿಯನ್ನು ಮರೆಯಲಿಲ್ಲ ತನ್ನ ಶ್ರೇಯಸ್ಸಿಗೆ ಕ ರಣನಾದ ಆ ಮನೆ ಯಜಮಾನ್ನ, ಸತ್ತಿಲಿಯ ಬಂಡವಾಳವನ್ನು ಹಾಕಿಕೊಟ್ಟ ಮಹಾನುಭಾವ. ಸತ್ತಿಲಿಯೇ ತನ್ನ ಅದೃಷ್ಟ ದೇವತೆ, ಎಂದು ಆ ದೊಡ್ಡ ಮನೆಯ ಮೇಲ್ಭಾಗದಲ್ಲಿ ಚಿನ್ನದ ಇಲಿಯ ವಿಗ್ರಹವನ್ನು ಇಡಿಸಿದ. ಮತ್ತು ಆ ಬಂಗಲೆಗೆ "ಸತ್ತಿಲಿ ಮಹಲ್" ಎಂದು ಹೆಸರಿಟ್ಟ.



ಸತ್ತಿಲಿ ಮಹಲ್

ದಿನ ಕ್ರಮೇಣ ಬುದ್ಧ ಆ ಊರಿನಲ್ಲಿ ಗಣ್ಯ ವ್ಯಕ್ತಿಯಾದ. ಸಿರಿವಂತರು ಅನೇಕ ಸಮಾರಂಭಗಳಿಗೆ ಬುದ್ಧನನ್ನು ಆಹ್ವಾನಿಸುತ್ತಿದ್ದರು. ಸುಂದರ ಯುವಕನೂ ಮತ್ತು ಹಣವಂತನೂ ಆದ ಬುದ್ಧನಿಗೆ ಹೆಣ್ಣು ಕೊಡಲು ಜನ ನಾನು ತಾನೆಂದು ಮುಂದೆ ಬಂದರು.

ಆದರೆ ಬುದ್ಧ ಯಾರನ್ನೂ ಒಪ್ಪಲಿಲ್ಲ. ತನಗೆ ಒಂದು ರೂಪಾಯಿ ಕೊಟ್ಟು ಸತ್ತಿಲಿಯನ್ನು ಕೊಂಡು ಕೊಂಡ ಆ ಬಾಲಕಿ ಈಗ ಹದಿನೆಂಟು ವರ್ಷ ಪ್ರಾಯದ ಸುಂದರಿಯಾಗಿ ಬೆಳೆದಿದ್ದಳು ತನ್ನ ಅದೃಷ್ಟಕ್ಕೆ ಕಾರಣಳಾದ ಆ ಹುಡಿಗಿಯನ್ನೇ ಮದುವೆಯಾಗಬೇಕೆಂದು ಇವನು ನಿಶ್ಚಯಿಸಿದ್ದ.

ಒಂದು ದಿನ ಇವನು ಉತ್ತಮವಾದ ಉಡುಪನ್ನು ಧರಿಸಿ ಒಂದು ಬೆಳ್ಳಿಯ ತಟ್ಟೆಯ ತುಂಬ ಉಡುಗೊರೆ, ನಾಣ್ಯಗಳನ್ನು ಇಟ್ಟುಕೊಂಡು ತನ್ನ ಕಾರಿನಲ್ಲಿ ಅವರ ಮನೆಗೆ ಹೋದ.

ಈ ಗಣ್ಯ ವ್ಯಕ್ತಿಯನ್ನು ಮನೆಯಾತ ಗೌರವದಿಂದ ಬರಮಾಡಿಕೊಂಡ,

ನಂತರ ಬುದ್ಧನು ವಿನಯದಿಂದ ''ಈ ಕಾಣಿಕೆಯನ್ನು ತಾವು ಸ್ವೀಕರಿಸಬೇಕು" ಎಂದು ತಟ್ಟೆಯನ್ನು ಕೊಟ್ಟ.

ಮನೆಯ ಸಾಹುಕಾರ ಆಶ್ಚರ್ಯದಿಂದ ತಾವು ಸತ್ತಿಲಿ ಮಹಲ್ ಸಾಹುಕಾರರಲ್ಲವೆ ? ಎಂದು ಕೇಳಿದ,

ಬುದ್ಧ ''ಹೌದು" ಎಂದ

ತಮ್ಮನ್ನು ನಾನೇ ನಮ್ಮ ಮನೆಗೆ ಕರೆಸ ಬೇಕೆಂದಿದ್ದೆ. ತಾವೇ ಬಂದಿರಿ, ಈ ಕಾಣಿಕೆ ಏನು ? ಎಂದು ಕೇಳಿದ

ಆ ವೇಳೆಗೆ ಇವರು ಕುಳಿತು ಮಾತನಾಡುತ್ತಿದ್ದ ಸ್ಥಳಕ್ಕೆ ಮನೆಯವರೆಲ್ಲಾ ಬಂದರು, ಆ ಹುಡಿಗಿಯೂ ಬಂದು ಈ ಯುವಕನನ್ನು ನೋಡಿ ಈ ಸುಂದರ ಯುವಕ ಯಾರೋ ? ಎಂದು ಯೋಚಿಸಿದಳು

ಬುದ್ಧ ''ಈ ಎಲ್ಲಾ ನನ್ನ ಐಶ್ವರ್ಯಕ್ಕೆಕಾರಣ ನಿಮ್ಮ ಮಗಳು ಬಾಲಕಿಯಾಗಿದ್ದಾಗ ನಾನು ತಂದಿದ್ದ ಸತ್ತಿಲಿ ಕೊಂಡು ಕೊಂಡು ಒಂದು ರೂಪಾಯಿ ಕೊಟ್ಟಿದ್ದೇ ಕಾರಣ" ಎಂದ

ಅಲ್ಲಿಯೇ ನಿಂತಿದ್ದ ಆ ರೂಪರಾಣಿ ಸಂಕೋಚದಿಂದ ತಲೆಎತ್ತಿ ಯುವಕನನ್ನು ಸರಿಯಾಗಿ ನೋಡಿದಳು. ಅವಳಿಗೆ ಸ್ವಲ್ಪವೂ ಗುರುತು ಸಿಕ್ಕಲಿಲ್ಲ

ಆಗ ಬುದ್ಧ ಆ ದಿನ ಸತ್ತಿಲಿ ಮಾರಲು ಬಂದಿದ್ದ ಬಡ ಹುಡುಗ ನಾನೇ ಎಂದ.

ಆಗ ಅವಳಿಗೆ ಜ್ಞಾಪಕ ಬಂತು ತನ್ನಬೆಕ್ಕಿಗಾಗಿ ಸತ್ತಿಲಿ ತೆಗೆದುಕೊಂಡದ್ದು. ಅವಳ ತಂದೆಗೆ ಆ ಹುಡುಗನ ನಿಯತ್ತು ಘನತೆ ಕಂಡು ತುಂಬಾ ಸಂತೋಷವಾಯಿತು ತನ್ನ ಒಬ್ಬಳೇ ಮಗಳನ್ನು ಬುದ್ಧನಿಗೆ ಕೊಟ್ಟು ಅದ್ದೂರಿಯಿಂದ ಮದುವೆ ಮಾಡಿದ ಮಕ್ಕಳೇ ಮನುಷ್ಯ ಕಷ್ಟಪಟ್ಟು ದುಡಿದರೆ ಮುಂದು ವರಿಯುತ್ತಾನೆ. ದುಡಿಮೆಯೇ ದೇವರು.

## ಸಿಕ್ಕಿದ-ನಿಧಿ

ಚನ್ನಯ್ಯ ರೈತ. ಆವನು ನಾಲ್ಕು ಐದು ಎಕರೆ ಹೊಲವನ್ನಿಟ್ಟುಕೊಂಡು

ಬೇಸಾಯ ಮಾಡುತ್ತಿದ್ದ. ಅವನ ಹೊಲದ ಪಕ್ಕದ ಜಮೀನು ನಂಜಪ್ಪನದು. ಇಬ್ಬರೂ ಒಂದೇ ಹಳ್ಳಿಯವರು ಇವರು ನೆರೆಹೊರೆಯ ರೈತರು. ಒಬ್ಬರಿಗೊಬ್ಬರು ಕಷ್ಟ-ಸುಖದಲ್ಲಿ ಸಹಾಯಕರಾಗಿ ಅನ್ಯೋನ್ಯವಾಗಿ ಬಾಳುತ್ತಿದ್ದರು.

ಕೆಲವು ಕಾಲದ ನಂತರ ಚೆನ್ನಯ್ಯನಿಗೆ ಸಂಸಾರದಲ್ಲಿ ಏನೇನೋ ತೊಂದರೆಯುಂಟಾಗಿ ಹಣದ ಮುಗ್ಗಟ್ಟು ಬಂತು. ಆಗ ಅವನು ನಂಜಪ್ಪನೊಂದಿಗೆ ಆಲೋಚನೆ ಮಾಡಿದ. "ನಂಜಪ್ಪಾ" ನಾನು ಒಂದೆರಡು ಎಕರೆ ಹೊಲವನ್ನಂತೂ ಮಾರಲೇ ಬೇಕು. ಬೇರೆಯವರಿಗೆ ಮಾರುವುದಕ್ಕೆ ಮನಸ್ಸಾಗುವುದಿಲ್ಲ. ಎರಡು ಎಕರೆ ನೀನೇ ಕೊಂಡು ಕೊಂಡುಬಿಡು'' ಎಂದು ಹೇಳಿದ

ನಂಜಪ್ಪನಿಗೂ ಅದು ಸರಿ ಎನ್ನಿಸಿತು. "ನೀನು ಹೇಳುವುದು ಸರಿ ಚನ್ನಯ್ಯಾ : ನಮ್ಮಿಬ್ಬರ ಮಧ್ಯೆ ಬೇರೆಯವರು ಬಂದು ಏಕೆ ಸೇರಿಕೊಳ್ಳಬೇಕು? ನಾನೇ ಹಣ ಜೊತೆಮಾಡಿ ಕೊಡುತ್ತೇನೆ ಖರೀದಿ ಮಾಡಿಬಿಡು'' ಎಂದು ಹೇಳಿದ.


ಸರಿ, ನಂಜಪ್ಪ ಚನ್ನಯ್ಯನ ಜಮೀನನ್ನು ಕೊಂಡುಕೊಂಡದ್ದಾಯಿತು. ಜಮೀನನ್ನು ಉತ್ತು ಬಿತ್ತಿ ಬೇಸಾಯುಮಾಡತೊಡಗಿದ ಹೀಗೆಯೇ ಒಂದುಸಲ ನೇಗಿಲಿನಿಂದ ಭೂಮಿಯನ್ನು ಉಳುತ್ತಿದ್ದ ನಂಜಪ್ಪ, ನೇಗಿಲಿಗೆ ಏನೋ ಗಟ್ಟಿ ಪದಾರ್ಥ ತಡೆದಂತಾಯಿತು

ಅಲ್ಲಿ ಹಾರೆಕೋಲಿನಿಂದ ಅಗೆದು ನೋಡಿದ ಅದೊಂದು ತಾಂಮ್ರದ ಕೊಡ. ಅದನ್ನು ಮೇಲಕ್ಕೆ ತೆಗೆದು ನೋಡುತ್ತಾನೆ ಆದರ ತುಂಬಾ ಚಿನ್ನದ ನಾಣ್ಯ ಅವನ ಕಣ್ಣನ್ನೇ ನಂಬಲಾರದವನಾದ

ಕೂಡಲೇ ಅತ್ತಕಡೆ ಹೊಲದಲ್ಲಿ ಕಳೆ ಆರಿಸುತ್ತಿದ್ದ ಚನ್ನಯ್ಯನನ್ನು ಕೂಗಿ ಕರೆದ ನಂಜಪ್ಪ.

ಚನ್ನಯ್ಯ ಏನಾಯಿತೋ ನಂಜಪ್ಪನಿಗೆ? ಎಂದು ಗಾಬರಿಯಿಂದ ಓಡಿ ಬಂದ

ನಂಜಪ್ಪ ಖುಷಿಯಿಂದ "ಚನ್ನಯ್ಯಾ ! ಇದೋನೋಡು ನಿನ್ನ ಹೊಲದಲ್ಲಿ ನಿಧಿ ಸಿಕ್ಕಿದೆ. ಎಂದು ನಾಣ್ಯ ತುಂಬಿದ ಕೊಡವನ್ನು ತೋರಿಸಿದ.



ನಂಜಪ್ಪನ ಕೈಯ್ಯಲ್ಲಿ ನಾಣ್ಯದಕೊಡ

ಚನ್ನಯ್ಯನಿಗೆ ಅದನ್ನು ನೋಡಿ ಒಂದು ಘಳಿಗೆ ಧಿಗ್ಭ್ರಮೆ ಯುಂಟಾಯಿತು. ಸ್ವಲ್ಪ ಹೊತ್ತಿನ ನಂತರ " ನಂಜಪ್ಪಾ । ಸಂತೋಷ ಈಗ ಇದು ನಿನ್ನ ಹೊಲವೇ ಆದ್ದರಿಂದ ಆ ಸ್ವತ್ತು ನಿನ್ನದು ತೆಗೆದುಕೊಂಡು ಹೋಗಿ ಸುಖವಾಗಿ ಬದುಕು" ಎಂದ

ಆದರೆ ನಂಜಪ್ಪ ಅದಕ್ಕೆ ಒಪ್ಪಲಿಲ್ಲ " ಚನ್ನಯ್ಯ !" ಹೊಲ ನನ್ನದಾಗಿರಬಹುದು ಸರಿ ಆದರೆ ಕಷ್ಟಪಟ್ಟು ಕೂಡಿಟ್ಟವರು ನಿನ್ನ ಹಿರಿಯರು. ಆದ್ದರಿಂದ ಆ ನಿಧಿ ನಿನಗೆ ಸೇರ ಬೇಕಾದ್ದು ನೀನೇ ತೆಗೆದುಕೊಂಡು ಹೋಗು ಎಂದು ನಂಜಪ್ಪ ಹೇಳಿದ

ಹೀಗೆ ಇಬ್ಬರಿಗೂ ಸ್ವಲ್ಪಹೊತ್ತು ಚರ್ಚೆಯಾಯಿತು. ಸಿಕ್ಕಿದ್ದನ್ನು ದಕ್ಕಿಸಿಕೊಂಡು ಓಡೋಣ ಎಂಬ ಬುದ್ಧಿ ಇಬ್ಬರಿಗೂ ಇರಲಿಲ್ಲ. ಆ ಸ್ವತ್ತಿಗಿಂತ ಧರ್ಮ ಮುಖ್ಯ ಎಂದು ನಂಬಿ ಯಾರೊಬ್ಬರೂ ಆ ನಿಧಿಯನ್ನು ತೆಗೆದುಕೊಳ್ಳಲು ಹಿಂಜರಿದರು.

ನ್ಯಾಯುವಾಗಿ ನಿನ್ನ ಹಿರಿಯುರಸ್ವತ್ತು ನಿನಗೇ ಸೇರಬೇಕಾದ್ದು ಎಂದು ನಂಜಪ್ಪನ ವಾದ.

ಜಮೀನನ್ನು ಮಾರಿದ ಮೇಲೇ ಅದರಲ್ಲಿರುವ ನಿಧಿ, ನಿಕ್ಷೇಪ ಸಕಲಕ್ಕೂ ನೀನೇ ಒಡೆಯು ನಿನಗೇ ಅದು ಸೇರತಕ್ಕದ್ದು ಎಂದು ಚನ್ನಯ್ಯ

ಇದರ ನ್ಯಾಯ ತೀರ್ಮಾನಕ್ಕಾಗಿ ಇಬ್ಬರೂ ನಾಣ್ಯದ ಕೊಡವನ್ನೆತ್ತಿ ಕೊಂಡು ನ್ಯಾಯಾದೀಶರ ಬಳಿಗೆ ಬಂದರು.

ನ್ಯಾಯಾಧೀಶರು ಇವರ ದೂರು ಏನು ? ಎಂದು ಕೇಳಿ ತಿಳಿದ ಮೇಲೆ ಆಶ್ಚರ್ಯಪಟ್ಟರು. ''ಹಣಕ್ಕೂ ಸ್ವತ್ತಿಗೂ ಬಡಿದಾಡುವವರು ಪ್ರಪಂಚದಲ್ಲಿ ಬೇಕಾದಷ್ಟು ಜನರಿದ್ದಾರೆ ಆದರೆ ಇಂತಹ ಅಪಾರ ನಿಧಿಯು ನನ್ನದಲ್ಲ !.... ನನ್ನದಲ್ಲ ಎಂದು ಹೇಳುತ್ತಿದ್ದೀರಿ. ನಿಮ್ಮಲ್ಲಿ ಧರ್ಮವೇ ಮೂರ್ತಿವತ್ತಾಗಿ ನಿಂತಂತಿದೆ ನಿಮಗೆ ನ್ಯಾಯ ತೀರ್ಮಾನ ಹೇಗೆ ಮಾಡಲಿ ಎಂದು ನನಗೇ ತೋಚ ದಾಗಿದೆ. ಇರಲಿ, ''ನಂಜಪ್ಪಾ ನಿನಗೆ ಎಷ್ಟು ಜನ ಮಕ್ಕಳು ? ಎಂದು ಕೇಳಿದರು, ನ್ಯಾಯಾಧೀಶರು

ನಂಜಪ್ಪ ವಿನಯದಿಂದ ಸ್ವಾಮಿ : ನನಗೆ ಇಬ್ಬರೇ ಮಕ್ಕಳು ಈಗ ಮಗ ದೊಡ್ಡವನು ಅವನು ಬೇಸಾಯ ಮಾಡುತ್ತಾಇದಾನೆ ಮಗಳು ಮದುವೆ ವಯುಸ್ಸಿನವಳು. ಎಂದು ಹೇಳಿದ.

ಚನ್ನಯ್ಯಾ ! ನಿನಗೆ ಎಷ್ಟು ಜನ ಮಕ್ಕಳು ? ಎಂದು ಕೇಳಿದರು

ಸ್ವಾಮಿ ! ನನಗೆ ಆರುಜನ ಮಕ್ಕಳು ಎಲ್ಲಾ ದೊಡ್ಡ ಮಕ್ಕಳೇ ಯಾರಿಗೂ ಇನ್ನೂ ಮದುವೆ ಆಗಿಲ್ಲ ಸ್ವಾಮಿ, ಎಂದ

ಸರಿ....ನಂಜಪ್ಪಾ ! ನಿನ್ನ ಮಗಳನ್ನು ಚೆನ್ನಯ್ಯನ ಮಗನಿಗೆ ಕೊಟ್ಟು ಮದುವೆ ಮಾಡು. ಹೆಣ್ಣಿಗೆ ಬಳುವಳಿಯಾಗಿ ನಿನಗೆ ಸಿಕ್ಕಿರುವ ನಿಧಿಯಲ್ಲಿ ಅರ್ಧ ಭಾಗವನ್ನು ಕೊಟ್ಟು ಗಂಡನ ಮನೆಗೆ ಕಳುಹಿಸು. ಆಗ ಯಾರಸ್ವತ್ತು ಯಾರೂ ತೆಗೆದುಕೊಂಡಂತೆ ಆಗುವುದಿಲ್ಲ. ಎಂದು ನ್ಯಾಯಾಧೀಶರು ತೀರ್ಮಾನ ಕೊಟ್ಟರು.

ಅದನ್ನು ಕೇಳಿ ಇಬ್ಬರಿಗೂ ಸಂತೋಷವಾಯಿತು. ಹಾಗೆಯೇ ಮಾಡಿದರು

ಮಕ್ಕಳೇ : ಪ್ರಪಂಚದಲ್ಲಿ ಸ್ವತ್ತಿಗಾಗಿ ಹೊಡೆದಾಡಿ ಮಡಿಯುವವರೇ ಹೆಚ್ಚು. ಚನ್ನಯ್ಯ-ನಂಜಪ್ಪನಂತೆ ಧರ್ಮದಿಂದ ಬಾಳುವವರಿಗೆ ದೇವರು ಒಳ್ಳೆಯದನ್ನೇ ಮಾಡುತ್ತಾನೆ. ಯಾರದೋ ಸ್ವತ್ತು ಸಿಕ್ಕಿತೆಂದು ದಕ್ಕಿಸಿ ಕೊಳ್ಳುವವರು ಹೀನ ಮಾನವರು.

# ಪುಣ್ಯದ ತೂಕ

ಧಾರಾ ನಗರಿಯಲ್ಲಿ ಭೋಜರಾಜ ರಾಜ್ಯವಾಳುತ್ತಿದ್ದ, ಅವನು ಕವಿಗಳಿಗೂ ವಿದ್ವಾಂಸರಿಗೂ ಆಶ್ರಯದಾತನಾಗಿದ್ದ. ಬೇಡಿದವರಿಗೆ ನೀಡುವುದರಲ್ಲಿ ಅವನು ಎತ್ತಿದ ಕೈ, ಬಡ ಬಗ್ಗರಿಗೆ ಧಾರಾಳವಾಗಿ ದಾನಮಾಡುತ್ತಿದ್ದ "ಇವನ ಕೀರ್ತಿ ಎಲ್ಲೆಲ್ಲಿಯೂ ಹರಡಿತು.

ಧಾರಾ ನಾಗರಿಯಿಂದ 10-12 ಮೈಲಿ ದೂರದಲ್ಲಿ ಕೇಸರಿ, ಎಂಬ! ದೊಂದು ಗ್ರಾಮ ಅಲ್ಲಿ ದೇವೇಶನೆಂಬ ಒಬ್ಬ ಬಡ ಬ್ರಾಹ್ಮಣನಿದ್ದ. ಅವನು ಭಿಕ್ಷೆಬೇಡಿ ತನ್ನ ಕುಟುಂಬವನ್ನು ಕಾಪಾಡುತ್ತಿದ್ದ.

ಅವನಿಗೆ ಮಹದೇವಿ ಎಂಬ ಒಬ್ಬ ಮಗಳಿದ್ದಳು. ಅವಳಿಗೆ ಮದುವೆಯ ವಯಸ್ಸಾಗಿದ್ದಿತ್ತು. ಬಡವನಾದ ದೇವೇಶ ಹೇಗೆ ಮದುವೆ ಮಾಡಲು ಸಾಧ್ಯ! ವರ ಸಿಕ್ಕಿದರೂ ವರೋಪ ಚಾರಕ್ಕೆ ಮದುವೆಯ ಖರ್ಚಿಗೆ ಹಣ ಬೇಕಲ್ಲಾ! ಇದೇ ಚಿಂತೆಯಿಂದ ದೇವೇಶ ಕೊರಗುತ್ತಿದ್ದ.

ಒಂದು ದಿನ ಅವನ ಹೆಂಡತಿ ಪಾರ್ವತಿ ಗಂಡನಿಗೆ ಒಂದು ಸಲಹೆ ಕೊಟ್ಟಳು, "ನೀವು ಧಾರಾನಗರಿಗೆ ಹೋಗಿ ಭೋಜ ರಾಜನನ್ನು ಕಾಣಿರಿ ಕನ್ಯಾದಾನಕ್ಕೆ ಧನ ಸಹಾಯ ಮಾಡುವಂತೆ ಕೇಳಿಕೊಳ್ಳಿ. ರಾಜ ಮಹಾ ಉದಾರಿ. ಬೇಡಿದವರನ್ನು ಬರಿಯ ಕೈಲಿ ಕಳುಹಿಸುವುದಿಲ್ಲ ಎಂದು ಕೇಳಿದ್ದೇನೆ, ನಾನು, ನೀವು ಹೋಗಿಬನ್ನಿ, ಈಸಲ ಹೇಗಾದರೂ ಮಹದೇವಿಯ ಮದುವೆ ನಾಗಬೇಕು ಎಂದಳು.

ಹೆಂಡತಿಯ ಸಲಹೆ ಸೂಕ್ತ ಎನ್ನಿಸಿತು, ದೇವೇಶನಿಗೆ. ಒಂದು ದಿನ ಬೆಳಗ್ಗೆಯೇ ಧಾರಾನಗರಿಗೆ ಹೊರಟ. ಆಗಿನಕಾಲ ಕಾಲು ನಡಗೆಯಲ್ಲಿಯೇ ಹೋಗಬೇಕಾಗಿತ್ತು ಆದ್ದರಿಂದ ಹಸಿವಾದಾಗ ತಿನ್ನಲು ದೊಡ್ಡದಾಗಿ ಎರಡು ರೊಟ್ಟಿಮಾಡಿ ಬುತ್ತಿಕಟ್ಟಿ ಗಂಡನಿಗೆ ಕೊಟ್ಟಳು ಪಾರ್ವತಿ.

ದೇವೇಶ ಬಿಸಿಲಿನಲ್ಲಿಯೂ ಒಂದೇ ಸಮ ದಾರಿ ನಡೆದ. ಮಧ್ಯಾಹ್ನ ಹನ್ನೆರಡುಗಂಟೆ ಸಮಯ ವಾಯಿತು, ಹೊಟ್ಟೆ ಹಸಿವಾಯಿತು ಹೆಂಡತಿ ಕೊಟ್ಟಿದ್ದ ಬುತ್ತಿ ಹೆಗಲಮೇಲೆ ಇತ್ತು, ನೀರು ಸಿಕ್ಕಿದಕಡೆ ತಿನ್ನೋಣವೆಂದು ಮುಂದೆ-ಮುಂದೆ ನಡೆದ.

ಸ್ವಲ್ಪ ದೂರದಲ್ಲಿ ಒಂದು ದೊಡ್ಡ ಆಲದಮರ ಇತ್ತು. ಅದರ ಬಳಿ ಒಂದು ತಿಳಿನೀರಿನ ಕೊಳಕಂಡಿತು ಬ್ರಾಹ್ಮಣ ಕೊಳದಲ್ಲಿ ಕೈಕಾಲು ಮುಖ ತೊಳೆದು ಕೊಂಡು ಮೆಟ್ಟಿಲಮೇಲೆ ಕುಳಿತು ಬುತ್ತಿ ಬಿಚ್ಚಿದ. ಇನ್ನೇನು ತಿನ್ನಬೇಕು ಎನ್ನುವಷ್ಟರಲ್ಲಿ ಒಂದು ಬಡಕಲಾದ ನಾಯಿ ಅವನ ಮುಂದೆ ಕುಳಿತು ಬಾಲ ವಳ್ಳಾಡಿಸಿತು.

ದೇವೇಶ ದಯೆಯಿಂದ ಅದಕ್ಕೆ ಒಂದು ಚೂರು ರೊಟ್ಟಿ ಹಾಕಿದ, ನಾಯಿ ಚೂರನ್ನು ಗಬಕ್,–ಎಂದು ಒಂದೇ ಸಲಕ್ಕೆ ನುಂಗಿಬಿಟ್ಟಿತು ದೇವೇಶನಿಗೆ ಕನಿಕರ ವಾಯಿತು. "ಛೆ—ತನಗಿಂತ ನಾಯಿ ತುಂಬಾಹಸಿದಿದೆ ಅದು ಮೊದಲು ತಿನ್ನಲಿ, ಎಂದು ರೊಟ್ಟಿಯನ್ನು ಚೂರು ಮಾಡಿ ಹಾಕುತ್ತಲೇ ಇದ್ದ. ನಾಯಿ ಗಬ ಗಬನೆ ತಿನ್ನುತ್ತಲೇ ಇತ್ತು. ಅದರ ಆತುರವನ್ನು ನೋಡಿ ಬ್ರಾಹ್ಮಣ ಎರಡು ರೊಟ್ಟಿಯನ್ನೂ ಚೂರುಮಾಡಿ ಅದಕ್ಕೇ ಹಾಕಿದ. ಅದು ತಿಂದು ತೃಪ್ತಿ ಹೊಂದಿತು.

ಬ್ರಾಹ್ಮಣ ಹಸಿವಿನಿಂದ ಹಾಗೆಯೇ ಕೊಳದಲ್ಲಿ ಮೂರು ಬೊಗಸೆ ನೀರು ಕುಡಿದು ಮುಂದೆ ಪ್ರಯಾಣ ಮಾಡಿದ ರಾತ್ರಿಯ ವೇಳೆಗೆ ಧಾರಾ ನಗರಿಯನ್ನು ಸೇರಿದ. ರಾತ್ರಿ ಒಂದು ಛತ್ರದಲ್ಲಿ ಮಲಗಿದ್ದು ಬೆಳಗಾದ ನಂತರ ಸ್ನಾನಾದಿ ಗಳನ್ನು ಪೂರೈಸಿ ರಾಜಸಭೆಗೆ ಹೋದ

ಭೋಜರಾಜ ಸಿಂಹಾಸನದಲ್ಲಿ ಕುಳಿತಿದ್ದ. ಬ್ರಾಹ್ಮಣ ರಾಜನಿಗೆ ಕೈ ಮುಗಿದು "ಮಹಾ ರಾಜಾ, ನಾನು ಬಹಳ ಬಡವ ಕನ್ಯಾದಾನ ಮಾಡ ಬೇಕಾಗಿದೆ, ಅದಕ್ಕೆ ತಮ್ಮಿಂದ ಧನಸಹಾಯ ಬೇಡಲು ಬಂದೆ, ಎಂದ.

ಅದಕ್ಕೆ ರಾಜನು ವಿಪ್ರೋತ್ತಮಾ ನೀನೇನು ಕವಿಯೋ ? ಹಾಗಿದ್ದರೆ ನಿನ್ನ ಕವಿತಾ ಕೌಶಲ್ಯವನ್ನು ತೋರಿಸು ಧನ ಸಹಾಯ ಮಾಡುತ್ತೇನೆ, ಎಂದ

ಬ್ರಾಹ್ಮಣನು ತಲೆ ತಗ್ಗಿಸಿ ಇಲ್ಲ ಮಹಾಸ್ವಾಮಿ : ನಾನು ವಿದ್ಯಾವಂತ ನಲ್ಲ ಎಂದ.

ಹಾಗಾದರೆ ಸಂಗೀತಗಾರನೋ ? ಹಾಗಿದ್ದರೆ ಹಾಡು,, ಎಂದ ರಾಜ.

ನನಗೆ ಸಂಗೀತ ಬಾರದು ಮಹಾಸ್ವಾಮಿ,, ಎಂದ ಬ್ರಾಹ್ಮಣ.

ಹೋಗಲಿ, ಯಾವುದಾದರೂ ಕಲೆಗಾರ ನಾಗಿದ್ದರೆ ನಿನ್ನ ಕಲೆಯನ್ನು ತೋರಿಸು ಎಂದ ರಾಜ.


ಯಾವುದೂ ನನಗೆ ಬಾರದು ನಾನು ಭಿಕ್ಷೆಬೇಡಿ ಜೀವಿಸುತ್ತಿದ್ದೇನೆ ಸ್ವಾಮಿ,, ಎಂದ.

ಅದುಹೋಗಲಿ, ನೀನು ಯಾವುದಾದರೂ ಪುಣ್ಯ ಕೆಲಸ ಮಾಡಿದ್ದೀಯಾ ? ಅದಾದರೂ ಹೇಳು ಎಂದ ರಾಜ.

ಬ್ರಾಹ್ಮಣ ಹಾಗೇ ಜ್ಞಾಪಿಸಿಕೊಳ್ಳತೊಡಗಿದ "ನಾನು ಒಂದು ಕೆರೆ ಕಟ್ಟಿಸಿಲ್ಲ, ಅನ್ನದಾನ ಮಾಡಿಲ್ಲ, ವಿದ್ಯಾದಾನ ಮೊದಲೇ ಮಾಡಿಲ್ಲ ಮತ್ತ್ಯಾವ ಪುಣ್ಯ ಕೆಲಸ ನಾನು ಮಾಡಿದ್ದೇನೆ ? ಎಂದು ಚಿಂತಾಕ್ರಾಂತನಾಗಿ "ಸ್ವಾಮಿ ನಾನು ಬಡವ ಯಾವ ಪುಣ್ಯ ಕೆಲಸವನ್ನೂ ಮಾಡಿಲ್ಲ" ಎಂದ

ಭೋಜರಾಜನಿಗೆ ಆ ಬ್ರಾಹ್ಮಣನ ಸತ್ಯ ಸಂಧತೆ ಮೆಚ್ಚಿಕೆಯಾಯಿತು "ಹೋಗಲಿ ಬ್ರಾಹ್ಮಣ ಈ ತಕ್ಕಡಿ ಧರ್ಮವನ್ನು ತೂಗುವ ತಕ್ಕಡಿ. ಇದರಲ್ಲಿ ನಿನ್ನ ಪುಣ್ಯ ಏನಾದರೂ ಇದ್ದರೆ ತೂಗುತ್ತದೆ. ಒಂದು ತುಳಸೀದಳವನ್ನು ಎತ್ತಿ ಆ ತಕ್ಕಡಿಯಲ್ಲಿ ಒಂದುಕಡೆ ಇದು ನಿನ್ನ ಪುಣ್ಯವೆಂದು ಇಡು, ಅದರ ತೂಕಕ್ಕೆ ನಾನು ನಾಣ್ಯವನ್ನು ದಾನವಾಗಿ ಕೊಡುತ್ತೇನೆ,, ಎಂದ ಭೋಜ ರಾಜ.

ಸರಿ ಎಂದ ಬ್ರಾಹ್ಮಣ ಒಂದು ತುಳಸೀದಳವನ್ನು ಎತ್ತಿ ಆ ತಕ್ಕಡಿ ಯಲ್ಲಿಟ್ಟು "ಇದು ನನ್ನ ಪುಣ್ಯದ ತೂಕ ಎಂದ,



ಭೋಜರಾಜನ ಸಭೆ ರಾಜನ ಮುಂದೆ ತಕ್ಕಡಿಯಲ್ಲಿ ಪುಣ್ಯದ ತೂಕ

ರಾಜನು ಕೆಲವು ಚಿನ್ನದ ನಾಣ್ಯಗಳನ್ನು ತರಿಸಿ ತಕ್ಕಡಿಯ ಮತ್ತೊಂದು ಕಡೆಗೆ ಹಾಕಿಸಿದ. ತುಳಸೀದಳದ ತೂಕ ಮೇಲೇರಲಿಲ್ಲ. ರಾಜ ಒಂದು ಥೈಲಿ ಚಿನ್ನದ ನಾಣ್ಯ ತರಿಸಿ ತೂಕಕ್ಕೆ ಹಾಕಿಸಿದ, ಪುಣ್ಯದತೂಕ ಏರಲಿಲ್ಲ. ರಾಜನಿಗೆ ಆಶ್ಚರ್ಯವಾಯಿತು, ತನ್ನ ಕೋಶಾಗಾರದಿಂದ ಹಣದ ರಾಶಿಯನ್ನು ತರಿಸಿ ತೂಕದ ತಕ್ಕಡಿಯಲ್ಲಿಟ್ಟ ಹಣವೇ ಹಗುರ, ಪುಣ್ಯದ ತೂಕ ಜಾಸ್ತಿ.

ರಾಜನು ಚಕಿತನಾಗಿ ಅಪ್ಪಾ ! ಪುಣ್ಯಪುರುಷ ನಾನು ಏನೂ ಪುಣ್ಯ ಕಾರ್ಯವನ್ನೇ ಮಾಡಿಲ್ಲ ಎಂದೆಯಲ್ಲಾ ! ಇದು ಯಾವ ಪುಣ್ಯದ ಫಲವಯ್ಯ ? ದಯವಿಟ್ಟು ತಿಳಿಸು. ನನ್ನ ಭಂಡಾರವೇ ಖಾಲಿಯಾಗುತ್ತಿದೆಯಲ್ಲಾ !,, ಎಂದ

ಬ್ರಾಹ್ಮಣನಿಗೂ ಆಶ್ಚರ್ಯವಾಯಿತು. ಹಾಗೆಯೇ ಜ್ಞಾಪಿಸಿಕೊಂಡ ತಾನು ಹಸಿವಿಂದ ಬಳಲುತ್ತಿರುವುದು ಅರಿವಾಯಿತು.

ಸ್ವಾಮಿ : ನಾನು ನೆನ್ನೆ ದಾರಿ ನಡೆದು ಬರುವಾಗ ದಾರಿಯಲ್ಲಿ ತಿನ್ನಲು ಬುತ್ತಿ ತಂದಿದ್ದೆ. ನಾನು ತುಂಬಾ ಹಸಿದು ತಿನ್ನಲು ತೊಡಗಿದಾಗ ಒಂದು ಬಡಕಲು ನಾಯಿ ಹಸಿವಿನಿಂದ ನನ್ನ ಬಳಿ ಕುಳಿತು ಬಾಲವಳ್ಳಾಡಿಸಿತು. ನನ್ನ ಆಹಾರವನ್ನೆಲ್ಲಾ ಆ ಹಸಿದಿದ್ದ ನಾಯಿಗೆ ಹಾಕಿ ನಾನು ಉಪವಾಸ ಬಂದೆ. ನನಗೆ ತಿಳಿದ ಹಾಗೆ ಇದೊಂದು ಪುಣ್ಯದ ಕೆಲಸ, ಅಷ್ಟೆ, ರಾಜಾ , ಎಂದ.

ಭೋಜ ರಾಜ ಸಂತೋಷದಿಂದ ಬ್ರಾಹ್ಮಣ ನಿನ್ನಿಂದ ಧರ್ಮ ರಹಸ್ಯ ತಿಳಿದುಕೊಂಡತಾಯಿತು. ಬಹಳ ಹಸಿದು ಬಂದ ಒಂದು ಜೀವಿಗೆ ಅನ್ನ ದಾನ ಮಾಡುವುದರಲ್ಲಿ ಎಷ್ಟು ಪುಣ್ಯ ಅಡಗಿದೆ ಎನ್ನುವುದು ಈ ಒಂದು ಧರ್ಮತೂಕದಲ್ಲಿ ತೂಗಿ ತೋರಿಸಿತು.

ಮಹತ್ವವೇನೆಂದರೆ ನೀನು ಹಸಿದಿದ್ದರೂ ತಿನ್ನದೆ ಆ ಪ್ರಾಣಿಗೆ ಇಟ್ಟದ್ದು ಪುಣ್ಯದ ಗಂಟು, ನನ್ನ ಭಂಡಾರವನ್ನೇ ತೂಗಿದರೂ ನಿನ್ನ ಪುಣ್ಯಕ್ಕೆ ಸಮನಾಗ ಲಾರದು. ನಿನಗೆ ಎಷ್ಟು ಚಿನ್ನದ ನಾಣ್ಯ ಬೇಕೋ ತೆಗೆದುಕೊಂಡು ಹೋಗು. ಎಂದ.

ಬ್ರಾಹ್ಮಣನು ಗರ್ವಪಡದೆ ಸಂಕೋಚದಿಂದ ರಾಜಾ : ನಾನು ಮಾಡಿದ ಉದ್ಧಾರ ಅಷ್ಟರಲ್ಲೇ ಇದೆ. ನನಗೆ ಕನ್ಯಾದಾನಕ್ಕೆ ಆಗುವಷ್ಟು ಮಾತ್ರ ಹಣ ಸಾಕು ಎಂದ

ಭೋಜರಾಜ ಸಂತೋಷದಿಂದ ಆವನು ಎತ್ತಿಕೊಂಡು ಹೋಗಲು ಸಾಧ್ಯ ವಿದ್ದಷ್ಟು ಹಣವನ್ನು ಆ ಬ್ರಾಹ್ಮಣನಿಗೆ ಕೊಟ್ಟ.

ಮಕ್ಕಳೇ ನೋಡಿದಿರಾ ? "ಹಸಿದು ಬಂದವರಿಗೆ ಅಶನ ವೀಯುಲು ಬೇಕು" ಎಂಬ ನುಡಿಯಂತೆ ಹಸಿದವರಿಗೆ ಊಟವಿಟ್ಟ ಫಲ ಮಹತ್ತರ ವಾದುದು.

ಪುಣ್ಯಕ್ಕೆ ಹೇಗೆ ಉತ್ತಮ ಫಲವಿದೆಯೋ ಹಾಗೆಯೇ ಪಾಪಕ್ಕೂ ತಕ್ಕ ಶಿಕ್ಷೆ ಇದ್ದೇ ಇರುತ್ತದೆ. ಆದ್ದರಿಂದ ನಮ್ಮ ಕೈಲಾದಷ್ಟು ಒಳ್ಳೆಯ ಕಾರ್ಯ ಗಳನ್ನು ಮಾಡಬೇಕು.

# ಇಂದ್ರ ಪದವಿಯೂ ಬೇಡ

ನಾರದರು ಒಂದು ಬಾರಿ ದೇವಲೋಕದ ದೇವೇಂದ್ರನ ಸಭೆಗೆ ಹೋದರಂತೆ. ದೇವೇಂದ್ರನು ನಾರದರನ್ನು ಗೌರವದಿಂದ ಸ್ವಾಗತಿಸಿ, ಪೀಠವನ್ನು ಕೊಟ್ಟು ಕುಳ್ಳಿರಿಸಿದ.

ನಾರದರು "ದೇವರಾಜಾ ಏನು ವಿಶೇಷ ? ನೀನು ಸೌಖ್ಯವೇ ? ಎಂದು ಕೇಳಿದರು.

ದೇವೇಂದ್ರನು ವ್ಯಸನದಿಂದ "ಏನು ಸೌಖ್ಯ ನಾರದರೇ ? ತಾವು ತ್ರಿಲೋಕ ಸಂಚಾರಿಗಳು. ತಮಗೆ ತಿಳಿಯದ ವಿಷಯವಿಲ್ಲ. ಭೂಲೋಕದಲ್ಲಿ ಯಾರು ತಮ್ಮ ತಪಶ್ಶಕ್ತಿಯಿಂದ ಇಂದ್ರ ಪದವಿಯನ್ನು ಪಡೆದುಕೊಂಡು ಬಿಡುತ್ತಾರೋ; ನನಗೆಲ್ಲಿ ಉಚ್ಚಾಟನೆ ಯಾಗುತ್ತದೆಯೋ ? ಅದೇ ನನಗೆ ಭಯವಾಗುತ್ತಿರುತ್ತದೆ ನಾರದರೇ : ತಾವು ದಯವಿಟ್ಟು ಭೂಲೋಕ ಸಂಚಾರ ಮಾಡಿ ಅಂತಹ ಮಹಾನುಭಾವ ಯಾರಿದ್ದಾರೆಂದು ನನಗೆ ತಿಳಿಸಿ. ಮುಂದೆ ನಾನು ನೋಡಿಕೊಳ್ಳುತ್ತೇನೆ. ಎಂದ.

ನಾರದರು ಗಹಗಹಿಸಿ ನಕ್ಕರು. ದೇವೇಂದ್ರ "ಏಕೆ ನಗುತ್ತೀರಿ ನಾರದರೇ ?" ಎಂದ. ನಾರದರು " ಅಲ್ಲಾ ದೇವೇಂದ್ರ ದೇವತೆಗಳಾದ ನಿಮಗೂ ಕೂಡ ಅಧಿಕಾರದಾಹ, ಪದವಿಗಾಗಿ ಈರ್ಷೆ, ಪಟ್ಟ ಭದ್ರತೆಯ ದುರಾಸೆ ಇರಬೇಕಾದರೆ ಇನ್ನು ಭೂಲೋಕದಲ್ಲಿ ಅಧಿಕಾರಕ್ಕಾಗಿ ಜನ ಬಡಿದಾಡುವುದರಲ್ಲಿ ಅತಿಶಯವೇನು ?" ಎಂದರು.

ನೀವು ಹೇಳುವುದು ನಿಜ ನಾರದರೇ ಕಷ್ಟಪಟ್ಟುಗಳಿಸಿಕೊಂಡ ಒಂದು ಪದವಿಯನ್ನು ಬಿಟ್ಟುಕೊಡಲು ಯಾರೂ ಇಷ್ಟಪಡುವುದಿಲ್ಲ. ಅನೇಕ ಯಜ್ಞಯಾಗಾದಿಗಳನ್ನು ಮಾಡಿ ನಾನು ಈ ಇಂದ್ರ ಪದವಿಯನ್ನು ಪಡೆದಿರುತ್ತೇನೆ. ನನ್ನನ್ನೂ ಮೀರಿಸಿ ಬೇರೊಬ್ಬರು ಸ್ಥಾನಕ್ಕೆ ಬರುವುದು ನನಗೆ ಇಷ್ಟವಿಲ್ಲ. ತಾವು ದಯವಿಟ್ಟು ನನಗಾಗಿ ಭೂಲೋಕದಲ್ಲಿ ಸಂಚಾರಮಾಡಿ ತಿಳಿಸಬೇಕು ಎಂದ.

ನಾರದರು "ಅಂತಹ ಮಹಾತ್ಮ ಎಲ್ಲಿ ಯಾವಸ್ಥಳದಲ್ಲಿ ಇದಾನೆ ? ಎಂದು

ಕಂಡುಹಿಡಿಲಿ ! ದೇವೇಂದ್ರಾ ? ನನಗೆ ಒಳ್ಳೆ ಕೆಲಸವನ್ನು ಅಂಟಿಸಿದೆಯಲ್ಲಾ" ಎಂದರು.

ನೀವೇನೂ ಕಷ್ಟಪಡಬೇಡಿ ನಾರದರೇ ! ವೇದಸಾರನೆಂಬ ವಿಪ್ರೋತ್ತಮನೊಬ್ಬನಿದ್ದಾನೆ ಭೂಲೋಕದಲ್ಲಿ, ಅವನ ಮನೆಯ ಬಾಗಿಲಲಿ ಪಂಜರದಲ್ಲಿ ಒಂದು ಗಿಳಿ ಇದೆ. ಪೂರ್ವ ಜನ್ಮದಲ್ಲಿ ಋಷಿಯಾಗಿದ್ದ ಆ ಗಿಳಿ ಭೂತ, ಭವಿಷ್ಯ ವರ್ತಮಾನ ಕಾಲಗಳ ವಿಷಯವನ್ನೆಲ್ಲಾ ತಿಳಿದಿದೆ. ನೀವು ಅಲ್ಲಿಹೋಗಿ ಆ ಗಿಳಿಯನ್ನು ಕೇಳಿ ಅದು ತಿಳಿಸುತ್ತದೆ. ಎಂದನುದೇವೇಂದ್ರ.

ನಾರಾದರು. "ಸರಿ ಆಗಲಿ ದೇವೇಂದ್ರ ನಾನು ಭೂಲೋಕಕ್ಕೆ ಹೋಗಿ ತಿಳಿದು ಬರುತ್ತೇನೆ" ಎಂದು ಹೇಳಿ ಹೊರಟರು. ತ್ರಿಲೋಕ ಸಂಚಾರಿಗಳಾದ ನಾರದರಿಗೆ ತಿಳಿಯದ ಸ್ಥಳವುಂಟೇ ? ನೇರ ವೇದಸಾರ ವಿಪ್ರನ ಮನೆಬಾಗಿಲಿಗೇ ಬಂದಿಳಿದರು. ಪಂಜರದಲ್ಲಿ ಗಿಣಿ ಇತ್ತು. ನಾರದರನ್ನು ಕಂಡ ಕೂಡಲೇ ಗಿಣಿ ಬನ್ನಿ—ಬನ್ನಿ ನಾರದರೇ :—ನಮಸ್ಕಾರ, ಎಂದಿತು.

ನಾರದರೂ ಸಹ ಭಕ್ತಿಯಿಂದ "ನಮಸ್ಕಾರ ; ಶುಕಋಷಿಯೇ " ನಿನ್ನಿಂದ ಒಂದು ಕೆಲಸವಾಗಬೇಕಲ್ಲಾ ; ಎಂದರು.



ನಾರದರು ಗಿಣಿಯ ಬಳಿ ಮಾತನಾಡುತ್ತಿರುವುದು

ಗಿಣಿಯು ಆಗಲಿ ನಾರದರೇ ಅವೇನು ಹೇಳಿ, ಎಂದಿತು. ''ಈ ಭೂಲೋಕದಲ್ಲಿ ಇಂದ್ರಪದವಿಗೆ ಅರ್ಹನಾದ ಮಹಾತಪಸ್ವಿ ಯಾರು ? ತಿಳಿಸುತ್ತೀಯಾ ಎಂದರು ನಾರದರು.

ನಾರದರೇ ; ತಪಸ್ಸು ಎಂದರೆ ಕಣ್ಮುಚ್ಚಿ ಕುಳಿತು ದೇಹವನ್ನು ದಂಡಿಸಿದರೆ ಮಾತ್ರ ತಪಸ್ಸು ಎಂದು ತಿಳಿದುಕೊಂಡಿರಾ ? ಅದರಿಂದ ಯಾರಿಗೆ ಏನು ಪ್ರಯೋಜನ ವಾದಿತು ? ನಾನೊಬ್ಬ ಮಹಾತ್ಮನನ್ನು ತೋರಿಸುತ್ತೇನೆ. ಸಪ್ತ ಸಮುದ್ರಗಳಿಂದಾಚೆ ಶಾಂತಿನಗರ ವೆಂಬುದೊಂದು ಊರು ಇತ್ತು ಅಲ್ಲಿ ''ಶಾಂತಿ ಧಾಮ" ವೆಂಬ ಆಶ್ರಮವೊಂದಿದೆ. ಅಲ್ಲಿ ಮಧುರಾನಾಥನೆಂಬ ತ್ಯಾಗಿ ಯೊಬ್ಬ ನಿದ್ದಾನೆ. ಅವನನ್ನು ತೋರಿಸುತ್ತೇನೆ ನೀವೇ ಅರ್ಥಮಾಡಿಕೊಳ್ಳಿ" ಎಂದಿತು.

ಕುತೂಹಲರಾದ ನಾರದರು ಸಂತೋಷದಿಂದ ''ಧನ್ಯನಾದೆ ಶುಕ ಋಷಿಯೇ ಆ ಮಹಾತ್ಮನನ್ನು ತೋರಿಸು ಎಂದರು.

ಗಿಣಿಯು ನಾರದರೇ : ನನ್ನನ್ನು ಈ ಬಂಧನದಿಂದ ಬಿಡುಗಡೆ ಮಾಡಿ. ನಾನು ಮುಗಿಲೆತ್ತರಕ್ಕೆ ಹಾರಿ ಸಪ್ತ ಸಮುದ್ರಗಳನ್ನು ದಾಟುತ್ತೇನೆ. ನನ್ನ ಜೊತೆಯಲ್ಲಿಯೇ ನೀವೂ ವ್ಯೋಮ ಮಾರ್ಗವಾಗಿ ಬನ್ನಿ ಎಂದಿತು.

ನಾರದರು ಪಂಜರದ ಬಾಗಿಲನ್ನು ತೆರೆದರು ಗಿಣಿಯು ಕೂಡಲೇ ಮೇಲಕ್ಕೆ ಹಾರಿ "ನನ್ನ ಜೊತೆಯಲ್ಲಿ ಬನ್ನಿ ನಾರದರೇ" ಎಂದು ಹೇಳಿ ಮುಂದೆ ಹಾರಿತು.

ಸಪ್ತ ಸಮುದ್ರಗಳನ್ನು ದಾಟಿದ ನಂತರ ಶಾಂತಿನಗರವು ಸಿಕ್ಕಿತು. ಆಕಾಶ ಮಾರ್ಗದಲ್ಲಿ ದೇವತೆಗಳು ಅಲ್ಲಲ್ಲೇ ನಿಂತು ಮಧುರಾ ನಾಥನ ಸದನಾ ಸೇವೆಯನ್ನು ವೀಕ್ಷಿಸಿ, ಭಾಪುರೇ....ಮಹಾತ್ಮಾ : ನಿನಗೆ ನಮೋ ನಮಃ ಎಂದು ಹೇಳುತ್ತಿದಾರೆ. ನಾರದರ ಕುತೂಹಲ ಇನ್ನೂ ಹೆಚ್ಚಿತು. ದೇವತೆಗಳೂ ಮೆಚ್ಚುವಂತಹ ಏನು ತಪಸ್ಸು ಆತನದು ? ನೋಡೋಣವೆಂದು ಗಿಣಿಯು ಜೊತೆಯಲ್ಲಿಯೇ 'ಶಾಂತಿ ಧಾಮ ಆಶ್ರಮದಲ್ಲಿ ಇಳಿದರು.

ಆಶ್ರಮದ ತುಂಬಾ ಕಣ್ಣಿಲ್ಲದ ಕುರುಡರು, ಕಾಲಿಲ್ಲದ ಕುಂಟರು. ಕುಷ್ಟರೋಗಿಗಳು. ನಡೆಯಲೂ ಶಕ್ತಿಯಿಲ್ಲದ ಅನಾಥ ವೃದ್ಧರು, ಅವರೆಲ್ಲರಿಗೂ

ಮಧುರಾ ನಾಥ ಅಕ್ಕರೆಯಿಂದ ಸೇವೆ ಮಾಡುತ್ತಿದ್ದ. ಆ ದೀನ ದಲಿತರೆಲ್ಲರೂ ಅವನನ್ನು "ದೇವಾ ಎಂದು ಕರೆಯುತ್ತಿದ್ದರು. ದೇವಾ : ನೀರು, ದೇವಾ. ಗಂಜಿ, ದೇವಾ. ನನ್ನನ್ನು ಸ್ವಲ್ಪ ಎತ್ತಿಕುಳ್ಳಿರಿಸು, ಎಂದು ಒಬ್ಬೊಬ್ಬರು ಒಂದೊಂದು ಕೇಳುತ್ತಿದ್ದರೆ ಆಷ್ಟು ಜನರನ್ನೂ ಸಹನೆಯಿಂದ ಉಪಚರಿಸುತ್ತಿದ್ದ. ಅಶಕ್ತರಿಗೆ ಸ್ನಾನಮಾಡಿಸಿ. ಶುಚಿಯಾದ ಬಟ್ಟೆಕೊಡಿಸಿ ಮೆತ್ತನೆಯ ಹಾಸಿಗೆ ಯಲ್ಲಿ ಮಲಗಿಸಿ ಅವರಿಗೆ ಬೇಸರವಿಲ್ಲದಂತೆ ನೋಡಿಕೊಳ್ಳುತ್ತಿದ್ದ. ಸೂರ್ಯೋ ದಯದಿಂದ ಸೇವೆ ಶುರವಾದರೆ ಸೂರ್ಯಾಸ್ತವಾದರೂ ಮಧುರಾ ನಾಥನಿಗೆ ವಿರಾಮವಿಲ್ಲ. ರಾತ್ರಿಯೂ ಅಶಕ್ತರನ್ನು ಉಪಚರಿಸಬೇಕಾಗುತ್ತಿತ್ತು 'ತನ್ನ ಶರೀರ ಸೌಖ್ಯವನ್ನು ಕಿಂಚಿತ್ತೂ ಅಪೇಕ್ಷಿಸದೆ ದುಡಿಯುತ್ತಿದ್ದ ಈ ಸೇವೆಯಿಂದ ಅವನಿಗೆ ಆತ್ಮತೃಪ್ತಿ ದೊರಕಿತ್ತು' ಮಹಾಧನಿಕನಾಗಿದ್ದ ಮಧುರಾನಾಥನು ತನ್ನ ಅಪಾರ ಐಶ್ವರ್ಯವನ್ನೂ ದೀನದಲಿತರ ಸೇವೆಗಾಗಿ ವಿನಿಯೋಗಿಸಿದ್ದ, ತನ್ನ ಸಂಪತ್ತು ಸಾರ್ಥಕವಾಯಿತೆಂದು ನೆಮ್ಮದಿಯಿಂದಿದ್ದ. ಆ ಅನಾಥರು ಅವನು ತಮ್ಮ ಭಾಗದ ದೇವರೆಂದೇ ಭಾವಿಸಿದ್ದರು.

ನಾರದರು ಈ ದೃಶ್ಯವನ್ನು ಕಣ್ಣಾರೆ ನೋಡಿ : ಭೇಷ್ ಈತನೀಗ ಮಹಾತಪಸ್ವಿ, ಎಂದು ಮೆಚ್ಚಿ ಶುಕ ಋಷಿಯೇ ಇಂತಹ ಮಹಾತ್ಮನ ದರ್ಶನ ಮಾಡಿಸಿದ ನಿನಗೆ ನಮೋ ನಮಃ ಎಂದರು.

ಸ್ವಲ್ಪ ಹೊತ್ತಿನಲ್ಲಿಯೇ ನಾರದರು ನೋಡುತ್ತಿದ್ದಂತೆಯೇ ಗಿಣಿಯು ರೆಕ್ಕೆ ಬಡಿಯುತ್ತಾ ಕೆಳಗೆ ಸತ್ತು ಬಿತ್ತು, ಅದೇ ಸ್ಥಳದಲ್ಲಿ ದಿವ್ಯ ತೇಜಸ್ಸನ್ನು ಹೊಂದಿದ ಒಬ್ಬ ಗಂಧರ್ವ ಪ್ರತ್ಯಕ್ಷ ನಾದ.

ನಾರದರು ಆಶ್ಚರ್ಯದಿಂದ ನೀನು ಯಾರು ? ಎಂದು ಕೇಳಿದರು, " ಗಿಣಿಯರೂಪದಲ್ಲಿದ್ದ ಒಬ್ಬ ಗಂಧರ್ವನಾನು ನನಗೆ ಒಬ್ಬ ಋಷಿಯಿಂದ ಶಾಪ ವಿತ್ತು. ನಾನು ಪರಿತಪಿಸಿ ನನ್ನ ಶಾಪ ವಿಮೋಚನೆ ಯಾವಾಗ ? ಎಂದು ಕೇಳಿದ್ದಕ್ಕೆ ಭೂಲೋಕಕ್ಕೆ ನಾರದರು ಬಂದಾಗ ಅವರ ಜೊತೆಯಲ್ಲಿ ಹೋಗಿ ಮಹಾತ್ಮ ಮಧುರಾನಾಥನನ್ನು ದರ್ಶನ ಮಾಡಿದಾಗ ನಿನ್ನ ಶಾಪ ವಿಮೋಚನೆ " ಎಂದು ಹೇಳಿದರು, ನಾರದರೇ : ಆ ಮಹಾತ್ಮನ ತಪಶ್ಶಕ್ತಿ ಎಷ್ಟೆಂದು ತಿಳಿ ಯಿತೇ !

ಆ ಮಹಾತ್ಮನು "ಈ ಸೇವೆಯಲ್ಲಿರುವ ಆತ್ಮತೃಪ್ತಿ ಸ್ವರ್ಗದಲ್ಲಿಯೂ ಸಿಗಲಾರದು. ಇಂದ್ರಪದವಿ ದೊರೆತರೂ ನನಗೆ ಬೇಡ. ದೇವರು ಸದಾ ನನಗೆ ಸೇವೆ ಮಾಡುವ ಭಾಗ್ಯವನ್ನು ಕರುಣಿಸಲಿ " ಎನ್ನುತ್ತಾನೆ "

ಎಂದು ಹೇಳಿ ಆ ಗಧರ್ವನು ಮಹಾತ್ಮನಿಗೆ ಭಕ್ತಿಯಿಂದ ಕೈಮುಗಿದು ಅಂತರ್ಧಾನ ವಾದನು.

ನಾರದರು ದೇವೇಂದ್ರನಿಗೆ ನೋಡಿದ ಸಂಗತಿಯನ್ನೆಲ್ಲಾ ವಿವರಿಸಿದರು. ದೇವೇಂದ್ರನು ನಾಚಿ ಆ ಮಹಾತ್ಮನ ಮುಂದೆ ತಾನು ಎಷ್ಟು ಅಲ್ಪ? ಎಂದು ನಾರದರೊಂದಿಗೆ ಆ ಆಶ್ರಮವನ್ನು ವೀಕ್ಷಿಸಿ ಮೇಲಿಂದ ಪುಷ್ಪ ವೃಷ್ಟಿಯನ್ನು ಆ ಮಹಾತ್ಮನ ಮೇಲೆ ಸುರಿದನು.

ಮಕ್ಕಳೇ ದೀನ ದಲಿತರ ಸೇವೆ ಎಷ್ಟು ಮಹತ್ವದ್ದು ನೋಡಿದಿರಾ ?

## ಜಾತಕ ಫಲ

ಧರ್ಮಪುರಿ ಎಂಬ ರಾಜ್ಯವನ್ನು ದಯಾಕರನೆಂಬ ರಾಜ ಆಳುತ್ತಿದ್ದ, ಅವನು ಹೆಸರಿಗೆ ತಕ್ಕಂತೆ ಧರ್ಮ ದಯೆಯಿಂದ ರಾಜ್ಯಪಾಲನೆ ಮಾಡುತ್ತಿದ್ದ. ಇವನಿಗೆ ಅನೇಕ ಸಾಮಂತರಿದ್ದರು, ಎಲ್ಲರೂ ಇವನಿಗೆ ಕಪ್ಪಕಾಣಿಕೆಯನ್ನು ಕೊಟ್ಟು ಗೌರವಿಸುತ್ತಿದ್ದರು.

ಈ ರಾಜನಿಗೆ ಬಹುಕಾಲ ಮಕ್ಕಳಿಲ್ಲದೆ ಕಡೆಗೆ ಒಂದು ಹೆಣ್ಣು ಮಗು ಹುಟ್ಟಿತು. ಚಂದ್ರಬಿಂಬದಂತೆ ಮುಖ ಕಾಂತಿಯಿಂದ ಕೂಡಿ ಸುಂದರವಾಗಿದ್ದ ಮಗುವಿಗೆ ಚಂದ್ರಕಾಂತಿಯೆಂದು ನಾಮಕರಣಮಾಡಿದ.

ತಮಗೆ ಮಕ್ಕಳಿಲ್ಲದ ಕೊರತೆಯನ್ನೂ ಹೋಗಲಾಡಿಸಿ ಮುದ್ದಾದ ಮಗುವನ್ನು ಕುಣಿಸಿದ ದೇವರಿಗೆ ಕೈಮುಗಿದು ರಾಜರಾಣಿ ಸುಖ ಸಂತೋಷ ದಿಂದ್ದರು.

ಇವನ ಏಳಿಗೆ ಸುಖವನ್ನು ಸಹಿಸದ ಶತ್ರುರಾಜನೊಬ್ಬನಿದ್ದ ಅವನ ಹೆಸರು ಕೇತುವರ್ಮ. ಅವನು ಕಾಂಬೋಜದ ರಾಜನಾಗಿದ್ದ. ದಯಾಕರ ರಾಜನಿಗೆ ಏನಾದರೂ ಕಷ್ಟವನ್ನುಂಟುಮಾಡಿ ಅವನ ಸಂತೋಷವನ್ನು ತಗ್ಗಿಸಿದರೆ ಅವನನ್ನು ಗೆಲ್ಲಬಹುದು, ಆಗ ಆ ರಾಜ್ಯವು ತನ್ನ ಕೈ ಸೇರುತ್ತದೆ. ಎಂದು ಆಲೋಚಿಸಿ ಬಂದು ಉಪಾಯವನ್ನು ಹೂಡಿದ.

ತನ್ನ ಕಡೆಯುವನ್ನೊಬ್ಬನನ್ನು ಕರೆದು ಗುಟ್ಟಾಗಿ ' ನೀನು ಜ್ಯೋತಿಷಿಯಂತೆ ವೇಷಹಾಕಿಕೊಂಡು ದಯಾಕರನ ರಾಜ್ಯಕ್ಕೆ ಹೋಗು, ಅಲ್ಲಿ ರಾಜನಿಗೆ ನಂಬಿಕೆ ಬರುವಂತೆ ಮಗುವಿನ ನಕ್ಷತ್ರ ಜಾತಕನೋಡಿ ಮಗು ಬಹಳ ಕೆಟ್ಟ ಗಳಿಗೆಯಲ್ಲಿ ಹುಟ್ಟಿದೆ ಅದಕ್ಕೆ ದೃಷ್ಟಿದೋಷವಿದೆ. ಅದು ಯಾರನ್ನು ಮತ್ತು ಯಾವುದನ್ನು ನೋಡಿದರೂ ನಾಶವಾಗಿಬಿಡುತ್ತದೆ" ಎಂದು ಹೇಳಬೇಕು, ಎಚ್ಚರಿಕೆ "ಸ್ವಲ್ಪ ಸುಳಿವೂ ಸಿಕ್ಕದಂತೆ ಕೆಲಸ ನೆರವೇರಿಸಿಕೊಂಡು ಬಾ" ಎಂದು ಹೇಳಿಕಳು ಹಿಸಿದ.

ಈ ವೇಷಧಾರಿ ಜ್ಯೋತಿಷಿ ಅರಮನೆಗೆ ಬಂದ. ರಾಜನು ಅವನನ್ನು ಮರ್ಯಾದೆಯಿಂದ ಬರಮಾಡಿಕೊಂಡ. ತನ್ನ ಮಗುವಿನ ಭವಿಷ್ಯವನ್ನು ನೋಡಿ ಜಾತಕ ಬರೆದುಕೊಡಬೇಕೆಂದು ಕೇಳಿದ

ಜ್ಯೋತಿಷಿಯು ಗ್ರಹಗಳ ಸಂಖ್ಯೆಯನ್ನು ಎಣಿಸುತ್ತಾ ತಟ್ಟನೆ ಏನೋ ಯೋಚಿಸುವಂತೆ ಸುಮ್ಮನಾದ ರಾಜನು ಗಾಬರಿಯಿಂದ ಏಕೆ ಪಂಡಿತರೇ ? ನನ್ನ ಮಗಳ ಜಾತಕ ಹೇಗಿದೆ ? ಎಂದು ಕೇಳಿದ.

ಜ್ಯೋತಿಷಿಯು ರಾಜಾ : ನೀನು ಕೇಳಿದರೆ ವ್ಯಸನ ಪಡುತ್ತೀ....ನಿನ್ನ ಮಗಳಿಗೆ ದೃಷ್ಟಿದೋಷವಿದೆ. ಅವಳ ದೃಷ್ಟಿ ಯಾರಮೇಲೂ ಬೀಳ ಬಾರದು. ಕೂಡಲೇ ಮಗುವಿನ ಕಣ್ಣಿಗೆ ಪಟ್ಟಿಕಟ್ಟಿಸು'' ಎಂದ

ರಾಜನಿಗೆ ಮಿತಿ ಮೀರಿ ಕೋಪಬಂದಿತು. ಪಂಡಿತರೇ ನೀವು ಇಲ್ಲಿಂದ ಮೊದಲು ಹೊರಡಿ ನನ್ನ ಮುದ್ದು ಮಗುವಿಗೆ ಇಲ್ಲದ ಅಪವಾದ ಹಿಡುತ್ತೀರಾ? ಎಂದು ಗದರಿ ಕಳುಹಿಸಿದ.

ಜ್ಯೋತಿಷಿ ನಡೆದ ವಿಷಯ ಕೇತುವರ್ಮನಿಗೆ ಹೇಳಿದ. ಪಾಪಿ: ಕೇತು ವರ್ಮ ಅಷ್ಟಕ್ಕೆ ಬಿಡುವನೇ? ಕೆಲಸದಿಂದ ಬಿಟ್ಟು ಮತ್ತೊಬ್ಬ ಜೋತಿಷಿ ಯನ್ನು ಕಳುಹಿಸಿದ, ನೀನೂ ಸಹ ಮೊದಲಿನವನಂತೆಯೇ ಹೇಳಬೇಕು, ಎಂದು ಹೇಳಿ ಕಳುಹಿಸಿದ.

ರಾಜನಿಗೆ ತುಂಬಾ ಚಿಂತೆಯಾಗಿತ್ತು ಮತ್ತೆ ಯಾರಾದರೂ ಜ್ಯೋತಿಷ್ಯರಿಗೆ ಮಗುವಿನ ಜಾತಕವನ್ನು ತೋರಿಸಿ ನೋಡಬೇಕು, ಎಂದು ನಿರೀಕ್ಷಿಸುತ್ತಿದ್ದ. ಈ ವೇಷಧಾರಿ ಅರಮನೆಗೆ ಬಂದ ಮಗುವನ್ನೂ ಜಾತಕವನ್ನೂ ನೋಡಿದಂತೆ ಮಾಡಿ, ರಾಜಾ : ನಾನು ಯಾವ ಬಾಯಿಂದ ಹೇಳಲಿ? ನಾನು ಏನನ್ನೂ ಹೇಳಲಾರೆ ಎಂದು ಎದ್ದು ಹೊರಟ.

ರಾಜನು ಪಂಡಿತರೇ " ಏನಿದ್ದರೂ ಹೇಳಿ ಪರವಾಗಿಲ್ಲ ಎಂದ, ವೇಷ ಧಾರಿ ಜ್ಯೋತಿಷಿಯು ರಾಜಾ : ನಿನ್ನ ಮಗಳ ದೃಷ್ಟಿ ತುಂಬಾಕ್ರೂರ" ಮೊದಲು ಕಣ್ಣಿಗೆ ಪಟ್ಟಿ ಕಟ್ಟಿಸು. ಎಂದ.

ರಾಜನಿಗೆ ಆಕಾಶವೇ ತಲೆಯಮೇಲೆ ಬಿದ್ದಂತೆ ಆಯಿತು, ಇದೇನು ಇವರೂ ಹೀಗೆ ಹೇಳುತ್ತಾರಲ್ಲಾ. ಇರಲಿ ನೋಡೋಣ, ಎಂದು ಮಗುವಿನ ಮೇಲಿನ ಮಮತೆಯಿಂದ ಸುಮ್ಮನಾದ,

ಆದರೆ ಕೇತುವರ್ಮ ಬಿಡಬೇಕಲ್ಲಾ. ಆಗಾಗ ಪದೇ ಪದೇ ವೇಷಧಾರಿ ಜೋತಿಷರನ್ನು ಕಳುಹಿಸುತ್ತಲೇ ಇದ್ದ. ಅವರೆಲ್ಲರೂ ರಾಜಕುಮಾರಿಯ ದೃಷ್ಟಿ ದೋಷವನ್ನು ಎತ್ತಿ ಹೇಳುತ್ತಿದ್ದರು ಇಷ್ಟಲ್ಲದೆ ದಯಾಕರನ ರಾಜ್ಯದ ಜೋತಿಷರು ಯಾರೇ ಇರಲಿ ಅವರಿಗೂ ಧನದಾಸೆ ತೋರಿಸಿ ತನ್ನ ಕಡೆ ಮಾಡಿ ಕೊಂಡಿದ್ದ.

ರಾಜನ ರಾಜ್ಯದವರೂ ಹಾಗೆಯೇ ಹೇಳುತ್ತಿದ್ದರು, ಇದರಿಂದ ರಾಜನ ಮನಸ್ಸು ಅಲ್ಲೋಲಕಲ್ಲೋಲವಾಯಿತು. ಒಬ್ಬರಲ್ಲ ಇಬ್ಬರಲ್ಲ ಹತ್ತಾಜನ ಜೋತಿಷರೂ ಹಾಗೆ ಹೇಳಬೇಕಾದರೆ ರಾಜಕುಮಾರಿಗೆ ದೃಷ್ಟಿ ದೋ ಷವಿರಲೇ ಬೇಕು,ಎಂದುಮಗುವಿನ ಕಣ್ಣಿಗೆ ಭದ್ರವಾದ ಪಟ್ಟಿಯನ್ನು ಕಟ್ಟಿಸಿದ,

ಮುದ್ದಾಗಿ ಆಟ ಪಾಟ ಮಾಡುತ್ತಿದ್ದ ಮಗುವಿಗೆ ಈ ಬಂಧನವನ್ನು ಹಾಕಿದಕ್ಕಾಗಿ ರಾಜನೂ ರಾಣಿಯೂ ಕೊರಗಿ ಕೃಶವಾದರು.

ಮಗುವಿಗೆ ಕಣ್ಣು ಮುಚ್ಚಿರುವುದೇ ಅಭ್ಯಾಸವಾಗಿ ಹೋಯಿತು, ಚಂದ್ರ ಕಾಂತಿ ದಿನೇ ದಿನೇ ಸುಂದರಳಾಗಿ ಬೆಳೆಯತೊಡಗಿದಳು. ಆದರೆ ಕುರುಡಿ ಯಂತೆ, ಎಲ್ಲವನ್ನೂ ಕೈಯಲ್ಲಿ ಮುಟ್ಟಿ-ಮುಟ್ಟಿ ಗುರುತಿಸುತ್ತಿದ್ದಳು. ಒಂದು ದಿನಕ್ಕಾದರೂ ತಂದೆ ತಾಯಿಯವರ ಮುಖವನ್ನು ನೋಡಲಿಲ್ಲ ಪ್ರಪಂಚದ ಸುಂದರ ದೃಶ್ಯಗಳನ್ನು ಕಾಣದೆಯೇ ಬೆಳೆದಳು. 16ವರ್ಷದ ಪ್ರಾಯಸ್ಥಳಾದಳು. ಮಗುವಿನಿಂದ ಕಣ್ಣು ಮುಚ್ಚಿಯೇ ಇದ್ದುದರಿಂದ ಕಣ್ಣಿನ ಶಕ್ತಿ ಕಳೆದು ಹೋಗಿತ್ತು. ಒಂದು ನಿಮಿಷ ಪಟ್ಟಿಯನ್ನು ತೆಗೆದರೂ ಬೆಳಕಿನ ಪ್ರಕಾಶವನ್ನು ತಡೆಯಲಾರದೆ ಕೂಗಿಕೊಳ್ಳುತ್ತಿದ್ದಳು. "ಬೇಗ ಪಟ್ಟಿ ಕಟ್ಟಿ" ಎಂದು. ಕಣ್ಣಿಲ್ಲದ ಕುರುಡಿಯಂತೆಯೇ ಅಭ್ಯಾಸವಾಗಿಬಿಟ್ಟಿತ್ತು ಅವಳಿಗೆ


ದಯಾಕರ ರಾಜನು ತನ್ನ ಅದೃಷ್ಟಕ್ಕೆ ಕೊರಗುತ್ತಾ ; ತನ್ನ ಒಬ್ಬ ಸಾಮಂತ ರಾಜನ ಮಗನನ್ನು ತನ್ನ ಸಹಾಯಕ್ಕಾಗಿ ಬರಮಾಡಿಕೊಂಡು ತನ್ನ ಜೊತೆಯಲ್ಲಿಯೇ ಇರುವಂತೆ ಅರಮನೆಯಲ್ಲಿ ಇಟ್ಟುಕೊಂಡ, ತರುಣನೂ ವೀರನೂ ಸುಂದರನೂ ಆಗಿದ್ದ ಆ ರಾಜಕುಮಾರ ದಯಾಕರ ರಾಜನ ಆತ್ಮೀಯ ನಾಗಿ ಅವನಿಗೆ ಸಹಾಯ ಮಾಡುತ್ತಾ ಅರಮನೆಯಲ್ಲಿಯೇ ಇದ್ದ, ಪ್ರದೀಪ,

ಹೀಗಿರುವಲ್ಲಿ ಸುಂದರಳಾದ ರಾಜಕುಮಾರಿಯು ಇವನ ಕಣ್ಣಿಗೆ ಬಿದ್ದಳು, ಆದರೆ ಸಖಿಯರು ಅವಳನ್ನು ಕೈಹಿಡಿದು ನಡೆಸುವುದು ಓಡಾಡಿಸುವುದು ನೋಡಿ ಇವನಿಗೆ ಆಶ್ಚರ್ಯವಾಯಿತು.

ದಾದಿಯರು ಇವನಿಗೆ ಎಲ್ಲಾ ವಿಷಯ ತಿಳಿಸಿದರು. ರಾಜಕುಮಾರಿ ಕುರುಡಿಯಲ್ಲ ಪಟ್ಟಿ ಕಟ್ಟಿರುವುದರಿಂದ ಕುರುಡಿಯಾಗಿದ್ದಾಳೆ ಎಂದು ರಾಜ ಕುಮಾರನಿಗೆ ತಿಳಿಯಿತು, ಇಂತಹ ರೂಪತಿ ರಾಜಕುಮಾರಿಗೆ ಏನೋ ಅನ್ಯಾಯ ನಡೆದಿದೆ. ಇದನ್ನು ಸರಿಪಡಿಸಬೇಕು, ಎಂದು ತೀರ್ಮಾನಿಸಿದ.

ಆಗಾಗ ರಾಜಕುಮಾರಿಯ ಬಳಿ ಬಂದು ಕುಳಿತು ಮಾತನಾಡತೊಡಗಿದ, ಯಾರ ಪರಿಚಯಕ್ಕೂ ಅವಕಾಶವೇ ಇಲ್ಲದ ರಾಜಕುಮಾರಿಗೆ ರಾಜಕುಮಾರನು

ಕುಳಿತು ತನ್ನೊಂದಿಗೆ ಆತ್ಮೀಯವಾಗಿ ಮಾತನಾಡುವುದು ಬಹಳ ಸಂತೋಷ ವನ್ನುಂಟುಮಾಡಿತು.



ರಾಜಕುಮಾರಿಯ ಕಣ್ಣಿಗೆ ಬಟ್ಟೆಕಟ್ಟಿದೆ. ರಾಜಕುಮಾರ ಮಾತನಾಡುತ್ತಿರುವುದು

ದಿನಕ್ರಮೇಣ. ನದಿ, ಬೆಟ್ಟ, ಕಾಡು- ಬಣ್ಣ ಬಣ್ಣದ ಹಕ್ಕಿಗಳ ಇವುಗಳನ್ನೆಲ್ಲಾ ವರ್ಣಿಸಿ ಚಂದ್ರಕಾಂತಿಗೆ ಕತೆ ಹೇಳತೊಡಗಿದ ರಾಜಕುಮಾರ.

ಅಯ್ಯೋ ರಾಜಕುಮಾರಾ ! ಅಂತಹ ಪ್ರಕೃತಿ ಸೌಂದರ್ಯವನ್ನು ನೋಡುವ ಅದೃಷ್ಟ ನನಗಿಲ್ಲವಲ್ಲಾ ಎಂದು ಪೇಚಾಡಿದಳು ರಾಜಕುಮಾರಿ.

ಪ್ರದೀಪನು ಅವಳನ್ನು ಸಮಾಧಾನ ಪಡಿಸುತ್ತಾ ನೀನೂ ನೋಡಬಹುದು ರಾಜಕುಮಾರಿ ನೀನೇನೂ ಕುರುಡಿಯಲ್ಲ, ಎಂದ.

ಅಯ್ಯೋ! ನನ್ನ ಕಣ್ಣು ತೆರೆಯಲೇ ಬಾರದಂತೆ. ಅಲ್ಲದೆ ನನಗೆ ಈ ಪಟ್ಟಿಯನ್ನು ಬಿಚ್ಚಿ ಒಂದು ನಿಮಿಷವೂ ಇರುವುದಕ್ಕಾಗುವುಲ್ಲ ರಾಜಕುಮಾರಾ ! ಎಂದಳು.

ನೋಡು ಈ ಜಾತಕ, ಭವಿಷ್ಯ ಎಂದು ಜನ ಏನೇನೋ ಮೋಸ ಮಾಡುತ್ತಾರೆ, ನಿನಗೆ ಏನೋ ಅನ್ಯಾಯವಾಗಿದೆ. ಅದೆಲ್ಲಾ ನಾನು ಕಂಡುಹಿಡಿಯುತ್ತೇನೆ ಮೊದಲು ನಾನು ಹೇಳಿದಂತೆ ನೀನು ಕೇಳಬೇಕು ಎಂದ.

ಪ್ರದೀಪನ ಮಾತು ಎಂದರೆ ಅವಳಿಗೆ ತುಂಬಾ ನಂಬಿಕೆ. ಆಗಲಿ" ಎಂದಳು....ಪ್ರದೀಪನು ಅವಳನ್ನು ಒಂದು ಕತ್ತಲೆಯ ಕೊಠಡಿಗೆ ಕರೆದುಕೊಂಡು ಹೋಗಿ ಅವಳ ಕಣ್ಣಿನ ಪಟ್ಟಿಯನ್ನು ಬಿಚ್ಚಿದ

ಅವಳು ಹೋ....ಎಂದು ಕೂಗಿಕೊಂಡಳು 'ಅಯ್ಯೋಕಣ್ಣು ಚುಚ್ಚುತ್ತೆ' ಬೇಗ ಕಟ್ಟು ಪ್ರದೀಪ ! ಎಂದಳು,

ಪ್ರದೀಪನು ಪಟ್ಟಿ ಕಟ್ಟಲಿಲ್ಲ. ಸ್ವಲ್ಪ ಹೊತ್ತು ನೋವನ್ನು ಸಹಿಸಿಕೋ ಆ ಮೇಲೆ ಸರಿಹೋಗುತ್ತೆ ಎಂದ, ಪಟ್ಟಿ ತೆಗೆದರೂ ಎಷ್ಟೋ ವರ್ಷಗಳಿಂದ ಮುಚ್ಚಿದ್ದ ರೆಪ್ಪೆ ತೆಗೆಯಲು ಸಾಧ್ಯವಾಗಲಿಲ್ಲ.

ರಾಜಕುಮಾರನು ದಿನ ಕ್ರಮೇಣ ಕತ್ತಲೆಯಲ್ಲಿ ಕಣ್ಣು ಬಿಡಿಸುವ ಅಭ್ಯಾಸವನ್ನು ಅವಳಿಗೆ ಮಾಡಿಸಿದ, ಅವಳಿಗೆ ಮಂಕು ಮಂಕಾಗಿ ವಸ್ತುಗಳು ಕಾಣತೊಡಗಿದುವು.

ಆಗ ಚಂದ್ರಕಾಂತಿಗೆ ಗಾಬರಿಯಾಯಿತು. ಅಯ್ಯೋ! ನನ್ನ ದೃಷ್ಟಿ ಪ್ರದೀಪನ ಮೇಲೆ ಬಿದ್ದರೆ ಅವನಿಗೆ ಏನಾದರೂ ಕೇಡುಂಟಾದರೆ ಏನುಗತಿ ? ಎಂದು ಚಿಂತಿಸಿ ಪ್ರದೀಪಾ ನಾನು ನಿನ್ನನ್ನು ಮಾತ್ರ ನೋಡುವುದಿಲ್ಲ. ನನ್ನ ಕ್ರೂರದೃಷ್ಟಿ ನಿನ್ನ ಮೇಲೆ ಬೀಳಬಾರದು ಎಂದು ವ್ಯಸನದಿಂದ ಹೇಳಿದಳು.

ಅಯ್ಯೋ ! ಮಂಕು ರಾಜಕುಮಾರೀ ! ಅದೆಲ್ಲಾ ನಿನ್ನ ಮನಸ್ಸಿನಿಂದ ಬಿಡು. ನೀನು ನನ್ನನ್ನು ಚೆನ್ನಾಗಿ ನೋಡು ಏನಾಗಿಬಿಡುತ್ತದೆ ನೋಡುತ್ತೇನೆ ಎಂದ, ರಾಜಕುಮಾರಿ ಸುಂದರ ಯುವಕ ಪ್ರದೀಪನನ್ನು ನೋಡಿದಳು. ತನ್ನ ದೇವರೆಂದೇ ಭಾವಿಸಿದಳು. ಮನಸಾರ ಪ್ರೀತಿಸಿದಳು.

ಅತ್ತ ಕೇತುವರ್ಮನ ರಾಜ್ಯಕ್ಕೆ ಶತ್ರುಗಳು ಮುತ್ತಿದರು ಯುದ್ಧದಲ್ಲಿ ಕೇತುವರ್ಮ ಮಡಿದ ಅವನ ರಾಜ್ಯವು ಶತ್ರುಗಳ ಪಾಲಾಯಿತು. ಬೊರೋಬ್ಬ

ಬೇರೊಬ್ಬರಿಗೆ ಕೇಡು ಬಗೆದವರಿಗೆ ಕೇಡುತಪ್ಪಿದ್ದಲ್ಲ, ಎನ್ನುನಂತಾಯಿತು.

ಪ್ರದೀಪನು ಜ್ಯೋತಿಷಿಗಳ ಒಳಸಂಚನ್ನೂ ಕಂಡುಹಿಡಿದ ಕೇತುವರ್ಮನು ಸತ್ತುಹೋದಮೇಲೆ ತಾವು ಅವನ ಮಾತುಕೇಳಿ ಮಾಡಿದ ಅಪರಾಧವನ್ನು ಕ್ಷಮಿ ಕ್ಷಮಿಸಬೇಕೆಂದು ಒಪ್ಪಿಕೊಂಡರು.

ದಯಾಕರ ರಾಜನಿಗೆ ಪ್ರದೀಪನ ಬುದ್ಧಿ ಸಾಹಸ ಬಹಳ ಮೆಚ್ಚಿಗೆಯಾಯಿತು ತಾನು ಮಗಳಿಗೆ ಅಷ್ಟು ಅನ್ಯಾಯಮಾಡಿದೆ ಎಂದುವ್ಯಸನಪಟ್ಟ.

ಪ್ರದೀಪನು ಜ್ಯೋತಿಷಿಗಳ ಒಳಸಂಚನ್ನೂ ಕಂಡುಹಿಡಿದ ಕೇತುವರ್ಮನ ಸತ್ತುಹೋದಮೇಲೆ ತಾವು ಅವನ ಮಾತುಕೇಳಿ ಮಾಡಿದ ಅಪರಾಧವನ್ನು ಕ್ಷಮಿಸಬೇಕೆಂದು ಒಪ್ಪಿಕೊಂಡರು.

ದಯಾಕರ ರಾಜನಿಗೆ ಪ್ರದೀಪನ ಬುದ್ಧಿ ಸಾಹಸ ಬಹಳ ಮೆಚ್ಚಿಗೆಯಾಯಿತು. ತಾನು ಮಗಳಿಗೆ ಅಷ್ಟು ಅನ್ಯಾಯಮಾಡಿದೆ ಎಂದುವ್ಯಸನಪಟ್ಟ.

ಪ್ರದೀಪನಿಗೆ ತನ್ನ ಮಗಳು ಚಂದ್ರಕಾಂತಿಯನ್ನು ಕೊಟ್ಟು ವೈಭವದಿಂದ ಮದುವೆ ಮಾಡಿದ. ಅವನಿಗೇ ಪಟ್ಟವನ್ನು ಕಟ್ಟಿ ತನ್ನ ರಾಜ್ಯವನ್ನೂ ಪ್ಪಿಸಿದ.

ಮಕ್ಕಳೇ ಈ ಕತೆಯಿಂದ ಎಷ್ಟು ನೀತಿ ತಿಳಿಯಬಹುದು ನೋಡಿ.

ಒಬ್ಬರಿಗೆ ಕೇಡು ಬಗೆದರೆ ತನಗೆ ಕೇಡು ತಪ್ಪಿದ್ದಲ್ಲ ಎನ್ನುವುದು

ಒಂದು ವಿಷಯವನ್ನು ನಂಬದಿದ್ದರೂ ಅನೇಕರು ಒಂದೇ ರೀತಿ ಹೇಳಿದಾಗ ನಂಬ ಬೇಕಾಗುತ್ತದೆ,

ನಮ್ಮ ಬಾಳಿನಲ್ಲಿ ಜಾತಕ, ಜ್ಯೋತಿಷ್ಯ ಎಂದು ನೆಚ್ಚಿಹಾಳಾಗಬಾರದು

— — —

## ದುಡಿಮೆಯ ಬೆಲೆ

ಕಾಳಮ್ಮ ಬಡವಿ. ಕೂಲಿ ನಾಲಿಮಾಡಿ ಜೀವಿಸುತ್ತಿದ್ದಳು ಅವಳಿಗೆ ಒಬ್ಬ

ಸೋಮಾರಿ ಹುಡುಗನಿದ್ದ ಅವನ ಹೆಸರು ತಿಮ್ಮ ಇವನು ಚಿಕ್ಕಹುಡುಗನಾಗಿದ್ದಾಗ ಕಾಳಮ್ಮ ಅವನಿಗೆ ಮುಖ ತೊಳೆಸುವುದು, ಸ್ನಾನ ಮಾಡಿಸುವುದು ಬಟ್ಟೆ ತೊಡಿಸುವುದು, ಎಲ್ಲಾ ಅವಳೇ ಮಾಡುತ್ತಿದ್ದಳು.

ಹೀಗಾಗಿ ತಿಮ್ಮ ಅವನ ಕೆಲಸವನ್ನೂ ಅವನು ಮಾಡಿಕೊಳ್ಳಲಾರದಷ್ಟು ಸೋಮಾರಿಯಾಗಿ ಬೆಳೆದ. ದೊಡ್ಡವನಾದ ಮೇಲೂ ಯಾವ ಕೆಲಸಮಾಡಲೂ ಅವನ ಮೈ ಬಗ್ಗುತ್ತಿರಲಿಲ್ಲ.

ತಾಯಿ ಕಷ್ಟಪಟ್ಟು ದುಡಿದು ತಂದು ಮಾಡಿಹಾಕಿದ್ದನ್ನು ಚೆನ್ನಾಗಿ ತಿಂದು ಕಾಲಕಳೆಯುತ್ತಿದ್ದ. ಕಾಳಮ್ಮನಿಗೆ ಮಗನ ಈ ಸೋಮಾರಿತನ ಕಂಡು ಬಹಳ ಕೋಪ ಬರುತ್ತಿತ್ತು. ಅವಳು ಪ್ರತಿದಿನ ಅವನಿಗೆ ಊಟ ಹಾಕುವಾಗ ಬೈಯ್ಯುತ್ತಿದ್ದಳು. ''ತಿಮ್ಮಾ.'' ನೀನು ದೊಡ್ಡವನಾದೆ. ದುಡಿದು ತಿನ್ನಬೇಕು. ಹೀಗೆ ಕುಳಿತು ತಾಯಿಯಿಂದ ದುಡಿಸಿಕೊಂಡು ತಿನ್ನುವುದು ಅನ್ಯಾಯ. ಇನ್ನು ದುಡಿಯಲು ನನ್ನಕೈಲಾಗುವುದಿಲ್ಲ" ಎಂದ ಮೂದಲಿಸುತ್ತಿದ್ದಳು.

ಕಷ್ಟಪಟ್ಟೇ ಅಭ್ಯಾಸವಿಲ್ಲದ ತಿಮ್ಮನಿಗೆ ಹೊರಗೆಹೋಗಿ ಸಂಪಾದಿಸುವ ಮನಸ್ಸೇ ಬರಲಿಲ್ಲ. ತಾಯಿಯ ಯಾವ ಬೈಗಳೂ ಅವನಮೇಲೆ ಪರಿಣಾಮ ಮಾಡಲಿಲ್ಲ.

ಇವನಿಗೆ ಬುದ್ಧಿ ಕಲಿಸಬೇಕೆಂದು ಕಾಳಮ್ಮ ಆದಿನ ಮಗನಿಗೆ ಊಟಹಾಕಲಿಲ್ಲ ನೀನು ಹೋಗಿ ಸಂಪಾದಿಸಿ ಹಣತಂದ ಹೊರತು ನಾನು ಊಟ ಹಾಕುವುದಿಲ್ಲ "ಹೋಗು" ಎಂದು ಓಡಿಸಿದಳು.

ತಿಮ್ಮನಿಗೆ ಹೊಟ್ಟೆ ಖಾಲಿ, ಚುರ್ ಎನ್ನುತ್ತಿತು "ಹೇಗೆ ಸಂಪಾದಿಸುವುದು? ಎಲ್ಲಿ ಹೋಗುವುದು? ತಿಮ್ಮ ತಲೆತುರಿಸಿಕೊಂಡ ಅಲ್ಲಿಯೇ ಹತ್ತಿರ ಅವನ ಅಕ್ಕನ ಮನೆ ಇತ್ತು ಅಲ್ಲಿ ಹೋಗಿ ಅಕ್ಕಾ !....ಅಕ್ಕಾ ! ನನಗೆ ಒಂದು ರೂಪಾಯಿ ಕೊಡು ಎಂದ ಅವಳು ಏನೋ ತಮ್ಮ ಅಪರೂಪವಾಗಿ ಕೇಳುತ್ತಾನಲ್ಲಾ ಎಂದು ಒಂದೂ ರೂಪಾಯಿಕೊಟ್ಟಳು. ಅದನ್ನು ತಂದು ಅಮ್ಮಾ ತೆಗೆದುಕೋ ಹಣ, ನನಗೆ ತುಂಬಾ ಹಸಿವು ಅನ್ನಹಾಕು" ಎಂದ,

"ತಾಯಿಯು ಈ ಒಂದೂ ರೂಪಾಯನ್ನು ಹೇಗೆ ಸಂಪಾದಿಸಿದೆ ತಿಮ್ಮಾ?" ಎಂದುಕೇಳಿದಳು.

ಅಕ್ಕನ ಮನೆಗೆ ಹೋಗಿ ಕೇಳಿದೆ ಅಕ್ಕ ಕೊಟ್ಟಳು ಎಂದ. ತಾಯಿ ಕೋಪ ದಿಂದ ಇದನ್ನು ಮೊದಲು ತೆಗೆದುಕೊಂಡು ಹೋಗಿ ಬಾವಿಯಲ್ಲಿ ಹಾಕು" ಎಂದಳು ತಿಮ್ಮಾ ಬಾವಿಯಲ್ಲಿ ಆ ರೂಪಾಯನ್ನು ಹಾಕಿಬಿಟ್ಟ.

ಮಾರನೆಯ ದಿನವೂ ಕಾಳಮ್ಮ ಸಂಪಾದಿಸಿಕೊಂಡು ಬಂದ ಹೊರತು ಅನ್ನ ಹಾಕುವುದಿಲ್ಲ ಎಂದಳು.

ತಿಮ್ಮ ನೆರೆಮನೆಗೆ ಹೋಗಿ ಭೀಮಯ್ಯನನ್ನು ಒಂದು ರೂಪಾಯಿಕೇಳಿದ. ಪಾಪ ! ಕಾಳಮ್ಮ ಮರ್ಯಾದಸ್ತೆ. ಅಪರೂಪವಾಗಿ ಹೇಳಿಕಳುಹಿಸಿದ್ದಾಳೆ; ಎಂದು ಒಂದು ರೂಪಾಯಿಕೊಟ್ಟು ಕಳುಹಿಸಿದ. ತಿಮ್ಮ ತಂದುಕೊಟ್ಟ ಕೂಡಲೇ ತಾಯಿ ಕೇಳಿದಳು " ಹೇಗೆ ಸಂಪಾದಿಸಿದೆ ತಿಮ್ಮ ?" ಎಂದು ನೆರೆಮನೆ ಭೀಮಯ್ಯನ ಬಳಿ ಕೇಳಿ ತಂದೆ ಎಂದ.

ಮೊದಲು ತೆಗೆದುಕೊಂಡು ಹೋಗಿ ಬಾವಿಗೆ ಎಸೆ ಎಂದಳು, ಅದನ್ನೂ ಬಾವಿಗೆ ಹಾಕಿ ಬಂದ ತಿಮ್ಮ . ತಾಯಿ ಸರಿಯಾಗಿ ಊಟಹಾಕಲಿಲ್ಲ, ಮಾರನೆಯ ದಿನ ತಿಮ್ಮ ಯಾರು ಯರನ್ನೋ ಕಾಸು ಕೇಳಿದ. ಯಾರು ಕೊಡಲಿಲ್ಲ. ಕಡೆಗೆ ಪೇಟೆಗೆ ಹೋಗಿ ಅಂಗಡಿ ಸಾಹುಕಾರರ ಬಳಿ ಏನಾದರೂ ಕೂಲಿ ಕೆಲಸಕೊಡಿ ಮಾಡುತ್ತೇನೆ ಎಂದು ಕೇಳಿದ.

ಮೂಟೆಗಳನ್ನು ಹೊತ್ತುಕೊಂಡು ಹೋಗಿ ಬೇರೆಕಡೆಗೆ ಸಾಗಿಸುವ ಕೆಲಸ ಕೊಟ್ಟ ಸಾಹುಕಾರ.


ತಿಮ್ಮ ಕಷ್ಟ ಪಟ್ಟು ಮೂಟೆಗಳನ್ನೆಲ್ಲಾ ಹೊತ್ತು ಸಾಗಿಸಿದ. ಮೈ ಕೈ ಎಲ್ಲಾ ಸೋತು ಬೆವರು ಸುರಿಯಿತು, ಸಾಹುಕಾರ ಎರಡುರೂಪಾಯಿ ಕೂಲಿ ಕೊಟ್ಟ.

ಅದನ್ನು ತಂದು ಅಮ್ಮನ ಕೈಗೆ ಕೊಟ್ಟ "ಅಮ್ಮಾ ! ನನಗೆ ತುಂಬಾ ಹಸಿವು ಬೇಗ ಊಟ ಹಾಕು" ಎಂದ.

ತಾಯಿಯು ಪ್ರತಿದಿನದಂತೆ ಈ ರೂಪಾಯನ್ನು ಮೊದಲು ಬಾವಿಗೆ ಎಸೆದು ಬಾ ಎಂದಳು.

ತಿಮ್ಮನು ರೇಗಿಕೊಂಡು ಅಮ್ಮಾ ನಿನಗೇನ್ನಾದರೂ ಬುದ್ಧಿ ಇದೆಯೆ ನಮ್ಮಾ? ಬೆಳಗ್ಗೆಯಿಂದ ಮೂಟೆ ಹೊತ್ತು ಬೆವರು ಸುರಿಸಿ ಆ ಎರಡು ರೂಪಾಯಿ ಸಂಪಾದಿಸಿದ್ದೀನಿ. ಅಷ್ಟು ಸುಲಭವಾಗಿ ಬಾವಿಗೆ ಎಸಿ "ಎನ್ನುತ್ತೀಯಲ್ಲಮ್ಮಾ!' ಆ ಎರಡು ರೂಪಾಯಿ ಸಂಪಾದಿಸಲು ಎಷ್ಟು ಕಷ್ಟಪಟ್ಟೆ" ಕೊಡಮ್ಮ ಇಲ್ಲಿ ಎಂದು ತಾಯಿಯ ಕೈಯಿಂದ ರೂಪಾಯಿತೆಗೆದುಕೊಂಡು ಜೋಪಾನವಾಗಿ ಪೆಟ್ಟಿಗೆಯಲ್ಲಿಟ್ಟ.

ಈಗ ಕಾಳಮ್ಮನಿಗೆ ತುಂಬಾ ಸಂತೋಷವಾಯಿತು, ಅವಳು ಮಗನನ್ನು ಆದರಿಸಿ ಕೂರಿಸಿ ಹೊಟ್ಟೆತುಂಬಾ ಊಟ ಹಾಕಿದಳು. ಮತ್ತು ಹೀಗೆ ಹೇಳಿದಳು "ತಿಮ್ಮಾ! ನೋಡಿದೆಯಾ ನೀನೇ ಕಷ್ಟಪಟ್ಟು ಸಂಪಾದಿಸುವ ವೇಳೆಗೆ



ದುಡಿದು ಬಂದ ಮಗನಿಗೆ ಕಾಳಮ್ಮ ಊಟ ಹಾಕುತ್ತಿರುವುದು

ನಿನಗೆ ಹಣದ ಬೆಲೆ ತಿಳಿಯಿತು. ದಿನಾ ಬಿಟ್ಟಿ ಊಟಮಾಡುತ್ತಿದ್ದರೆ ದುಡಿಯುವ ಕಷ್ಟ ನಿನಗೆ ಹೇಗೆತಿಳಿಯುತ್ತೆ. ಆದ್ದರಿಂದ ದುಡಿಯದೆಯೇ ತಿನ್ನುವವರು ಕಡುದ್ರೋಹಿಗಳು. ಕಾಯಕವೇ ಕೈಲಾಸ. ಕಷ್ಟ ಪಟ್ಟು ದುಡಿಯುವವನನ್ನು ದೇವರು ಮೆಚ್ಚುತ್ತಾನೆ. ಎಂದು ವಿವೇಕ ಹೇಳಿದಳು.

ತಿಮ್ಮನು ಸೋಮಾರಿತನ ಬಿಟ್ಟು ದುಡಿದು ಸಂಪಾದಿಸಲು ತೊಡಗಿದ.

## ಬುದ್ಧಿವಂತ ಬಾಲಕ

ಕಾಶೀ ಪಟ್ಟಣದಲ್ಲಿ ಕನಕ ತೇಜನೆಂಬ ರಾಜ ಆಳುತ್ತಿದ್ದನು. ಅವನು ಸಕಲ ವಿದ್ಯಾಪಾರಂಗತ. ಆದರೆ ಮಹಾಗರ್ವಿ. ತನಗೆ ತಿಳಿದಿರುವಷ್ಟು ಮತ್ತೆ ಯಾರಿಗೂ ತಿಳಿದಿಲ್ಲ, ತನ್ನನ್ನು ಮೀರಿಸುವವರು ಯಾರೂ ಇಲ್ಲ ಎಂದು ಗರ್ವ ಪಡುತ್ತಿದ್ದ.

ಅವನ ಗುರುಗಳು ಮಹಾಮಹಿಮರು. ರಾಜನನ್ನು ಹೇಗಾದರೂ ತಿದ್ದ ಬೇಕು ಎಂದು ಯೋಚಿಸುತ್ತಿದ್ದರು.

ಒಂದು ಬಾರಿ ಕನಕತೇಜ ಮಹಾರಾಜ ಪಲ್ಲಕ್ಕಿಯಲ್ಲಿ ಕುಳಿತು ಹೊರ ಸಂಚಾರ ಹೊರಟ. ಅವನೊಡನೆ ಅಂಗರಕ್ಷಕರೂ, ಅವನ ಬಿರುದಾವಳಿಗಳನ್ನು ಹೊತ್ತವರೂ, ಕೆಲವು ಪರಿವಾರದವರೂ ಹೊರಟರು.

ಗುರುಗಳೂ ಸಹ ಮಹಾರಾಜರೊಂದಿಗೆ ಹೊರಟಿದ್ದರು, ರಾಜನ ಮೆರವಣಿಗೆ ಬರುತ್ತಿದ್ದುದರಿಂದ ಸೇವಕರು ಮುಂದೆ–ಮುಂದೆ ಬಂದು ದಾರಿಯಲ್ಲಿ ಓಡಾಡುವ ಜನರನ್ನು ಪಕ್ಕಕ್ಕೆ ಸರಿಸಿ ಎಚ್ಚರಿಕೆ ಕೊಡುತ್ತಾ ಬರುತ್ತಿದ್ದರು.

ವಿಶಾಲವಾದ ಒಂದು ರಸ್ತೆಗೆ ಬಂದಾಗ ಒಬ್ಬ ಸುಂದರ ಬಾಲಕ ರಸ್ತೆಯ ಪಕ್ಕ ಬುಗುರಿ ಆಡುತ್ತಾ ಇದ್ದ.

ಸೇವಕರು—ಲೋ....ಹುಡುಗ ಮಹಾರಾಜರು ಬರುತ್ತಿದ್ದಾರೆ ದಾರಿ **ಬಿಡು** ಎಂದರು.

ಬಾಲಕನು ಧೈರ್ಯವಾಗಿ "ದಾರಿಗೆಲ್ಲಾ ನಾನು ಅಡ್ಡವಾಗಿ ಇಲ್ಲವಲ್ಲಾ ! ಆ ಕಡೆಯಿಂದ ಹೋಗಲಿ" ಎಂದ.

ಸೇವಕರು—ಏಯ್ ! ಛೋಟಾ ಹುಡುಗ, ನಮ್ಮ ಮಹಾರಾಜರು ದೊಡ್ಡ ವಿದ್ವಾಂಸರು ಕೂಡಾ, ಅವರ ಬಿರುದಾವಳಿಗಳನ್ನು ನೋಡು. ದಾರಿ ಬಿಟ್ಟು ಸರಿ, ಎಂದರು.

ಹುಡುಗ ಇನ್ನೂ ಠೀವಿಯಿಂದ ಸೊಂಟದ ಮೇಲೆ ಕೈಯಿಟ್ಟು ಪಲ್ಲಕ್ಕಿಯ ಎದುರಿಗೇ ಅಡ್ಡವಾಗಿ ನಿಂತು "ನಾನೂ ನಿಮ್ಮ ಘನವಂತ ರಾಜರನ್ನು ನೋಡು ತ್ತೇನೆ ಎಂದ.

ಈ ವೇಳೆಗೆ ಮಹಾರಾಜರು ಹತ್ತಿರ ಬಂದು ಬಾಲಕನ ಧೈರ್ಯವನ್ನೂ ಸೇವಕನೊಂದಿಗೆ ಚರ್ಚಿಸುತ್ತಿದ್ದುದನ್ನೂ ನೋಡಿದ. ಅಬ್ಬಾ ! ಈ ತೇಜಸ್ವೀ ಬಾಲಕನು ಯಾರೋ ? ಎಂದುಕೊಂಡ.



ಪಲ್ಲಕ್ಕಿಯಲ್ಲಿ ರಾಜ ಕುಳಿತಿರುವುದು, ಬಾಲಕ ಹಿಡಿಯಲ್ಲಿ ಮರಳು ತೋರಿಸುವುದು

ಬಾಲಕ ರಸ್ತೆಯಲ್ಲಿದ್ದ ಒಂದು ಹಿಡಿ ಮರಳನ್ನು ಕೈಯಲ್ಲಿ ಹಿಡಿದು, ಮಹಾರಾಜಾ ! ನನ್ನ ಹಿಡಿಯಲ್ಲಿ ಎಷ್ಟು ಮರಳಿದೆ ? ಎಂದು ಕೇಳಿದ

ಬಾಲಕನ ಧೈರ್ಯಕ್ಕೆ ರಾಜ ಮೆಚ್ಚಿದ, ಆದರೆ ಕೈಯಲ್ಲಿರುವ ಮರಳು ಎಷ್ಟು ? ಎಂದು ಲೆಕ್ಕ ಹೇಳಲು ಅವನಿಂದ ಸಾಧ್ಯವಾಗಲಿಲ್ಲ ಲೋ....ದಡ್ಡ ! ಮರಳು ಎಷ್ಟು ಎಂದು ಎಣಿಸಲು ಸಾಧ್ಯವೇನೋ ? ಎಂದು ಗದರಿದ.

ಬಾಲಕ ನಗುತ್ತಾ ಅಯ್ಯೋ ! ದಡ್ಡದೊರೆ ನಿನಗೆ ಇಷ್ಟೂ ತೋಚ ಲಿಲ್ಲವೇ ? ನನ್ನ ಕೈಯ್ಯಲ್ಲಿ ಒಂದು ಹಿಡಿ ಮರಳಿದೆ ಎಂದು ಹೇಳಲು ಗೊತ್ತಾಗಲಿಲ್ಲವೇ ? ಎಂದು ನಕ್ಕುಬಿಟ್ಟ.

ರಾಜನಿಗೆ ಅವಮಾನವಾಯಿತು ತಾನು ಇಷ್ಟು ಬುದ್ಧಿವಂತ, ಒಬ್ಬ ಚಿಕ್ಕ ಹುಡುಗನಿಗೆ ಸೋತೆನಲ್ಲಾ !....ಎಂದುಕೊಂಡ,....ಇರಲಿ, ಇವನಿಗೆ ಬುದ್ಧಿ ಕಲಿಸುತ್ತೇನೆ. ಎಂದು "ಎಲೋ....ಬಾಲಕಾ ನಾಳೆಸಭೆಯುಲ್ಲಿ ನಿನ್ನ ಬುದ್ಧಿ ವಂತಿಕೆಯನ್ನು ಪರೀಕ್ಷಿಸುತ್ತೇನೆ. ಸಭೆಗೆ ಬಾ! ಎಂದು ಹೇಳಿಹೋದ.

ಆ ತೇಜಸ್ವಿ ಬಾಲಕ ಹೆದರಲಿಲ್ಲ. 'ಅಪ್ಪಣೆ ಮಹಾರಾಜಾ! ಎಂದ, ಮರುದಿನ ರಾಜ ಸಭೆಯಲ್ಲಿ ವಿದ್ವಾಂಸರೂ ತೀರ್ಪುಗಾರರೂ, ರಾಜಗುರುಗಳೂ, ಎಲ್ಲರೂ ಇದ್ದರು.

ಬಾಲಕನು ಠೀವಿಯಿಂದ ಬಂದದ್ದನ್ನು ನೋಡಿ ಸಭಿಕರು ಆಶ್ಚರ್ಯ ಪಟ್ಟರು. ಬಾಲಕನು ರಾಜನಿಗೆ ಸರಿಸಮನಾಗಿ ಎತ್ತರವಾದ ಪೀಠದಲ್ಲಿ ಕುಳಿತ.

ರಾಜ ಹೇಳಿದ ! ಏಯ್ ಹುಡುಗ, ನಾವು ಕೇಳಿದ ಪ್ರಶ್ನೆಗೆ ಸರಿಯಾಗಿ ಉತ್ತರ ಹೇಳದಿದ್ದರೆ ನೀನು ನಮ್ಮ ಸೇವಕನಾಗಿ ಇರಬೇಕು" ಎಂದ.

ಬಾಲಕನೂ ಅಷ್ಟೇ ಧೈಯದಿಂದ "ರಾಜಾ ! ನನ್ನ ಪ್ರಶ್ನೆಗೆ ನೀನು ಸರಿಯಾಗಿ ಉತ್ತರ ಹೇಳದಿದ್ದರೆ ನೀನು ನನ್ನ ದಾಸನಾಗಬೇಕು" ಎಂದ.

ಬಾಲಕನ ಧೈರ್ಯಕ್ಕೆ ಸಭಿಕರು ದಂಗಾದರು. ರಾಜನು ಆಗಲಿ ಎಂದು ಒಪ್ಪಿದ,

ರಾಜ ಒಂದು ಪ್ರಶ್ನೆ ಹಾಕಿದ:—ಪ್ರಪಂಚದಲ್ಲಿ ಶುದ್ಧಮನಸುಳ್ಳವರು ಯಾರು ? ಸಭಿಕರಲ್ಲಿ ಯಾರಾದರೂ ಸರಿಯಾಗಿ ಉತ್ತರ ಹೇಳಿ, ಎಂದ.

ಕೆಲವು ಸಭಿಕರು, ದೈವಭಕ್ತರು, ಎಂದರು, ಕೆಲವರು ಸನ್ಯಾಸಿಗಳು ಎಂದರು, ಇನ್ನು ಕೆಲವರು ಋಷಿಗಳು, ದಾನಿಗಳು. ಹೀಗೆ ಒಬ್ಬರು ಒಂದೊಂದು ಹೇಳಿದರು.

ಬಾಲಕ ಎದ್ದುನಿಂತು ಇದಾವುದೂ ಸರಿಯಲ್ಲ ನಾನು ಹೇಳುತ್ತೇನೆ ಕೇಳು ಪ್ರಪಂಚದಲ್ಲಿ ಏನೂ ಅರಿಯದ ಎಳೆಯ ಮಕ್ಕಳು ಶುದ್ಧ ಮನಸ್ಸುಳ್ಳವರು, ಎಂದ"

ಹೌದೆಂದು ರಾಜನೂ ಒಪ್ಪಬೇಕಾಯಿತು, ಬಾಲಕನು ಒಂದು ಪ್ರಶ್ನೆ ಕೇಳಿದ–ರಾಜಾ ದಾನದಲ್ಲಿ ಅತಿ ಮುಖ್ಯವಾದುದು ಯಾವುದು ?

ರಾಜನು ಸುವರ್ಣದಾನ, ಗೋದಾನ, ಭೂದಾನ, ಅನ್ನದಾನ, ಹೀಗೆ ಒಂದೊಂದಾಗಿ ಹೇಳಿದ, ಬಾಲಕನು........"ಅಲ್ಲ" ಎಂದ.

ರಾಜನು ಮತ್ತ್ಯಾವುದು ? ಎಂದು ರೇಗಿದ.

ರಾಜಾ ನೀನು ಸೋತೆ_ದಾನದಲ್ಲೆಲ್ಲಾ ಕ್ಷಮಾದಾನವೇ ಶ್ರೇಷ್ಠವಾದುದು" ಎಂದ, ಸಭೆಯುಲ್ಲಿದ್ದ ಪಂಡಿತರೂ. ರಾಜಗುರುಗಳೂ ಹೌದು....ಹೌದು ಸರಿ ಎಂದರು.

ರಾಜ....ಪ್ರಾಣಿಗಳಲ್ಲೆಲ್ಲಾ ಅತಿ ಹೊಡ್ಡ ಪ್ರಾಣಿಯಾವುದು ?

ಬಾಲಕ....ತಿಮಿಂಗಿಲ.

ರಾಜ....ಮಹಾ ಶೂರನಾರು ?

ಬಾಲಕ....ಸೋತ ಶತ್ರುವನ್ನು ಕ್ಷಮಿಸುವವನೇ ಮಹಾಶೂರ

ರಾಜ....ಧರ್ಮ ಯಾವುದು ?

ಬಾಲಕ....ದಯೆಯೇ ಧರ್ಮ.

ರಾಜ....ಅಧರ್ಮ ಯಾವುದು ?

**ಬಾಲಕ**....ಇತರರ ಮನಸ್ಸನ್ನು ನೋಯಿಸುವುದೇ ಅಧರ್ಮ.

ರಾಜ....ಶ್ರೇಷ್ಠನಾದ ರಾಜನಾರು ?

**ಬಾಲಕ**....ಅಹಂಕಾರ ವಿಲ್ಲದವನೇ ಶ್ರೇಷ್ಠನಾದ ರಾಜ.

ಬಾಲಕನ ಉತ್ತರವನ್ನು ಸಭಿಕರೆಲ್ಲರೂ ಮೆಚ್ಚಿದರು, ರಾಜಗುರುಗಳು ರಾಜನಿಗೆ ಸರಿಯಾಗಿ ಬುದ್ಧಿಕಲಿಸಿದ ಬಾಲಕ, ಎಂದು ಸಂತೋಷಪಟ್ಟರು. ರಾಜಾ ಈಗ ನನ್ನ ಪ್ರಶ್ನೆಗೆ ನೀನು ಉತ್ತರ ಹೇಳು. ಎಂದು_ಬಾಲಕ_ ಕಳೆದು ಹೋದುದನ್ನು ಮತ್ತೆ ಪಡೆಯಲಾರದುದು ಯಾವುದು ?

ರಾಜ....ಪ್ರಾಣ.

ಬಾಲಕ....ತಪ್ಪು ರಾಜಾ....ನಾವೇ ಪ್ರಾಣವನ್ನು ಕಳೆದುಕೊಂಡಮೇಲೆ ಪಡೆಯುವುದಕ್ಕೆ ನಾವೆಲ್ಲಿರುತ್ತೇವೆ? "ಕಾಲ" ಕಳೆದರೆ ಮತ್ತೆ ಸಿಗಲಾರದು" ಸರಿತಾನೆ ? ನೀನು ಸೋತೆ.

**ಬಾಲಕ**....ದೇವರು ಎಲ್ಲಿದ್ದಾನೆ—?

ರಾಜ....ನಮ್ಮ ಮನಸ್ಸಿನಲ್ಲಿ_ಮಂದಿರಗಳಲ್ಲಿ ಎಲ್ಲೆಲ್ಲಿಯೂ ಇದ್ದಾನೆ.

**ಬಾಲಕ**....ರಾಜಾ_ನಾನು ಇದು ಸರಿಯಲ್ಲ ಎನ್ನುತ್ತೇನೆ

ರಾಜ....ಮತ್ತಿನ್ಯಾವುದು ? ಎಂದು ರೇಗಿದ ರಾಜ.

ಬಾಲಕ....ಸಭಿಕರೆಲ್ಲರೂ ಇದನ್ನು ಒಪ್ಪುವಿರೋ ಇಲ್ಲವೋ ? ಕೇಳಿ.

ನಮ್ಮನ್ನು ಹೊತ್ತು ಹೆತ್ತು ಸಾಕಿ, ಸಲಹಿದ ತಾಯಿಯೇ ದೇವರು_ ಎಂದ. ಸಭಿರೆಲ್ಲರೂ_ಸರಿ_ಭೇಷ್_ಭೇಷ್ ಎಂದರು.

"ನೀನು ಸಾಮಾನ್ಯ ಬಾಲಕನಲ್ಲ_ಮಹಾಜ್ಞಾನಿ" ಎಂದು ಹೊಗಳಿದರು. ರಾಜನು ನಾನು ಸೋತೆ ಶ್ರೇಷ್ಠ ಬಾಲಕ_ನಾನು ನಿನ್ನ ದಾಸನಾಗಿದ್ಧೇನೆ_ ಎಂದು ಒಪ್ಪಿಕೊಂಡ.

ಬಾಲಕನು_ರಾಜಾ ! ನಿನ್ನನ್ನಾಗಲಿ, ನಿನ್ನ ರಾಜ್ಯವನ್ನಾಗಲಿ, ಕಟ್ಟಿಕೊಂಡು ನಾನೇನು ಮಾಡಲಿ, ನನ್ನೊಂದಿಗೆ ಆಡಲು ನನ್ನ ಸ್ನೇಹಿತರು ಕಾದಿ

ದ್ದಾರೆ—ನಾನು ಹೋಗುತ್ತೇನೆ ಎಂದು ಹೇಳಿದ್ದೇ ಸಭೆಯಿಂದ, ಕುಣಿಯುತ್ತಾ, ನೆಗೆಯುತ್ತಾ. ಹೊರಕ್ಕೆ ಓಡಿಹೋದ

ಅದೇ ಬಾಲಕನೇ ಮುಂದೆ ಮಹಾಜ್ಞಾನಿಯಾಗಿ ಪ್ರಸಿದ್ಧನಾದನು.

# ವಿಚಿತ್ರ ಮಕ್ಕಳ ಭವಿಷ್ಯ

ಕಲಾಪುರವೆಂಬುದೊಂದು ಊರು, ಕರಿಯಪ್ಪ ಎಂಬುವನೊಬ್ಬ ಬಡವನಿದ್ದ. ಅವನು ಆಯದಿನದ ಕೂಲಿ ಸಂಪಾದನೆ ಮಾಡಿ ಸಂಸಾರ ನಡೆಸಬೇಕಾಗಿತ್ತು. ಅವನ ಹೆಂಡತಿ ಗಂಗಮ್ಮನಿಗೆ ಬಡತನದ ಸಂಸಾರಮಾಡೀ ಮಾಡೀ ಸಾಕಾಗುತ್ತಿತ್ತು.

ಅವರಿಗೆ ಮೂರು ಜನ ಹೆಣ್ಣು ಮಕ್ಕಳಿದ್ದರು. ಒಂದಾದರೂ ಗಂಡುಮಗುವಾದರೆ ಸಾಕು. ಕುಟುಂಬ ಯೋಜನೆಯನ್ನು ಅನುಸರಿಸಿ ಮಕ್ಕಳಾಗುವುದನ್ನು ತಡೆಗಟ್ಟೋಣ ಈ ಬಡತನದ ಬೇಗೆ ಸಾಕು-ಸಾಕು, ಮಕ್ಕಳನ್ನು ಸರಿಯಾಗಿ ಸಾಕಲಾರದ ನಮಗೆ ಹೆಚ್ಚು ಮಕ್ಕಳೇಕೆ ? ಎಂದು ಗಂಗಮ್ಮ ಕರಿಯಪ್ಪ ಇಬ್ಬರೂ ಬಲು ಬೇಸರದಿಂದ ದಿನ ಕಳೆಯುತ್ತಿದ್ದರು.

ಗಂಗಮ್ಮ ಪುನಃ ಗರ್ಭವತಿಯಾದಳು. ದೇವರೇ ಈ ಸಲವಾದರೂ ಗಂಡು ಮಗುವನ್ನು ಕರುಣಿಸು ಎಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದರು. ಅವರ ಪ್ರಾರ್ಥನೆ ಸಲ್ಲಿತೋ ಎಂಬಂತೆ ಗಂಗಮ್ಮನಿಗೆ ಗಂಡುಮಗುವಾಯಿತು. ಅದೂ ಅವಳಿ ಮಕ್ಕಳು. ಎರಡೂ ಗಂಡು. ಆದರೆ ವಿಚಿತ್ರ ದೈವಸೃಷ್ಟಿ ಒಂದಕ್ಕೊಂದು ಬೆನ್ನಿನ ಭಾಗದಲ್ಲಿ ಅಂಟಿಕೊಂಡು ಒಟ್ಟಿಗೆ ಜೋಡಿಯಾಗಿ ಹುಟ್ಟಿವೆ, ಗಂಗಮ್ಮ ಬಹಳ ಕಷ್ಟವನ್ನು ಅನುಭವಿಸಿ ಈ ಮಕ್ಕಳನ್ನು ಹೆತ್ತಳು.

ಈ ವಿಚಿತ್ರ ಮಕ್ಕಳನ್ನು ನೋಡಲು ಜನ ಜಾತ್ರೆಯೇ ಬರುತ್ತಿತ್ತು. ಗಂಗಮ್ಮ-ಕರಿಯಪ್ಪನಿಗೆ ಬಹಳ ಚಿಂತೆಯಾಯಿತು. ಈ ವಿಚಿತ್ರ ಮಕ್ಕಳನ್ನು

ಹೇಗೆ ಬೆಳೆಸುವುದೆಂದು, ಮತ್ತು ಗಂಡುಮಕ್ಕಳಾದರೂ ಈ ರೀತಿಯ ಜೋಡಿ ಮಕ್ಕಳು ಏನು ಕೆಲಸಕ್ಕೆ ಉಪಯೋಗ ? ಏನು ಸಾರ್ಥಕವಾಯಿತು ? ಎಂದು ಬೇಸರದಿಂದಿದ್ದರು.

ಬೆಂಗಳೂರಿನಲ್ಲಿದ್ದ ಗಂಗಮ್ಮನ ಅಣ್ಣ ಮಕ್ಕಳನ್ನು ನೋಡಲು ಬಂದ. ಮಕ್ಕಳು ಆರೋಗ್ಯವಾಗಿ ಬೆಳೆಯುತ್ತಿದ್ದರು. ಆದರೆ ಒಂದು ಮಗುವನ್ನು ಬಿಟ್ಟು ಇನ್ನೊಂದು ಮಗು ಚಲಿಸುವಂತಿರಲಿಲ್ಲ. ತಲೆ, ಮುಖ, ಬಾಯಿ, ಕೈಯಿ, ಕಾಲು, ಎಲ್ಲಾ ಅಂಗಾಗಗಳೂ ಎರಡು ಮಕ್ಕಳಂತೆಯೇ ಸರಿಯಾಗಿದ್ದುವು. ಆದರೆ ಬೆನ್ನಿನ ಭಾಗದಲ್ಲಿ ಮೂಳೆ, ಚರ್ಮಗಳು ಜೋಡಿಯಾಗಿ ಅಂಟಿಕೊಂಡಿದ್ದುವು ಇದರಿಂದ ಎರಡು ಮಕ್ಕಳನ್ನೂ ಒಟ್ಟಿಗೇ ಎತ್ತಿಕೊಳ್ಳಬೇಕು. ಒಟ್ಟಿಗೇ ಮಲಗಿ ಸಿರಬೇಕು. ಹೀಗಿದ್ದುವು.

ಗಂಗಮ್ಮನ ಅಣ್ಣ ಸ್ವಲ್ಪ ಹೊತ್ತು ಮಕ್ಕಳನ್ನು ನೋಡುತ್ತಾ ಯೋಚಿಸಿದ. ನಂತರ ಖುಷಿಯಿಂದ ಗಂಗಾ ನಿನ್ನ ಅದೃಷ್ಟ ತೆರೆಯಿತು. ನಿನ್ನ ಬಡತನ ಹರಿಯಿತೆಂದು ತಿಳಿ ಎಂದ.

ಅಷ್ಟೇನೂ ತಿಳುವಳಿಕೆ ಇಲ್ಲದ ಗಂಗಮ್ಮ ವ್ಯಸನದಿಂದ, ಅಯ್ಯೋ ಅಣ್ಣಾ ! ಈಶನೇಶ್ವರಗಳು ಹುಟ್ಟಿದಮೇಲೆ ಬೇರೆ ಮಕ್ಕಳಿಗೆ ಅರ್ಧ ಹೊಟ್ಟೆಗೂ ಊಟ ಸಿಕ್ಕುತ್ತಿಲ್ಲ. ಕೂಲೀಲಿ ನಾಲ್ಕು ಕಾಸು ಬಂದರೆ ಅದೆಲ್ಲಾ ಈ ಎರಡರ ಹೊಟ್ಟೆ ತುಂಬಲು ಹಾಲಿಗೇ ಆಗ್ತದೆ. ಇನ್ನೇನಪ್ಪ ನನ್ನ ಅದೃಷ್ಟ ? ಎಂದಳು ಗಂಗಮ್ಮ .


''ನೋಡುಗಂಗ ! ನಿನಗೆ ಒಂದೂ ಗೊತ್ತಾಗೊಲ್ಲ. ನಾವು ಪಟ್ಟಣವಾಸದವರು ಕುಂತರೆ, ನಿಂತರೆ ಹಣ ಸಂಪಾದನೆ ಮಾಡೋರು, ಖರ್ಚು ಮಾಡೋರು. ಈಗ ನಿನಗೆ ಹುಟ್ಟಿರುವ ವಿಚಿತ್ರ ಮಕ್ಕಳಿಂದ ತಿಂಗಳಿಗೆ ನೂರಾರು ರೂಪಾಯಿ ಸಂಪಾದಿಸಬಹುದು. ಎಂದ

ಗಂಗಮ್ಮ ಆಸೆಯಿಂದ ''ಹೌದಾ! ಅಣ್ಣಾ? ಏಗ್ ಮಾಡಬೇಕು ? ಹೆಂಗ್ ಮಾಡಬೇಕು ? ಎಲ್ಲಾ ನೀನೇ ತಿಳಿಸಪ್ಪಾ" ಎಂದಳು.

ಗಂಗಮ್ಮನ ಅಣ್ಣ ಲಿಂಗಣ್ಣನಿಗೆ ಬೇಕಾದದ್ದೂ ಅದೇ. ಬೆಳಿಗಾಗ ಎದ್ದರೆ ಯಾರ-ಯಾರ ಕೈಕಾಲೋ ಕಟ್ಟಿ ಬ್ರೋಕರ್ ಕೆಲಸ ಮಾಡಿ ನಾಲ್ಕು ಕಾಸು ಸಂಪಾದಿಸಬೇಕಾಗಿತ್ತು. ಈಗ ಈ ಮಕ್ಕಳಿನ್ನು ಪ್ರದರ್ಶಿಸಿ ನಿರಾಯಾಸವಾಗಿ ಹಣ ಸಂಪಾದಿಸಬಹುದು ಎಂದು ತೀರ್ಮಾನಿಸಿದ.

''ಗಂಗಾ ! ನೋಡು ಎಲ್ಲಾ ಜವಾಬ್ದಾರಿನನಗಿರಲಿ. ನನ್ನ ಜೊತೆಯಲ್ಲಿ ಬೆಂಗಳೂರಿಗೆ ಬಂದು ಬಿಡು ನೀನೂ ಮಕ್ಕಳೂ ಹಾಯಾಗಿ ಇರುವಂತೆ ಏರ್ಪಾಡು ಮಾಡುತ್ತೇನೆ ಎಂದ.

ಗಂಗಮ್ಮ ಮಕ್ಕಳ ಸಮೇತ ಬೆಂಗಳೂರಿಗೆ ಬಂದಳು. ಮಕ್ಕಳಿಗೆ ಆರು ತಿಂಗಳು ತುಂಬಿತ್ತು. ಎರಡೂ ಪುಷ್ಟಿಯಾಗಿ ಮುದ್ದಾಗಿದ್ದವು ಆ ಮಕ್ಕಳಿಗೆ ರಾಮ-ಲಕ್ಷ್ಮಣ ಎಂದು ಹೆಸರಿಟ್ಟರು.



ಜೋಡಿಯಾಗಿರುವ ಮಕ್ಕಳ ಪ್ರದರ್ಶನ. ಜನನೋಡುತ್ತಿರುವುದು

ಲಿಂಗಣ್ಣ ಪ್ರದರ್ಶನಕ್ಕೆ ಎಲ್ಲಾ ಏರ್ಪಾಡು ಮಾಡಿ ಬಟ್ಟೆಯ ತೆರೆಗಳಿಂದ ಮರೆ ಮಾಡಿ ಅದರೊಳಗೆ ಮಕ್ಕಳನ್ನಿಟ್ಟ. " ವಿಚಿತ್ರ ಮಗು, ಬಂದುನೋಡಿ. ಕೇವಲ 50 ಪೈಸೆ ಟಿಕೇಟ್" ಎಂದು ಬೋರ್ಡು ಹಾಕಿದ. ಹೆಚ್ಚು ಜನ

ಓಡಾಡುವ ಕಡೆ ಪ್ರದರ್ಶಿಸಿದ. ಬೆಂಗಳೂರಿನಲ್ಲಿ ಜನ ಎಲ್ಲದಕ್ಕೂ ಪ್ರೋತ್ಸಾಹ ಕೊಡುತ್ತಾರೆ ಇನ್ನು ಅಪರೂಪದ ಜೋಡಿ ಮಗುವನ್ನು ನೋಡದೆ ಬಿಡುತ್ತಾರೆಯೇ ?

ಲಿಂಗಣ್ಣನಿಗೆ ಅನಾಯಾಸವಾಗಿ ದಿನಕ್ಕೆ 40-50 ರೂಪಾಯಿಗಳು ದೊರಕುತ್ತಿದ್ದುವು. ಸಾವಿರದ ಐನೂರು ರೂಪಾಯಿ ಸಂಬಳ ಬರೋಸಾಹುಕಾರನಿಗೆ ಸಮ ಆದ, ಬಾಡಿಗೆಗೆ ಒಂದು ಒಳ್ಳೆ ಮನೆ ಮಾಡಿ ತನ್ನ ಸಂಸಾರದೊಂದಿಗೇ ಗಂಗಮ್ಮನ ಸಂಸಾರವನ್ನೂ ಇಟ್ಟ.

ರಾಮ-ಲಕ್ಷ್ಮಣರು ದಿನ ದಿನಕ್ಕೆ ಆಟ ಪಾಠ ಕಲಿತರು. ಮಾತು ಕಲಿತರು, ಈ ಜೋಡಿ ಮಕ್ಕಳಲ್ಲಿ ಒಬ್ಬೊಬ್ಬರ ಸ್ವಭಾವ ಬೇರೆ ಬೇರೆಯಾಗಿದೆ ಎನ್ನುವುದು ಅವರು ಬೆಳೆಯುತ್ತಾ ಬಂದಂತೆ ತಿಳಿಯಿತು. ರಾಮ ಮೆತುಸ್ವಭಾವ ಲಕ್ಷ್ಮಣ ಕೋಪಿಷ್ಟ, ಘಾಟಿ. ಎರಡನ್ನೂ ಎತ್ತಿ ಒಂದುಕಡೆ ಕುಳ್ಳಿರಿಸಿದರೆ ಲಕ್ಷ್ಮಣ ಹಿಂದಕ್ಕೆ ಕೈ ಚಾಚಿ ರಾಮನ ಮುಖವನ್ನು ಪರಚಿ ಇಡುತ್ತಿದ್ದ ರಾಮನು ಅಳುತ್ತಿದ್ದ. ಆದರೆ ಇವನಿಂದ ತಪ್ಪಿಸಿಕೊಂಡು ರಾಮ ಮುಂದೆ ಹೋಗುವಂತಿಲ್ಲ.

ಲಕ್ಷ್ಮಣ ತನಗೆ ತೋಚಿದ್ದನ್ನು ಲೂಟಿಮಾಡಲು ಮುಂಡಿಹಾಕಿಕೊಂಡು ಮುಂದೆ ಹೋಗಲು ಆತುರ ನಾಗುತ್ತಿದ್ದ. ಆದರೆ ರಾಮ ಅವನ ಜೊತೆ ಹೋಗ ಬೇಕಾದರೆ ಹಿಂದ ಹಿಂದಕ್ಕೆ ಮುಂಡಿ ಹಾಕಬೇಕಾಗುತ್ತಿತ್ತು. ಹಾಗೆ ಹಿಂದಕ್ಕೆ ಮುಂಡಿ ಹಾಕುವುದು ಕಷ್ಟವಾಗಿ ರಾಮ ಸುಮ್ಮನಿದ್ದರೆ ತುಂಟ ಲಕ್ಷ್ಮಣ ಬಿಡುತ್ತಿರಲಿಲ್ಲ ಅವನನ್ನು ಪರಚಿ ಹಿಂಸಿಸಿ ತನ್ನ ಜೊತೆ ಎಳೆದುಕೊಂಡು ಹೋಗುತ್ತಿದ್ದ. ಪ್ರದರ್ಶನಕ್ಕೆ ಇಟ್ಟಾಗಲೂ ಲಕ್ಷ್ಮಣ ಏನಾದರೂ ಚೇಷ್ಟೆ ಮಾಡುತ್ತಾ ರಾಮನನ್ನು ಗೋಳುಗುಟ್ಟಿಸುತ್ತಿದ್ದ.

ಗಂಗಮ್ಮ ಮಕ್ಕಳ ಈ ಬಡಿದಾಟವನ್ನು ನೋಡಿ ವ್ಯಸನ ಪಡುತ್ತಿದ್ದಳು. ಇನ್ನೂ ಒಂದು ವರ್ಷದ ಮಕ್ಕಳಾಗಿರುವಾಗಲೇ ಹೀಗೆ ಒಬ್ಬರಿಗೊಬ್ಬರು ಕಿತ್ತಾಡುತ್ತವೆಯಲ್ಲಾ ! ದೊಡ್ಡವರಾದ ಮೇಲೆ ಏನುಗತಿ ? ಎಂದು ಅವುಗಳ ಹತ್ತಿರವೇ ಇದ್ದು ನೋಡಿಕೊಳ್ಳುತ್ತಿದ್ದಳು. ಮಕ್ಕಳನ್ನು ನೋಡಲು ಬಂದಿದ್ದವರಲ್ಲಿ

ಕೆಲವು ತಜ್ಞರು ಗಂಗಮ್ಮನಿಗೆ ಸಲಹೇ ಕೊಟ್ಟರು "ನೋಡಮ್ಮಾ! ನಿನ್ನ ಮಕ್ಕಳು ಚಿಕ್ಕವರಾಗಿರುವಾಗಲೇ ಆ ಅಂಟಿಕೊಂಡಿರುವ ಜಾಗವನ್ನು ಆಪರೇಷ್ ಮಾಡಿಸಿ ಬಿಡು. ಹೀಗೆಯೇ ಬಿಟ್ಟರೆ ಅವರ ಜೀವನ ಬಹಳ ಕಷ್ಟವಾಗುತ್ತದೆ" ಎಂದರು.

ಗಂಗಮ್ಮ ದೊಡ್ಡ ಡಾಕ್ಟರುಗಳಿಗೆ ಮಗುವನ್ನು ತೋರಿಸಿದಳು. ಮಗು ವನ್ನು ಪರೀಕ್ಷಿಸಿ, ಏನೂ ತೊಂದರೆಯಾಗುವುದಿಲ್ಲ ಈಗಲೇ ಮೂಳೆ ಬಲಿಯುವು ದಕ್ಕೆ ಮೊದಲೇ ಆಪರೇಷ್ ಮಾಡಸಿಬಿಡಿ ಎಂದು ಹೇಳಿದರು.

ಗಂಗಮ್ಮ ಅಣ್ಣನಿಗೆ ಈ ವಿಚಾರ ತಿಳಿಸಿ "ಅಣ್ಣಾ ! ಮುಂದೆ ದೊಡ್ಡವ ರಾದ ಮೇಲೆ ಇವರು ಸುಖವಾಗಿ ಬಾಳಲಿ, ರಾಮ ಲಕ್ಷ್ಮಣರನ್ನು ಬೇರೆ ಬೇರೆ ಮಾಡಿಸಿಬಿಡೋಣ, ಎಂದಳು.

ಲಿಂಗಣ್ಣ ಈಗಾಗಲೇ ದುಡ್ಡಿನ ಆಸೆ ಕಂಡಿದ್ದ. ಆ ಮಕ್ಕಳಿಂದ ಬೇಕಾ ದಷ್ಟು ಸಂಪಾದನೆಯಾಗುತ್ತಿತ್ತು. ಮನೆಯುವರೆಲ್ಲಾ ಸುಖ ಜೀವನ ಸಾಗಿಸು ತ್ತಿದ್ದರು, ಆದ್ದರಿಂದ ತನ್ನ ಸ್ವಾರ್ಥ ಸಾಧನೆಗಾಗಿ ಮಕ್ಕಳನ್ನು ಬೇರೆ-ಬೇರೆ ಮಾಡಲು ಒಪ್ಪಲಿಲ್ಲ.

ಗಂಗಾ "....! ಅವರಿಗೇನು ತೊಂದರೆ ಸುಮ್ಮನಿರು ನೀನು. ಉಂಡು- ತಿಂದು ಚೆನ್ನಾಗಿ ಬೆಳೆಯುತ್ತಾರೆ, ಆಪರೇಷ್. ಅಪಾಯ" ಎಂದುಬಿಟ್ಟ, ಪಾಪ ! ಗಂಗಮ್ಮ ಅರಿಯದವಳು. ತಾಯಿಯ ಕರುಳು ಮಕ್ಕಳಿಗಾಗಿ ಹಾತೊರೆಯು ತ್ತಿದರೂ ಅಣ್ಣನ ಮಾತಿಗೆ ಬದಲು ಹೇಳಲಾರದೆ ಸುಮ್ಮನಾದಳು.

ಲಿಂಗಣ್ಣ ಮಕ್ಕಳನ್ನು ಬೇರೆ ಊರುಗಳಿಗೆ ಕರೆದುಕೊಂಡು ಹೋಗಿ ಜಾತ್ರೆಗಳಲ್ಲೆಲ್ಲಾ ಪ್ರದರ್ಶನಮಾಡುತ್ತಿದ್ದ.

ರಾಮ ಲಕ್ಷ್ಮಣರು 10-12 ವರ್ಷದ ಮಕ್ಕಳಾದರು. ಮೊದ-ಮೊದಲು ಜನರು ತಮ್ಮನ್ನು ನೋಡಿ-ನೋಡಿ ಆಶ್ಚರ್ಯ ಪಡುತ್ತಿದ್ದುದನ್ನು ಕಂಡು ಅವರಿಗೆ ಅದೊಂದು ಮೋಜೆನಿಸುತ್ತಿತ್ತು.

ಆದರೆ ಬರ-ಬರುತ್ತಾ ಆ ನಿರ್ಭಂಧ ಜೀವನ ಬಹಳ ಬೇಸರವಾಗ ತೊಡಗಿತು. ಹೊರಗಡೆ ಹೋಗಿ ಓಡಾಡುವಂತಿಲ್ಲ, ಜಾತ್ರೆ ಸಂತೋಷ ಕೂಟ ಗಳನ್ನು ನೋಡುವಂತಿಲ್ಲ, ಹೊರಗಡೆ ಇವರು ಓಡಾಡಿಬಿಟ್ಟರೆ ಜನರು ಬಿಟ್ಟಿಯಾಗಿ ಇವರನ್ನು ನೋಡಿ ಬಿಡುತ್ತಾರೆ" ಎಂದು ಲಿಂಗಣ್ಣ ಆ ಮಕ್ಕಳನ್ನು ಬೋನಿನಲ್ಲಿ ಕೂಡಿಹಾಕಿದ ಹಾಗೆ ಇಟ್ಟಿದ್ದ.

ಬುದ್ಧಿ ತಿಳಿದಮೇಲೆ ರಾಮುಲಕ್ಷ್ಮಣರು ಪ್ರದರ್ಶನಕ್ಕೆ ಒಪ್ಪದೆ ಹೊರಗಡೆ ಹೋಗಲು ಹಾತೊರೆಯುತ್ತಿದ್ದರು, ಆಗೆಲ್ಲಾ ಲಿಂಗಣ್ಣ ಅವರನ್ನು ಚೆನ್ನಾಗಿ ಬಡಿದು ಬಲವಂತವಾಗಿ ಒಳಗೆ ಇಡುತ್ತಿದ್ದ.

ರಾಮು ಲಕ್ಷ್ಮಣರು ಹಿಂದು ಮುಂದಾಗಿದ್ದುದರಿಂದ ಒಬ್ಬರ ಮುಖವನ್ನು ಒಬ್ಬರು ಎಂದೂ ನೋಡುವುದಕ್ಕಾಗುತ್ತಿರಲಿಲ್ಲ. ಲಕ್ಷ್ಮಣನು ಮುಂದೆ-ಮುಂದೆ ನಡೆದರೆ ರಾಮುನು ಅವನ ಜೊತೆಯೇ ಹಿಂದೆ-ಹಿಂದೆ ನಡೆಯ ಬೇಕಾಗುತ್ತಿತ್ತು.

ಒಂದು ದಿನ ಘಾಟಿಯಾಗಿದ್ದ ಲಕ್ಷ್ಮಣ ರಾಮುನೊಂದಿಗೆ ಲೋ ! ನನಗೆ ತುಂಬಾ ಬೇಸರವಾಗಿದೆ. ಇದರಿಂದ ತಪ್ಪಿಸಿಕೊಂಡು ಎಲ್ಲಾದರೂ ದೂರ ಹೋಗೋಣ ಎಂದ, ರಾಮು ತುಂಬಾ ಭಯಸ್ಥ "ಬೇಡಕಣೋ ನಮಗೆ ಯಾವ ಸ್ಥಳವೂ ಗೊತ್ತಿಲ್ಲ ಭಯವಾಗುತ್ತಪ್ಪಾ ! ಬೇಡ" ಎಂದ ರಾಮು.

ಲಕ್ಷ್ಮಣನಿಗೆ ಸಿಟ್ಟೋ, ಸಿಟ್ಟು ! ನಾನು ಹೇಳಿದಂತೆ ನೀನು ಒಂದು ಮಾತೂ ಕೇಳುವುದಿಲ್ಲ. ನಾನೊಬ್ಬನೇ ಆಗಿದ್ದರೆ ಈ ವೇಳೆಗೆ ಎಲ್ಲೋ ಹೊರಟು ಹೋಗುತ್ತಿದ್ದೆ. ನೀನೊಬ್ಬ ಹೇಡಿ " ಎಂದು ಮೂದಲಿಸಿ ಎದ್ದು ಹೊರಟ ಲಕ್ಷ್ಮಣ.

ರಾಮುನಿಗೆ ಇಷ್ಟವಿಲ್ಲದಿದ್ದರೂ ಅವನು ಎಳೆದುಕೊಂಡು ಹೋದಕಡೆ ಸುತ್ತಾಡಿ ಬರುವ ಆಸೆಯಿಂದ ಲಿಂಗಣ್ಣನ ಕಣ್ಣು ತಪ್ಪಿಸಿ ಹೊರಟುಬಿಟ್ಟರು.

ರಾತ್ರಿ 10 ಗಂಟೆ ಸಮಯ 'ಜಾತ್ರೆಯಲ್ಲಿ ಅಂಗಡಿ ಸಾಲುಗಳು, ಏನೇನೋ ಪ್ರದರ್ಶನ ಒಂದೊಂದಾಗಿ ನೋಡುತ್ತಾ ಮುಂದೆನಡೆದರು. ಇಬ್ಬರಿಗೂ ಖುಷಿಯೋ ಖುಷಿ, ಆದರೆ ಹಿಂದು ಮುಂದಾಗಿ ನಡೆದು ಬರುತ್ತಿರುವ ಈ

ವಿಚಿತ್ರ ಹುಡುಗರನ್ನು ನೋಡಲು ಜನ ಅವರ ಸುತ್ತಲೂ ಒಂದು ಜಾತ್ರೆ ಸೇರಿ ಬಿಟ್ಟರು.

ಲಕ್ಷ್ಮಣನಿಗೆ ವಿಪರೀತ ಸಿಟ್ಟು ಬಂತು. "ಇಲ್ಲಿಯೂ ನಮ್ಮನ್ನು ಹಾಯಾಗಿ ಓಡಾಡಲು ಬಿಡುವುದಿಲ್ಲ ಹಾಳು ಜನ. ತೊಲಗಿ ಹೋಗಿ ಎಲ್ಲಾ ದೂರು ಎಂದು ಬೈದ. ಜನರು ಕದಲಲಿಲ್ಲ, ಆ ವೇಳೆಗೆ ಲಿಂಗಣ್ಣ ಎಲ್ಲೆಲ್ಲೋ ಇವರನ್ನು ಹುಡುಕುತ್ತಾ ಗುಂಪಿದ್ದ ಸ್ಥಳಕ್ಕೆ ಬಂದ. ರಾಮ ಲಕ್ಷ್ಮಣರನ್ನು ಕಂಡ.

ಮಾವನನ್ನು ನೋಡಿದ್ದೇ ರಾಮ ಲಕ್ಷ್ಮಣರಿಗೆ ಎದೆ ನಡುಗಹತ್ತಿತ್ತು. ಇವತ್ತು ಚೆನ್ನಾಗಿ ತಮಗೆ ಒದೆ ಬೀಳುತ್ತದೆ ಎಂದು ಗೊತ್ತು 'ತಪ್ಪಿಸಿಕೊಂಡು ಓಡಿಹೋಗಲು ಪ್ರಯತ್ನಿಸಿದರು. ಹೇಗೆ ಓಡುತ್ತಾರೆ ? ಪಾಪ ! ಹಿಂದೆ ಇರುವವನು ಮುಂದೆ ಹೋಗುವವನ ಜೊತೆ ನಡೆಯುವುದೇ ಕಷ್ಟ ಇನ್ನು ಓಡುವುದು ಹೇಗೆ ?

ಲಿಂಗಣ್ಣ ಅವರ ಹತ್ತಿರ ಬಂದು "ನನಗೆ ಕಾಣದೆ ಬಂದಿದ್ದೀರಾ ? ಇವತ್ತು ನಿಮ್ಮ ಚರ್ಮ ಸುಲೀತೀನಿ ಬನ್ನಿ" ಎಂದು ಎಳೆದುಕೊಂಡು ಹೋದ ! ರಾಮ ಲಕ್ಷ್ಮಣರ ಜೀವನದಲ್ಲಿ ಸ್ವತಂತ್ರವೇ ಇಲ್ಲವಾಯಿತು. ಪ್ರದರ್ಶನಕ್ಕೆ ನಿಲ್ಲುವುದು, ಹಸಿದಾಗ ತಿನ್ನುವುದು ಇಷ್ಟೇ ಅವರ ಬಾಳು.

ಈ ಬಾಳಿನ ಬೇಸರದಲ್ಲಿ ಸಿಟ್ಟಿನ ಲಕ್ಷ್ಮಣನಿಗೆ ರಾಮನ ತಲೆಯನ್ನು ಕಂಡರೆ ಆಗುತ್ತಿರಲಿಲ್ಲ. ಸದಾ ಕಾಲವೂ ಅವನಿಗೆ ಚಿತ್ರಹಿಂಸೆ ಕೊಡುತ್ತಿದ್ದ. ಇಬ್ಬರೂ ಒಟ್ಟಿಗೆ ಮಲಗಿ ನಿದ್ರಿಸುತ್ತಿದ್ದರೆ ಲಕ್ಷ್ಮಣನಿಗೆ ಎಚ್ಚರವಾದಕೂಡಲೇ ರಾಮನನ್ನು ಜಿಗುಟಿ ಬಡಿದು ಎಬ್ಬಿಸುತ್ತಿದ್ದ, ರಾಮನೂ ಕೆಲವೊಮ್ಮೆ ಲಕ್ಷ್ಮಣನಿಗೆ ಸಿಕ್ಕಾಪಟ್ಟೆ ಬಡಿಯುತ್ತಿದ್ದ. ಏನೇ ಆದರೂ ಇಬ್ಬರೂ ಅಂಟಿಕೊಂಡೇ ಅನುಭವಿಸಬೇಕು. ದೂರ ಹೋಗುವಂತಿಲ್ಲ, ಒಬ್ಬರ ಮೇಲೊಬ್ಬರಿಗೆ ದ್ವೇಷ ಬೆಳೆಯ ತೊಡಗಿತು, 25 ವರ್ಷದ ಪ್ರಾಯಸ್ಥರಾದರು. ಎಲ್ಲರಂತೆ ತಾವೂ ಮದುವೆಯಾಗಲು ಆಸೆಪಟ್ಟರು. ಆದರೆ ಸಾಧ್ಯವಿಲ್ಲದ ಮಾತು, ಮಕ್ಕಳ ಈ ಕರ್ಮವನ್ನು ನೋಡಿ ಗಂಗಮ್ಮ ಕೊರಗುತ್ತಿದ್ದಳು.

ಒಂದು ದಿನ ಲಕ್ಷ್ಮಣನಿಗೆ ರಾಮನಮೇಲೆ ವಿಪರೀತ ಸಿಟ್ಟುಬಂತು. ಎಷ್ಟೋದಿನದಿಂದ ವಿಷದಪುಡಿ ಬಚ್ಚಿಟ್ಟಿದ್ದ. ಆ ದಿನ ರಾಮನ ತಿಂಡಿಯಲ್ಲಿ ಬೆರಸಿದ. ರಾಮ ತಿಂಡಿತಿಂದ ಕೂಡಲೇ ಸಂಕಟದಿಂದ ಒದ್ದಾಡತೊಡಗಿದ. ರಕ್ತ ಪರಿಚಲನೆ ಇಬ್ಬರಲ್ಲಿಯೂ ಒಂದಾಗಿ ಚಲಿಸುತ್ತಿದ್ದುದರಿಂದ ಕೆಲವು ನಿಮಿಷ ಗಳಲ್ಲಿಯೇ ಲಕ್ಷ್ಮಣನಿಗೂ ವಿಷವ್ಯಾಪಿಸಿತು. ಇಬ್ಬರೂ ವಿಲಿ–ವಿಲಿ ಒದ್ದಾಡಿ ಸತ್ತರು. ಗಂಗಮ್ಮ ಲಿಂಗಣ್ಣ ಮನೆಯಲ್ಲಿರಲಿಲ್ಲ. ಇಬ್ಬರೂ ಒಟ್ಟಿಗೆ ಸತ್ತು ಬಿದ್ದಿರುವುದನ್ನು ಬಂದು ನೋಡಿ ಎದೆ-ಎದೆ ಹೊಡೆದುಕೊಂಡು ಅತ್ತರು ಗಂಗಮ್ಮ ಗೋಳಾಡಿದಳು "ನೋಡು ಅಣ್ಣಾ! ಮಗುವಾಗಿದ್ದಾಗಲೇ ಇಬ್ಬರನ್ನು ಬೇರೆ ಬೇರೆ ಮಾಡಿದ್ದರೆ ಚೆನ್ನಾಗಿತ್ತು. ಡಾಕ್ಟರು ಹೇಳಿದ್ದನ್ನು ನೀನು ಕೇಳಲಿಲ್ಲ ಪಾಪ ಮಕ್ಕಳು ಒಂದು ದಿನಕ್ಕಾದರೂ ಸಂತೋಷವಾಗಿ ಬಾಳಲಿಲ್ಲ" ಎಂದು ರಾಮ ಲಕ್ಷ್ಮಣರನ್ನು ತಬ್ಬಿಕೊಂಡು ಗೋಳೋ ಎಂದುಅತ್ತಳು. ಮಕ್ಕಳೇ ಹೀಗೆ ನಮ್ಮ ಸ್ವಾರ್ಥಕ್ಕಾಗಿ ಬೇರೆಯವರನ್ನು ಬಲಿಕೊಡಬಾರದು.

## ಸತ್ಯಸಂಧ ಕಳ್ಳ

ದಟ್ಟವಾದ ಒಂದು ಕಾಡು ಮುಗಿಲೆತ್ತರಕ್ಕೆ ಬೆಳೆದ ಮರಗಳು. ಒತ್ತಾದ ಗಿಡ ಮರಗಳ ಮಧ್ಯೆ ಸೂರ್ಯನ ಕಿರಣಗಳೂ ತೂರಿ ಬರಲಾದಷ್ಟು ಗಿಡ ಮರ ಗಳು. ಊರಿಂದ ದೂರ ವಿದ್ದ ಆ ಕಾಡಿನೊಳಗೆ ಜನ ಸಂಚಾರ ಸಾಧ್ಯವೇ ಇಲ್ಲ.

ಇಂತಹ ಕಾಡಿನಲ್ಲಿ ಘೋರಸಿಂಹನೆಂಬ ಒಬ್ಬ ಕಳ್ಳರ ಗುರು ವಾಸವಾಗಿದ್ದ. ಅವನಿಗೆ ಭಯವೆಂಬುದೇ ಇಲ್ಲ. ಅವನು ಕಳ್ಳತನ ಮಾಡುವ ವಿದ್ಯೆಯನ್ನು ಹೇಳಿ ಕೊಡುತ್ತಿದ್ದ. ಅವನಿಗೆ ಅನೇಕ ಶಿಷ್ಯರಿದ್ದರು.

ಮಾರೀಚ ನೆಂಬ ಒಬ್ಬಯುವಕನು ಘೋರಸಿಂಹನ ಬಳಿ ಚೋರ ವಿದ್ಯೆ

ಕಲಿಯಲು ಬಂದ. ಅನೇಕ ವರ್ಷಗಳು ಗುರುವಿನಿಂದ ತರಪೇತಿ ಪಡೆದ ಕದಿಯುವುದರಲ್ಲಿ ಬಹಳ ಬುದ್ಧಿವಂತನಾದ

ಗುರುವಿಗೆ ಎಲ್ಲಾ ಶಿಷ್ಯರಿಗಿಂತಲೂ ಇವನನ್ನು ಕಂಡರೆ ಬಹಳ ವಿಶ್ವಾಸ. ಒಂದು ದಿನ ಗುರು "ಮಾರೀಚ : ನೀನು ಪಕ್ಕಾ ಕಳ್ಳನಾಗಿದ್ದೀ" ಇನ್ನು ನೀನು ನಿನ್ನ ವಿದ್ಯೆಯಿಂದ ಎಲ್ಲಾದರೂ ಬದುಕಿಕೋ ಹೋಗು " ಎಂದ

ಮಾರೀಚನು "ಗುರುವೇ : ತನುಗೆ ಗುರುಕಾಣಿಕೆ ಏನು ಕೊಡಲಿ?" ಎಂದು ಕೇಳಿದ.

ನೀನೇನೂ ಕೊಡಬೇಡ ಮಾರೀಚ : ನನ್ನದೊಂದು ಮಾತು ನಡಿಸಿ ಕೊಡು" ಎಂದ ಗುರು.

ಮಾರೀಚ ಸಂತೋಷದಿಂದ "ಆಗಲಿ ಗುರು. ಅದೇನು ಹೇಳಿ" ಎಂದ.

"ನೀನು ಎಲ್ಲಿ ಬೇಕಾದರೂ ಕಳ್ಳತನ ಮಾಡು ಆದರೆ ಎಂತಹ ಪ್ರಾಣ ಹೋಗುವ ಸಮಯ ಬಂದರೂ ಸುಳ್ಳು ಮಾತ್ರ ಹೇಳಬೇಡ ಇದು ನಿನ್ನ ಗುರ ವಿನ ಆಣತಿ'' ಎಂದ.

ಮಾರೀಚನು ಹಾಗೆಯೇ ಆಗಲಿ ಗುರುವೇ ನಿಮ್ಮ ಮಾತಿನಂತೆನಡೆಯು ತ್ತೇನೆ. ಎಂದು ಹೇಳಿ ಹೊರಟು ಹೋದ.

ಮಾರೀಚನು ಸಣ್ಣಪುಟ್ಟ ಕಳ್ಳತನವನ್ನು ಮಾಡಿ ಜೀವಿಸುತ್ತಾ ಬಂದ ಕಡೆಗೆ ಭಾರಿ-ಭಾರಿ ಕಳ್ಳತನ ಮಾಡಲು ತೊಡಗಿದ.

ಒಂದು ಬಾರಿ ಒಂದಾನೊಂದು ಪಟ್ಟಣಕ್ಕೆ ಹೋದ. ಅಲ್ಲಿ ರಾಜನ ಅರ ಮನೆ ಬಹಳ ಐಶ್ವರ್ಯದಿಂದ ತುಂಬಿದೆ ಎಂಬ ಸಮಾಚಾರ ತಿಳಿಯಿತು. ಈ ರಾತ್ರಿ ಅರಮನೆಗೆ ಕನ್ನ ಇಕ್ಕಬೇಕು, ಎಂದು ತೀರ್ಮಾನಿಸಿದ.

ಅರ್ಧರಾತ್ರಿಯ ವೇಳೆಗೆ ಅರಮನೆಯ ಸುತ್ತಲೂ ಕತ್ತಲು ಪ್ರದೇಶದಲ್ಲಿ ಓಡಾಡುತ್ತಾ ಅರಮನೆಯ ಒಳಕ್ಕೆ ಪ್ರವೇಶಿಸುವ ಮಾರ್ಗವನ್ನು ಪತ್ತೆ ಹಚ್ಚುತ್ತಿದ್ದ.

ಅದೇ ಸಮಯದಲ್ಲಿ ಒಬ್ಬ ಮನುಷ್ಯನು ಕರೀ ಕಂಬಳಿಯನ್ನು ಹೊದ್ದು ಮುಖಕ್ಕೆ ಮಸಿ ಬಳಿದು ವಿಕಾರ ಮಾಡಿಕೊಂಡು ಇವನಿದ್ದಲ್ಲಿಗೆ ಬಂದ.

ಮಾರೀಚನು ಇವನನ್ನು ನೋಡಿ ಗಾಬರಿಯಾಗದೆ "ಯಾರು ನೀನು? ಅರಮನೆಯ ಬಳಿ ಸುಳಿದಾಡುತ್ತಿದ್ದೀ : ಈ ಕೂಡಲೇ ರಾಜ ಭಟರಿಗೆ ತಿಳಿಸುತ್ತೇನೆ ಎಂದ. ಅದಕ್ಕೆ ಆ ಮನುಷ್ಯನು "ತಮ್ಮಾ : ನೀನೇನೂ ಗಾಬರಿಯಾಗಬೇಡ ನೀನು ಕಳ್ಳನೆಂದು ನನಗೆ ಗೊತ್ತು. ನಾನೂ ಕಳ್ಳ ನಿನ್ನ ಜೊತೆಯಲ್ಲಿ ಕಳ್ಳತನಕ್ಕೆ ನಾನೂ ಬರುತ್ತೇನೆ ನಡಿ" ಎಂದ.

ಮಾರೀಚನು "ಹಾಗಾದರೆ ಸರಿ ಈ ದಿವ ಅರಮನೆಗೆ ಕನ್ನಹಾಕೋಣ, ಕದ್ದಿದ್ದರಲ್ಲಿ ಇಬ್ಬರೂ ಸಮನಾಗಿ ಹಂಚಿಕೊಳ್ಳೋಣ" ಎಂದ.

ಇಬ್ಬರೂ ಅರಮನೆಯ ಒಳ ಹೊಕ್ಕರು. ಮೇಲಂತಸ್ತಿನ ಕೊಠಡಿಗೆ ಹೋಗಿ ನಗ ನಾಣ್ಯಗಳ ಪೆಟ್ಟಿಗೆಯನ್ನು ಒಡೆದರು, ಒಡವೆಗಳ ರಾಶಿ ಮಧ್ಯೆ ಒಂದು ಪೆಟ್ಟಿಗೆ ಇತ್ತು. ಅದರೊಳಗೆ ಫಳ ಫಳನೆ ಹೊಳೆಯುವ ಮೂರು ರತ್ನಗಳಿದ್ದವು. ಅವು ಬಹು ಬೆಲೆಬಾಳುವ ರತ್ನಗಳೆಂದು ಮಾರೀಚನಿಗೆ ತಿಳಿಯಿತು.

ಆಗ ಜೊತೆಯಲ್ಲಿದ್ದವನಿಗೆ ಹೇಳಿದ "ಮಿತ್ರಾ ಇದೋ ಇಲ್ಲಿ ಮೂರು ರತ್ನಗಳಿವೆ ಇವು ಬಹಳ ಬೆಲೆಯುಳ್ಳವು. ನಾವಿಬ್ಬರೂ ಸಮನಾಗಿ ಹಂಚಿಕೊಳ್ಳಬೇಕಾದರೆ ಎರಡು ರತ್ನಗಳು ಸಾಕು. ನನಗೊಂದು, ನಿನಗೊಂದು, ಮತ್ತೊಂದನ್ನು ಇಲ್ಲಿಯೇ ಇಟ್ಟುಬಿಡೋಣ" ಎಂದು ಹೇಳಿ ಒಂದು ರತ್ನವನ್ನು ಪೆಟ್ಟಿಗೆಯಲ್ಲಿಯೇ ಇಟ್ಟು ಅದು ಇದ್ದ ಸ್ಥಳದಲ್ಲಿಯೇ ಇಟ್ಟ.

"ಇವತ್ತಿಗೆ ಇಷ್ಟು ಸಾಕು, ಬಾ ಮಿತ್ರ ಹೋಗೋಣ ಎಂದ ಮಾರೀಚ" ಈ ಕಳ್ಳನ ವಿಚಿತ್ರರೀತಿಯನ್ನು ನೋಡಿ ಆ ಮನುಷ್ಯನಿಗೆ ಆಶ್ಚರ್ಯವಾಯಿತು, ಇಬ್ಬರೂ ಹೊರಗೆ ಬಂದರು.

ಜೊತೆಯಲ್ಲಿದ್ದ ಮನುಷ್ಯ "ಅಪ್ಪಾ : ಚೋರ ಶಿಖಾಮಣಿ ! ನೀನೆಂತಹ ವಿಚಿತ್ರ ಕಳ್ಳ ? ಬೊಕ್ಕಸ ಭಂಡಾರವೇ ನಿನ್ನ ಕೈಗೆ ಸಿಕ್ಕಿದ್ದರೂ ಏನನ್ನೂ ಮುಟ್ಟದೆ ಎರಡು ರತ್ನಗಳನ್ನು ಮಾತ್ರ ತೆಗೆದುಕೊಂಡು ಮತ್ತೊಂದನ್ನು ಅಲ್ಲಿಯೇ ಬಿಟ್ಟು ಬಂದಿರುವೆಯಲ್ಲಾ ಎಂದ.

ಅಯ್ಯೋ : ನೀನೊಬ್ಬ ದಡ್ಡ. ತೆಗೆದುಕೋ ಈ ಒಂದು ರತ್ನವನ್ನು ಈ ಒಂದು ರತ್ನವು ಆ ಪೆಟ್ಟಿಗೆಯ ತುಂಬ ಇರುವ ನಗನಾಣ್ಯಕ್ಕೆ ಸಮ. ಸರಿಯಾದ ಕಡೆ ಮಾರಿ ಬದುಕು. ನಿನ್ನ ಬಡತನವೆಲ್ಲಾ ತೊಲಗುತ್ತದೆ ಎಂದ.

ಜೊತೆಯಲ್ಲಿದ್ದ ಮನುಷ್ಯನಿಗೆ ಆ ಕಳ್ಳನ ಮೇಲೆ ಬಹಳ ಗೌರವವುಂಟಾಯಿತು. "ಅಪ್ಪಾ" ಕಳ್ಳಾ ಇಂದಿನಿಂದ ನೀನು ನನ್ನ ಮಿತ್ರನಾದೆ ನೀನು ವಾಸಿಸುವುದೆಲ್ಲಿ ? ತಿಳಿಸು ಎಂದ.

ಮಾರೀಚನು ಮಿತ್ರಾ ; ನಾನು ಇದ್ದ ಊರಿನಲ್ಲಿ ಇರುವುದಿಲ್ಲ. ನಾಳೆ ಒಂದು ದಿನ ಮಾತ್ರ ಈ ಊರಿನ ಧರ್ಮ ಛತ್ರದಲ್ಲಿ ತಂಗಿರುತ್ತೇನೆ. ಎಂದು ಹೇಳಿ ಹೊರಟು ಹೋದ, ಕತ್ತಲೆಯಲ್ಲಿ ಅವನು ಹೋದ ದಿಕ್ಕನ್ನೇ ನೋಡುತ್ತಾ ಬೆರಗಾಗಿ ನಿಂತ ಆ ಮನುಷ್ಯ

ಆ ಮನುಷ್ಯ ಮತ್ತೆ ಯಾರೂ ಅಲ್ಲ ಆದೇಶದ ರಾಜನೇ. ರಾತ್ರಿ ವೇಷ ಮರೆಸಿಕೊಂಡು ತನ್ನ ರಾಜ್ಯದಲ್ಲಿ ನಡೆಯುವ ವಿದ್ಯಮಾನಗಳನ್ನು ಪರೀಕ್ಷಿಸುತ್ತಾ ನಡೆದಿದ್ದ. ಕಳ್ಳನ ನಡೆ ನುಡಿ ರಾಜನಿಗೆ ಬಹಳ ಆಶ್ಚರ್ಯವನ್ನುಂಟು ಮಾಡಿತ್ತು. ಅರಮನೆಗೆ ಬಂದು ವೇಷ ಬದಲಿಸಿ ಮಲಗಿದ.

ನಿದ್ರೆಯೇ ಬರಲಿಲ್ಲ. ಬೆಳಗಾಗ ಎದ್ದಕೂಡಲೇ ಅರಮನೆಗೆ ಕನ್ನ ಹಾಕಿದ್ದಾರೆ. ಏನೇನು ಕಳುವಾಗಿದೆಯೋ? ಎಂದು ಸೇವಕರು ಗಾಬರಿಯಿಂದ ಮಹಾರಾಜರಿಗೆ ತಿಳಿಸಿದರು.

ಮಹಾರಾಜನು ಮುಖ್ಯ ಮಂತ್ರಿಯನ್ನು ಬರಮಾಡಿ "ಏನೇನು ಕಳುವಾಗಿದೆ ಹೋಗಿ ನೋಡಿ ಮಂತ್ರಿಗಳೇ" ಎಂದನು.

ಮಂತ್ರಿಯು ಆ ಕೊಠಡಿಗೆ ಯಾರನ್ನೂ ಬಿಡದೆ ತಾನೊಬ್ಬ ಮಾತ್ರ ಒಳಕ್ಕೆ ಹೋಗಿ ನೋಡಿದ. ಎಲ್ಲವೂ ಇದ್ದ ಸ್ಥಿತಿಯಲ್ಲಿಯೇ ಇತ್ತು, ಒಡವೆ ಪೆಟ್ಟಿಗೆ ತೆರೆದಿತ್ತು. ಅದರಲ್ಲಿಯೂ ಏನೂ ಕಳುವಾದಂತೆ ಕಾಣಲಿಲ್ಲ, ರತ್ನದ ಪೆಟ್ಟಿಗೆಯಲ್ಲಿ ಮಾತ್ರ ಮೂರುರತ್ನ ಇಟ್ಟಿದ್ದುದು, ಎರಡು ರತ್ನ ಕಳವಾಗಿದೆ. ಒಂದು ಇದರಲ್ಲಿಯೇ ಬಿಟ್ಟುಹೋಗಿದ್ದಾನಲ್ಲಾ ! ಕಳ್ಳ. ಇರಲಿ, ನನಗೆ ಒಳ್ಳೆಯ

ಅವಕಾಶ ಸಿಕ್ಕಿತು" ಎಂದುಕೊಂಡು ಉಳಿದಿದ್ದ ಒಂದು ರತ್ನವನ್ನು ತೆಗೆದು ತನ್ನ ಸೊಂಟದಲ್ಲಿ ಸಿಕ್ಕಿಸಿಕೊಂಡ. ನಂತರ ರಾಜನ ಬಳಿ ಬಂದು

"ಮಹಾಸ್ವಾಮೀ....ಅನೇಕ ಒಡವೆ ವಸ್ತುಗಳು ಕಳುವಾಗಿವೆ. ಹೆಚ್ಚು ಬೆಲೆ ಬಾಳುವ ಆ ಮೂರು ರತ್ನಗಳೂ ಕಳವಾಗಿವೆ" ಎಂದ

ರಾಜನಿಗೆ ಆಶ್ಚರ್ಯವಾಯಿತು. ಇದರಲ್ಲಿ ಏನೋ ಮಂತ್ರಿಯ ಮೋಸ ವಿದೆ ಎನ್ನಿಸಿತು. ಕೂಡಲೇ ಸೇವಕರನ್ನು ಕರೆದ ರಾಜ ಮಂತ್ರಿಯನ್ನು ಬಂಧಿಸಿರಿ ಎಂದ ಸೇವಕರು ಮಂತ್ರಿಯನ್ನು ಬಂಧಿಸಿ ಬಂಧನದಲ್ಲಿಟ್ಟರು.

ರಾಜನು ಆ ಕೂಡಲೇ ಸಭೆಯನ್ನು ಏರ್ಪಡಿಸಿದ. ಸಭೆಗೆ ಪ್ರಮುಖ ರೆಲ್ಲಾ ಬಂದು ಸೇರಿದರು, ರಾತ್ರಿ ಕಳ್ಳನು ಗುರುತು ಹೇಳಿದ್ದ ಧರ್ಮಛತ್ರಕ್ಕೆ ಸೇವಕರನ್ನು ಕಳುಹಿಸಿ ಆ ಕಳ್ಳನನ್ನು ಬಂಧಿಸಿ ತರಿಸಿದ. ಸಭೆಯಲ್ಲಿ ವಿಚಾರಣೆ ನಡೆಯಿತು. ರಾಜನು ಕಳ್ಳನನ್ನು ಕೇಳಿದ



ರಾಜಾಸ್ಥಾನದಲ್ಲಿ ಕಳ್ಳನನ್ನೂ ಮಂತ್ರಿಯನ್ನು ಕೈಗೆ ಕೋಳ ಹಾಕಿ ನಿಲ್ಲಿಸಿರುವುದು

"ನೀನು ಅರಮನೆಗೆ ಕನ್ನ ಹಾಕಿ ಕದ್ದಿದ್ದು ಉಂಟೋ? ಎಂದ

ಕಳ್ಳನು ''ಹೌದು ಮಹಾಸ್ವಾಮಿ'' ಎಂದ

ಏನೇನು ಕದ್ದೆ ?

ಒಂದು ಪುಟ್ಟ ಪೆಟ್ಟಿಗೆಯಲ್ಲಿ ಮೂರು ರತ್ನಗಳಿದ್ದುವು. ಅವುಗಳಲ್ಲಿ ಎರಡನ್ನು ಮಾತ್ರ ತೆಗೆದುಕೊಂಡೆ ಎಂದ

ಎಲ್ಲಿ ? ಆ ಎರಡು ರತ್ನಗಳನ್ನು ತೋರಿಸು ಎಂದ ರಾಜ

ಮಹಾಸ್ವಾಮಿ ! ನನ್ನ ಜೊತೆಯಲ್ಲಿ ನನ್ನ ಸ್ನೇಹಿತ ಒಬ್ಬ ಬಂದಿದ್ದ. ಅವನಿಗೆ ಒಂದು ರತ್ನವನ್ನು ಕೊಟ್ಟೆ. ಒಂದನ್ನು ನಾನು ಇಟ್ಟುಕೊಂಡೆ. ಇದೋ ನೋಡಿ " ಎಂದು ತನ್ನ ಕಿಸೆಯಲ್ಲಿದ್ದ ಒಂದು ರತ್ನವನ್ನು ತೆಗೆದು ತೋರಿಸಿದ.

ರಾಜನು ''ಸರಿ ಮೂರು ರತ್ನಗಳನ್ನೂ ಏಕೆ ತೆಗೆದು ಕೊಳ್ಳಲಿಲ್ಲ''? ಎಂದ.

ಮಹಾಸ್ವಾಮಿ ''ಕದಿಯಲು ಹೋಗುವಾಗಲೇ ನಾವಿಬ್ಬರೂ ಮಾತ ನಾಡಿಕೊಂಡೆವು. ಕದ್ದಿದ್ದನ್ನು ಸಮವಾಗಿ ಹಂಚಿಕೊಳ್ಳೋಣ" ಎಂದು. ಆದ್ದರಿಂದ ಮೂರು ರತ್ನಗಳು ಇಬ್ಬರಿಗೆ ಸರಿಯಾಗಿ ಹಂಚಲು ಆಗುವುದಿಲ್ಲ ವೆಂದು ಎರಡನ್ನು ತೆಗೆದುಕೊಂಡು ಒಂದನ್ನು ಆ ಪೆಟ್ಟಿಗೆಯಲ್ಲಿಯೇ ಇಟ್ಟು ಬಂದೆ ಎಂದ. ಅಲ್ಲಿದ್ದ ಸಭಿಕರಿಗೆಲ್ಲಾ ಕಳ್ಳನ ಸತ್ಯಸಂಧತೆ ಕೇಳಿ ಆಶ್ಚರ್ಯ ವಾಯಿತು.

ರಾಜನು ಕೂಡಲೇ ಎದ್ದು ಬಂದು ಆ ಕಳ್ಳನಿಗೆ ಹಸ್ತಲಾಘವನ್ನು ಕೊಟ್ಟು ತನ್ನ ಪಕ್ಕದ ಆಸನದಲ್ಲಿ ಕುಳಿರಿಸಿಕೊಂಡ. ಸಭೆಯಲ್ಲಿದ್ದವರನ್ನು ಕುರಿತು ಹೇಳಿದ.

ಪ್ರಮುಖರೇ ಕಳ್ಳನು ಹೇಳಿದ ಪ್ರತಿಯೊಂದು ಮಾತೂ ಸತ್ಯವಾದುದು ರಾತ್ರಿ ನಾನೇ ವೇಷಮರೆಸಿಕೊಂಡು ಕಳ್ಳನಂತೆ ನಟಿಸಿ ಇವನ ಜೊತೆಯಲ್ಲಿ ಅರಮನೆಗೆ ನುಗ್ಗಿ ಕಳ್ಳತನ ಮಾಡಿದ್ದು. ಇವನು ನನಗೆ ಕೊಟ್ಟ ರತ್ನ ನನ್ನ

ಲ್ಲಿದೆ ನೋಡಿ ಎಂದು ತೋರಿಸಿದ. ಕಳ್ಳನಿಗೆ ಆಶ್ಚರ್ಯವಾಯಿತು. ರಾಜನ ಪಾದಗಳನ್ನು ಹಿಡಿದು ನಮಸ್ಕರಿಸಿ ಕ್ಷಮಿಸಿ ಎಂದು ಬೇಡಿಕೊಂಡ.

ಇರಲಿ, ತಾಳು ಮಿತ್ರಾ "ಈಗ ಮತ್ತೊಂದು ರತ್ನವನ್ನು ಪತ್ತೆಮಾಡ ಬೇಕಾಗಿದೆ" ಎಂದು ಹೇಳಿ, ಸಭೆಗೆ ಕರೆತಂದಿದ್ದ ಮಂತ್ರಿಯನ್ನು ಮಂತ್ರಿಗಳೇ ! ಮತ್ತೊಂದು ರತ್ನ ಏನಾಯಿತು ? ನಿಜ ಹೇಳಿ ಎಂದ.

ಮಂತ್ರಿಗೆ ಭಯ-ಸಭೆಯಲ್ಲಿ ಅಪಮಾನವಾಗುತ್ತದೆಯಲ್ಲಾ ಎಂದು ನನಗೆ ಗೊತ್ತಿಲ್ಲ ಮಹಾಸ್ವಾಮಿ ಎಂದ.

ರಾಜನು ಕೂಡಲೇ ಸೇವಕರನ್ನು ಕರೆದು ಮಂತ್ರಿಯನ್ನು ಶೋಧಿಸಿರಿ ಎಂದ. ರಾಜ ಭಟರು ಮಂತ್ರಿಯ ಮೈಯೆಲ್ಲಾ ಹುಡುಕಾಡಿದರು ಸೊಂಟದಿಂದ ರತ್ನವು ಕೆಳಗೆ ಬಿತ್ತು.

ರಾಜನಿಗೆ ವಿಪರೀತ ಸಿಟ್ಟು ಬಂತು "ದ್ರೋಹಿ ನನಗೇ ಮೋಸಮಾಡು ತ್ತೀಯಾ? ಇನ್ನುಮೇಲೆ ನಿನ್ನನ್ನು ಹೇಗೆ ನಂಬುವುದು? ಕಳ್ಳನಾದರೂ ಅವನೆಷ್ಟು ಸತ್ಯಸಂಧ ? ನೋಡಿದೆಯಾ ? ಇನ್ನು ಒಂದು ನಿಮಿಷವೂ ನನ್ನೆದುರಿಗೆ ಇರ ಬೇಡ ತೊಲಗು" ಸೇವಕರೇ ಇವನನ್ನು ಕಾರಾಗೃಹ ಕೂಪದಲ್ಲಿ ತಳ್ಳಿರಿ.

ಮಿತ್ರಾ ಮಾರೀಚ ! ಇಂದಿನಿಂದ ನೀನು ನನ್ನ ಮುಖ್ಯಮಂತ್ರಿ ನಿನ್ನ ನಂಬಿಕೆ, ಸತ್ಯಕ್ಕೆ ನಾನು ಮೆಚ್ಚಿದ್ದೇನೆ ಎಂದ.

ಮಾರೀಚನು ವಿನಯದಿಂದ ಅಪ್ಪಣೆ ಪ್ರಭೂ ! ಈ ಅರ್ಹತೆಯನ್ನು ಪಡೆಯಲು ನನ್ನ ಗುರುವೇ ಕಾರಣ. ಕಳ್ಳತನ ಮಾಡಿದರೂ ಸುಳ್ಳು ಹೇಳಬೇಡ ಎಂದು ನನಗೆ ಉಪದೇಶ ಮಾಡಿದ್ದರು. ಅವರ ಮಾತಿನಂತೆ ನಾನೆಂದೂ ಸುಳ್ಳು ಹೇಳುತ್ತಿರಲಿಲ್ಲ. ಅದೇ ನನ್ನನ್ನು ಕಾಪಾಡಿತು ಎಂದ. ಸಭಿಕರೆಲ್ಲಾ ಸಂತೋಷಪಟ್ಟರು.

ಮಕ್ಕಳೇ ನೋಡಿದಿರಾ -' ಈ ಕತೆಯಿಂದ ತಪ್ಪುಮಾಡಿದರೂ ಸುಳ್ಳು ಹೇಳಬಾರದು" ಎಂಬ ನೀತಿ ಎಷ್ಟು ಚೆನ್ನಾಗಿದೆ ?

---

# ಪೆದ್ದ ಭಟ್ಟ

ತೆಲುಗುದೇಶ ದಲ್ಲಿ ರಾಮನಾಥ ಶಾಸ್ತ್ರಿಗಳೆಂಬ್ಬ ಮಹಾವಿದ್ವಾಂಸರು ಇದ್ದರು ಇವರು ಬಹಳ ಕಷ್ಟಪಟ್ಟು ವಿದ್ಯೆಗಳಿಸಿದರು. ಚಿಕ್ಕವಯಸ್ಸಿನಲ್ಲಿ ಗುರುಕುಲ ಗಳಲ್ಲಿದ್ದು ಗುರುಶುಷ್ರೂಶೆಮಾಡಿ ಗುರುಗಳ ಅನಗ್ರಹ ಪಡೆದು ವಿದ್ಯೆಕಲಿತರು, ಇನ್ನೂ ಹೆಚ್ಚಿನ ಶಾಸ್ತ್ರಾರ್ಥ ತರ್ಕಶಾಸ್ತ್ರ ಇವುಗಳಲ್ಲಿ ಪಾಂಡಿತ್ಯವನ್ನು ಪಡೆಯುವು ದಕ್ಕಾಗಿ ಕಾಶಿ, ನಲಂದ ಮುಂತಾದ ಕಡೆಗಳಲ್ಲಿ ಹೋಗಿ ಶಾಸ್ತ್ರಿ ಪದವಿಯನ್ನು ಪಡೆವರು.

ಬಾಲ್ಯದಿಂದಲೂ ಇವರ ಜೊತೆಯಲ್ಲಿ ಓದಿದ ವಿಶ್ವೇಶ್ವರ ಭಟ್ಟಾ ಚಾರ್ಯ ದೊಡ್ಡ ಪಂಡಿತರು. ಇಬ್ಬರೂ ಒಟ್ಟಿಗೇ ಪದವಿಯನ್ನು ಪಡೆದರು. ನಂತರ ಇಬ್ಬರೂ ಅವರವರ ಊರಿಗೆ ಹೋಗಬೇಕಾದ ಸಮಯ ಬಂತು. ಅನೇಕ ವರ್ಷಕಾಲ ಒಟ್ಟಿಗೇ ಕೂಡಿ, ಆಡಿ, ವಿದ್ಯೆಗಳಿಸಿ ಈಗ ಅಗಲ ಬೇಕೆಂದರೆ ಇಬ್ಬರಿಗೂ ಬಹಳ ದುಃಖವಾಯಿತು.

ಆದರೆ ಎಷ್ಟೋ ಕಾಲದಿಂದ ತಮ್ಮ ತಮ್ಮ ಊರುಗಳನ್ನೂ ತಂದೆ ತಾಯಿ ಯರನ್ನೂ ಅಗಲಿದ್ದವರಿಗೆ ಅತ್ತ ಹೋಗ ಬೇಕೆಂಬಕಾತುರ, ಹೊರಡುವ ಸಮಯ ದಲ್ಲಿ ಒಬ್ಬರಿಗೊಬ್ಬರು ಹೇಳಿಕೊಂಡರು "ಮುಂದೆಯೂ ಕೂಡ ನಾವು ನಮ್ಮ ಸ್ನೇಹವನ್ನು ಕಾಪಾಡಿಕೊಂಡು ಬರೋಣ. ದೇವರು ನಮಗೆ ಸಹಾಯಮಾಡಲಿ" ಎಂದು ಹೇಳಿ ಪ್ರಯಾಣ ಮಾಡಿದರು.

ಕೆಲವು ಕಾಲದ ನಂತರ ಇಬ್ಬರಿಗೂ ಮದುವೆಯಾಗಿ ಅವರವರ ಊರಿನಲ್ಲಿ ಹೆಂಡತಿ, ಮಕ್ಕಳುಗಳೊಂದಿಗೆ ಸಂಸಾರ ಮಾಡುತ್ತಿದ್ದರು. ಎಷ್ಟೋ ವರ್ಷ ಗಳು ಕಳೆದ ಮೇಲೆ ಒಬ್ಬರಿಗೊಬ್ಬರು ಒಂದು ಸಭೆಯಲ್ಲಿ ಸಂಧಿಸಿದರು. ಇಬ್ಬರಿಗೂ ಮಹದಾನಂದವಾಯಿತು.

ಯೋಗ ಕ್ಷೇಮ ಮಾತುಕತೆ ಆಯಿತು. ನಮ್ಮಸ್ನೇಹ ಬಾಂಧವ್ಯ ಬೆಳೆಯ ಬೇಕಾದರೆ ನ್ನ ಹೆಣ್ಣು ಮಗಳನ್ನು ನಿನ್ನಮಗನಿಗೆ ಮದುವೆ ಮಾಡಿಕೊಂಡು ಬಿಡು. ನ ಒಬ್ಬಳೇ ಮಗಳು. ಅವಳೂ ಮಹಾವಿದ್ವಾಂಸೆ. ಮೂರು ಜನ

ಗಂಡು ಮಕ್ಕಳು. ಎಲ್ಲರೂ ವಿದ್ಯಾವಂತರು. ಎಂದು ವಿಶ್ವೇಶ್ವರ ಭಟ್ಟಾಚಾರ್ಯರು ರಾಮನಾಥ ಶಾಸ್ತ್ರಿಗಳಿಗೆ ಹೇಳಿದರು.

ರಾಮನಾಥ ಶಾಸ್ತ್ರಿಗಳು ಏನೋ ಸಂಕೋಚದಿಂದ ಸುಮ್ಮನಿದ್ದರು, ಅದಕ್ಕೆ ಕಾರಣ ಅವರ ಏಕಮಾತ್ರ ಪುತ್ರ ಶುದ್ಧ ಶುಂಠಿಯಾಗಿದ್ದ. ತಾವು ಇಷು ದೊಡ್ಡ ಪಂಡಿತರಾಗಿದ್ದರೂ ಮಗ ಅಕ್ಷರ ಹೀನ ನಾಗಿರುವುದನ್ನು ಸ್ನೇಹಿತನೊಂದಿಗೆ ಹೇಳಿಕೊಳ್ಳಲು ನಾಚಿ ಸುಮ್ಮನಿದ್ದರು.

ಆದರೆ ಭಟ್ಟಾಚಾರ್ಯರು "ಏಕೆ ರಾಮನಾಥ, ಹಿಂದು ಮುಂದು ನೋಡುತ್ತಿದ್ದೀ; ದೊಡ್ಡ ಮನಸ್ಸು ಮಾಡಿ ನಮ್ಮ ಸಂಭಂಧವನ್ನು ಬೆಳೆಸು. ನಾನು ಮದುವೆ ಸಿದ್ಧತೆಗಳನ್ನು ಮಾಡುತ್ತೇನೆ. ಬೇರೆ ಏನು ಮಾತು ಬೇಡ, ಎಂದು ಬಾಲ್ಯ ಸ್ನೇಹದ ಸಲಿಗೆಯಿಂದ ಹೇಳಿಬಿಟ್ಟರು.

ನಿನ್ನ ಇಷ್ಟವೇ ನನ್ನ ಇಷ್ಟ ವಿಶ್ವೇಶ್ವರ. ಆಗಲಿ, ಸಂತೋಷ ಎಂದರು, ಹುಡುಗ ಬಹಳ ಸುಂದರನಾಗಿದ್ದ. ಹುಡಿಗಿಯು ಸುಂದರಳೂ ವಿದ್ವಾಂಸಳೂ ಆಗಿದ್ದಳು. ಇಬ್ಬರ ಮದುವೆ ಸಂಭ್ರಮವಾಗಿ ನೆರವೇರಿತು. ವಿದ್ಯಾವತಿ ಶಾರದೆಯು ಪೆದ್ದ ಸೋಮನಾಥನ ಹೆಂಡತಿಯಾದಳು.

ದೀಪಾವಳೀ ಹಬ್ಬಕ್ಕೆ ಅಳಿಯನನ್ನು ಮಾವನ ಮನೆಗೆ ಕರೆಸಿದರು. ಅಳಿಯು ಅವರ ತಂದೆಯಂತೆ ದೊಡ್ಡ ವಿದ್ವಾಂಸ ನೆಂದು ಎಲ್ಲರೂ ತಿಳಿದಿದ್ದರು. ಹುಡಿಗಿಯು ಅಣ್ಣಂದಿರು ಭಾವನನ್ನು ಗೌರವಿಸಿ ಬರಮಾಡಿಕೊಂಡರು.

ಭಾವ ಮೈದಂದಿರು ದೊಡ್ಡ ವಿದ್ಯಾವಂತರೂ ಮಹಾವಿದ್ವಾಂಸರೂ ಎಂದು ಸೋಮನಾಥನಿಗೆ ಗೊತ್ತು. ಆದ್ದರಿಂದ ಅವರೊಂದಿಗೆ ಹೆಚ್ಚುಮಾತ ನಾಡದೆ ಗಂಭೀರವಾಗಿದ್ದ.

ಊಟ ಉಪಚಾರ ಎಲ್ಲಾ ಆದನಂತರ ಸೋಮನಾಥನ ಪಾಂಡಿತ್ಯವನ್ನು ಪರೀಕ್ಷಿಸುವುದಕ್ಕಾಗಿಯೇ ಆ ಭಾವ ಮೈದುನರು ಓಲೆಗರಿ ಗ್ರಂಥಗಳನ್ನು ತೆಗದು ಕೊಂಡು ಅದರಲ್ಲಿರತಕ್ಕ ಶ್ಲೋಕಗಳನ್ನು ತಮ್ಮ ತಮ್ಮಲ್ಲಿ ಚರ್ಚಿಸ ತೊಡಗಿದರು.

ಸೋಮನಾಥ ಎದುರಿಗೇ ಇದ್ದರೂ ಅದರ ಬಗ್ಗೆ ಒಂದೂ ಮಾತನಾಡದೆ ಗಂಭೀರವಾಗಿದ್ದ, ಭಾವನ ಈ ಮೌನ ಅವರಿಗೆ ಏಕೋ ಅನುಮಾನವಾಯಿತು. ಭಾವ ವಿದ್ಯಾವಂತನಾಗಿದ್ದರೆ ಈ ವಿಷಯವಾಗಿ ಏನಾದರೂ ಚರ್ಚಿಸುತ್ತಿದ್ದ ಇರಲಿ ಪರೀಕ್ಷಿಸೋಣ, ಎಂದು ಬರೆದಿದ್ದ ಓಲೆಗರಿಯ ಕಟ್ಟನ್ನು ಸೋಮನಾಥನ ಕೈಗೆ ಕೊಟ್ಟು "ಇದನ್ನು ನೋಡಿ ಭಾವ, ಈ ಗ್ರಂಥ ಓದಿದ್ದೀರಾ? ಎಂದು ಕುತೂಹಲದಿಂದ ಕೇಳಿದರು.

ಸೋಮನಾಥನು ಓಲೆಗರಿಯನ್ನು ಅತ್ತ ಇತ್ತ ತಿರಿಗಿಸಿ ನೋಡಿದಂತೆ ಮಾಡಿ "ಇದಿಪೂರ್ತಿ ಐಯ್ಯಿಂದಿ" ಎಂದ ಅಂದರೆ ತೆಲುಗಿನಲ್ಲಿ ಇದು ಪೂರ್ತಿಯಾಗಿದೆ. ಎಂದು ಅರ್ಥ.

ಪುನಃ ಇನ್ನೊಂದು ಗ್ರಂಥವನ್ನು ಕೊಟ್ಟು ಇದನ್ನು ನೋಡಿ ಭಾವ ಎಂದರು, ಹಾಗೆಯೇ ತಿರುಗಿಸಿನೋಡಿ ಬಿಟ್ಟು "ಇದೀ ಪೂರ್ತಿ ಐಯ್ಯಿಂದಿ, ಎಂದ. ಹೀಗೆಯೇ ಅವರು ಕೊಟ್ಟಿದ್ದನ್ನೆಲ್ಲಾ ಒಂದೊಂದಾಗಿ ತಿರಿಗಿಸಿ ನೋಡಿ ಇದೂ ಪೂರ್ತಿಯಾಗಿದೆ, ಇದೂ ಪೂರ್ತಿಯಾಗಿದೆ" ಎಂದು ಹೇಳುತ್ತಿದ್ದ.

ಭಾವನನ್ನು ಇನ್ನೂ ಪರೀಕ್ಷಿಸೋಣವೆಂದು ಏನೂ ಬರೆಯದ ಒಂದು ಓಲೆಗರಿ ಕಟ್ಟನ್ನು ಕೊಟ್ಟರು. ಅದನ್ನೂ ಆ ಕಡೆ ಈ ಕಡೆ ತಿರುಗಿಸಿ ನೋಡಿ ಇದೂ ಪೂರ್ತಿಯಾಗಿದೆ,, ಎಂದ

ಮೂರು ಜನ ಭಾವ ಮೈದಂದಿರೂ ಕೇಕೆ ಹಾಕಿಕೊಂಡು ನಗಲು ಶುರು ಮಾಡಿದರು. ಇವನು ಪೆಚ್ಚಾಗಿ ಕುಳಿತ. ಅಳಿಯನ ಭಂಡವಾಳ ಎಲ್ಲರಿಗೂ ಗೊತ್ತಾಯಿತು.

ಇವೆಲ್ಲವನ್ನೂ ಬಾಗಿಲಿನ ಮರೆಯಿಂದ ನೋಡುತ್ತಿದ್ದ ಶಾರದೆಗೆ ತನ್ನ ಗಂಡಅವಿದ್ಯಾವಂತ ಎಂದು ತಿಳಿದು ಬಹಳ ದುಃಖವಾಯಿತು. ತನ್ನ ಅಣ್ಣಂದಿರ ಹಾಸ್ಯದಿಂದ ಅವಳಿಗೆ ತುಂಬಾ ಅಪಮಾನವಾದಂತಾಯಿತು.

ಹಬ್ಬವಾದ ನಂತರ ಅಳಿಯನ ಜೊತೆಯಲ್ಲಿ ಮಗಳನ್ನೂ ಶಾಸ್ತ್ರೋಕ್ತವಾಗಿ ಅತ್ತೆಯ ಮನೆಗೆ ಕಳುಹಿಸಿ ಕೊಟ್ಟರು.

ಒಂದು ಸ್ವಲ್ಪ ದೂರ ಕಾಲು ದಾರಿಯಲ್ಲಿ ನಡೆದು ಹೋಗಬೇಕಾಗಿತ್ತು. ಶಾರದೆಯು ಗಂಡನ ಜೊತೆಯಲ್ಲಿ ನಡೆದು ಬರುತ್ತಿದ್ದಳು. ದಾರಿಯ ಬದಿಯಲ್ಲಿ ಒಂದು ಮುತ್ತುಗದ ಮರ ಸಿಕ್ಕಿತು. ಮರದ ತುಂಬಾ ಕೆಂಪಾಗಿ ಹೂ ಬಿಟ್ಟಿತ್ತು.

ಅದನ್ನು ನೋಡಿ ಸೋಮನಾಥ ಹೆಂಡತಿಗೆ ಆ ಹೂವುಗಳನ್ನು ತೋರಿಸುತ್ತಾ "ನೋಡು ಆ ಹೂವು ಎಷ್ಟು ಸುಂದರವಾಗಿದೆ,?....ಎಂದ.



ಹೆಂಡತಿಗೆ ಮುತ್ತುಗದ ಮರದ ಹೂ ತೋರಿಸುತ್ತಿರುವುದು.

ಗಂಡನ ಪೆದ್ದುತನಕ್ಕೆ ಶಾರದೆಗೆ ದುಃಖವಾಯಿತು. ಅವನಿಗೆ ಬುದ್ಧಿ ಕಲಿಸಬೇಕೆಂದು "ನೋಡಿ ಆ ಹೂವು ನೋಡಲು ಸುಂದರವಾಗಿದೆ ವಾಸನೆ ಇಲ್ಲ, ಉಪಯೋಗವಿಲ್ಲ,, ಅದರಂತೆ ನೀವೂ ಕೂಡ ನೋಡಲು ಸುಂದರವಾಗಿದ್ದೀರಿ. ವಿದ್ಯೆ ಇಲ್ಲ ಬುದ್ಧಿ ಇಲ್ಲ,, ಎಂದಳು.

ಹೆಂಡತಿಯು ಈ ಮೂದಲಿಕೆಯಿಂದ ಸೋಮನಾಥನಿಗೆ ಬಹಳ ಅವಮಾನವಾಯಿತು. ತಾನೂ ಹೇಗಾದರೂ ವಿದ್ಯೆ ಕಲಿತು ಎಲ್ಲರಂತೆ ಗೌರವವಾಗಿ ಬಾಳಬೇಕೆಂದು ಮನಸ್ಸಿನಲ್ಲಿ ಧೃಡ ಮಾಡಿಕೊಂಡ.

ಹೆಂಡತಿಯನ್ನು ವಾಪಸ್ಸು ಹಿಂದಕ್ಕೆ ಕರೆದು ಕೊಂಡು ಹೋಗಿ ತೌರು ಮನೆಯಲ್ಲಿ ಬಿಟ್ಟು ಹಾಗೆಯೇ ಗುರುಗಳನ್ನು ಹುಡುಕಿಕೊಂಡು ಹೊರಟ ವಿದ್ಯೆ ಕಲಿಯದೆ ಮನೆಗೆ ಹಿಂತಿರುಗುವುದಿಲ್ಲವೆಂದು ಸಂಕಲ್ಪಮಾಡಿದ.

ಮಹಾವಿದ್ವಾಂಸ ರೊಬ್ಬರ ಮರೆ ಹೊಕ್ಕ ಸೋಮನಾಥ, ಹೇಗಾದರೂ ತನಗೆ ವಿದ್ಯೆ ಹೇಳಿಕೊಡಬೇಕೆಂದು ಅವರಲ್ಲಿ ಬೇಡಿಕೊಂಡ.

ಇಷ್ಟು ವಯಸ್ಸಾದವನಿಗೆ ವಿದ್ಯೆ ಕಲಿಸುವುದಾದರೂ ಹೇಗೆ? ಎಂದು ಆ ವಿದ್ವಾಂಸರು ಸಾಧ್ಯವಿಲ್ಲವೆಂದರೂ ಸೋಮನಾಥ ಬಿಡಲಿಲ್ಲ. ಅವರ ಪಾದವನ್ನು ಗಟ್ಟಿಯಾಗಿ ಹಿಡಿದು ನೀವೇ ನನ್ನ ಗುರುಗಳು, ನನ್ನನ್ನು ಹೇಗಾದರೂ ಉದ್ಧಾರ ಮಾಡ ಬೇಕೆಂದು ಬೇಡಿಕೊಂಡ.

ಅಕ್ಷರಾಭ್ಯಾಸದಿಂದ ಪ್ರಾರಂಭಿಸ ಬೇಕಾಯಿತು ಸೋಮನಾಥನಿಗೆ ಗುರುಗಳು ಮರಳಿನಲ್ಲಿ ಅಕ್ಷರವನ್ನು ತಿದ್ದಿಸಿದರು, ಸೋಮನಾಥನಿಗೆ ಕಲಿಯುವ ಜ್ಞಾನ ವಿನಃ ಮತ್ಯಾವುದರಲ್ಲಿಯೂ ಗಮನ ವಿರಲಿಲ್ಲ.

ಏಕಾಗ್ರತೆಯಿಂದ ಗುರುಗಳು ಹೇಳಿಕೊಟ್ಟುದನ್ನು ಬೇಗ_ಬೇಗ ಕಲಿತ ನಿದ್ರಾಹಾರಗಳ ಗಮನವೇ ಅವನಿಗೆ ಇರುತ್ತಿರಲಿಲ್ಲ ಗುರುಗಳು ತಮ್ಮ ಪತ್ನಿಗೆ ಹೇಳಿದ್ದರು "ಅವನಿಗೆ ಊಟ ಬಡಿಸುವಾಗ ಬೇವಿನ ಎಣ್ಣೆಯನ್ನು ಪ್ರತಿದಿನ ಅನ್ನಕ್ಕೆ ಬಡಿಸು, ಅವನು ಯಾವದಿನ ಅನ್ನ ಕಹಿಯಾಗಿದೆ ಎಂದು ಹೇಳುತ್ತಾನೋ ಅವತ್ತು ನನಗೆ ತಿಳಿಸು", ಎಂದು.

ಸೋಮನಾಥನ ಗಮನವೆಲ್ಲಾ ಗುರುಗಳು ಹೇಳಿಕೊಟ್ಟ ಪಾಠವನ್ನು ಮನನ ಮಾಡುವುದರಲ್ಲಿತ್ತು ಗುರು ಪತ್ನಿ ಏನು ಬಡಿಸಿದರೂ ರುಚಿನೋಡದೆ ಊಟ ಮಾಡಿ ಎದ್ದುಬಿಡುತ್ತಿದ್ದ. ಬೇವಿನ ಎಣ್ಣೆಯ ಕಹಿಕೂಡ ಅವನ ಗಮನಕ್ಕೆ ಬರಲಿಲ್ಲ, ಅದ್ವಿತೀಯ ವಿದ್ವಾಂಸ ನಾಗ ಬೇಕೆಂಬುದೇ ಅವನ ಗುರಿ.
ಸತತ ಅಭ್ಯಾಸ, ಪರಿಶ್ರಮ. ಗುರುಭಕ್ತಿ, ಶ್ರದ್ಧೆ ಇವುಗಳಿಂದ ಸೋಮನಾಥ ತನ್ನ ಗುರಿಯನ್ನು ಮುಟ್ಟಿದ. ಅನೇಕ ವರ್ಷಗಳ ವಿದ್ಯಾಭ್ಯಾಸವನ್ನು ಕೆಲವೇ ವರ್ಷ ಗಳಲ್ಲಿ ಮುಗಿಸಿದ ವಿದ್ಯಾಪಾರಂಗತನಾದ. ಗುರುಗಳಿಂದಲೂ ಮೆಚ್ಚಿಗೆಪಡೆದ, ಒಂದು ದಿನ ಪ್ರತಿದಿನದಂತೆ ಗುರುಪತ್ನಿ ಊಟಕ್ಕೆ ಬೇವಿನ ಎಣ್ಣೆ ಬಡಿಸಿದರು

ಸೋಮನಾಥ ಸ್ವಲ್ಪ ತಿಂದು ರುಚಿನೋಡಿ ಅಮ್ಮಾ ಅನ್ನ ಕಹಿಯಾಗಿದೆ, ಎಂದ. ಗುರು ಪತ್ನಿ "ಅದನ್ನು ಇಟ್ಟು ಬಿಡಪ್ಪಾ; ಬೇರೆ ಬಡಿಸುತ್ತೇನೆ ಎಂದಳು ಬೇರೆ ಬಡಿಸಿದ ನಂತರ ಊಟ ಮಾಡಿದ.

ಆವಿಷಯುವನ್ನು ಗುರುಪತ್ನಿ ಗುರುಗಳಿಗೆ ಹೇಳಿದಳು, ಗುರುಗಳು ಸೋಮ ನಾಥ ನನ್ನು ಕರೆದು ಅಪ್ಪಾ, ನೀನು ಸಕಲ ಶಾಸ್ತ್ರಾರ್ಥಗಳನ್ನೂ ತಿಳಿದು ಪಂಡಿತ ನಾದೆ, ನಿನಗೆ ಇದುವರೆಗೂ ಊಟದ ರುಚಿ ಸಹ ತಿಳಿಯಲಿಲ್ಲ ಅಭ್ಯಾಸ ಮಾಡುವು ದರಲ್ಲಿಯೇ ನಿನ್ನ ಗಮನವಿತ್ತು. ಇದೀಗ ನೀನು ಬೇವಿನ ಎಣ್ಣೆಯ ಕಹಿಯನ್ನು ತಿಳಿದೆ, ಪದ್ಯೆಕಲಿಯುವವನಿಗೆ ಈ ರೀತಿಯ ಶ್ರದ್ಧೆಯೇ ಬಹಳ ಮುಖ್ಯ. ನೀನು ಹೋಗಿ ಬಾ, ಎಂದು ಆಶೀರ್ವದಿಸಿದರು.

ಸೋಮನಾಥ ನೇರ ಊರಿಗೆ ಬರಲಿಲ್ಲ, ದೇಶಸಂಚಾರ ಮಾಡಿ ತನ್ನ ಪಾಂಡಿತ್ಯದಿಂದ ದೊಡ್ಡ ದೊಡ್ಡ ಸಭೆಗಳಲ್ಲಿ, ವಿದ್ವಾಂಸರನ್ನು ಗೆದ್ದು ಅನೇಕ ಶಾಲು ಜೋಡಿ ಮರ್ಯಾದೆಗಳನ್ನು ಪಡೆದು ಕೊಂಡ ರಾಜರುಗಳಿಂದ ಅನೇಕ ಬಿರುದುಗಳು ಬಂದುವು. ಇವನಿಗೆ ಪೆದ್ದ ಭಟ್ಟ ಎಂಬ ಬಿರುದನ್ನು ಕೊಟ್ಟರು, "ಪೆದ್ದ ಭಟ್ಟ" ಎಂದರೆ ದೊಡ್ಡ ವಿದ್ವಾಂಸ,, ಎಂದು ಅರ್ಥ. ಇವನ ಹೆಸರು ಎಲ್ಲೆಲ್ಲಿಯೂ ಪ್ರಸಿದ್ಧಿಯಾಯಿತು.

ಇಷ್ಟನ್ನೂ ಗಳಿಸಿ ಎಲ್ಲಾ ಮರ್ಯಾದೆ, ಹಣ, ಗಳೊಂದಿಗೆ ಮಾವನ ಮನೆಗೆ ಬಂದ, ತನ್ನನ್ನು ಹೀಯಾಳಿಸಿದ್ದ ಭಾವ ಮೈದುನರನ್ನುವಾದಕ್ಕೆ ಕರೆದ. ಭಾವನ ಅಪಾರ ಪಾಂಡಿತ್ಯವನ್ನು ಕಂಡು ಅವರು ಬೆರಗಾದರು.

ತನ್ನ ಪತಿಯು ತನ್ನನ್ನು ಬಿಟ್ಟು ಎಲ್ಲೋ ಹೊರಟು ಹೋದನಲ್ಲಾ. ಎಂದು ಕೊರಗುತಿದ್ದ ಶಾರದೆಗೆ ವಿದ್ಯೆಗಳಿಸಿ ಬಂದ ಪತಿಯನ್ನು ನೋಡಿ ಅಪಾರ ಸಂತೋಷವಾಯಿತು. ನಂತರ ಹೆಂಡತಿಯನ್ನು ಕರೆದುಕೊಂಡು ಸೋಮನಾಥ ತನ್ನೂರಿಗೆ ಪ್ರಯಾಣ ಮಾಡಿದ. ಇವನು ಅನೇಕ ಗ್ರಂಥಗಳನ್ನು ಬರೆದ ತೆಲುಗಿ ನಲ್ಲಿ ಪೆದ್ದ ಭಟ್ಟ ಪ್ರಸಿದ್ಧನಾದ ಪಂಡಿತ,.

ಮಕ್ಕಳೇ, ವಿದ್ಯೆ ಕಲಿಯಲು ಶ್ರದ್ಧೆಯೇ ಮುಖ್ಯ ಅಷ್ಟುವಯಸ್ಸಾದ

ಸೋಮನಾಥ ಹಟತೊಟ್ಟು ಹೇಗೆವಿದ್ಯೆ ಕಲಿತ? ನೋಡಿದಿರಾ? ನಿವೂಕೂಡ ಶ್ರದ್ದೆಯಿಂದ ಅಭ್ಯಾಸ ಮಾಡಿದರೆ ದೊಡ್ಡ ವಿದ್ಯಾವಂತರಾಗುವಿರಿ;

## ಒಂದು ಗೋಣಿ ಹಣ್ಣು ಒಂದು ಗೋಣಿ ಕಾಯಿ

ಭೀಮ ಪುರದಲ್ಲಿ ನಂಜಪ್ಪನೆಂಬ ಒಬ್ಬ ವ್ಯಾಪಾರಿ ಇದ್ದ. ಅವನು ಬಲು ಜಿಪುಣ, ದುಡ್ಡಿಗೆ ಬಡ್ಡಿ ಸೇರಿಸಿ ಹಣ ಕೂಡಿಡುವುದೆ! ಅವನ ಸ್ವಭಾವ, ಬೇಡಲು ಬಂದ ಬಡವರನ್ನು ಬೈದೋಡಿಸುತ್ತಿದ್ದ, ಮನೆಯಲ್ಲಿ ಹೆಂಡತಿ ಮಕ್ಕಳಿಗೂ ಒಂದು ಪೈಸೆ ಖರ್ಚು ಮಾಡುವ ಸ್ವತಂತ್ರ್ಯ ಕೊಟ್ಟಿರಲಿಲ್ಲ. ನೆಂಟರು ಮನೆಗೆ ಬಂದರೆ ಊಟ, ಉಪಹಾರ ಕೊಡ ಬೇಕಾಗುತ್ತದೆಯಲ್ಲಾ, ಎಂದು ಯಾವ ನೇಟರಿಷ್ಟರನ್ನೂ ಮನೆಗೆ ಕರೆಯುತ್ತಿರಲಿಲ್ಲ.

ಇವನೊಂದಿಗೆ ಹೆಣಗ ಬೇಕಾದರೆ ಹೆಂಡತಿ ಮಕ್ಕಳಿಗೆ ಸಾಕಾಗುತ್ತಿತ್ತು. ಒಂದು ಸಲ ನಂಜಪ್ಪನಿಗೆ ಬಹಳ ಖಾಯಿಲೆಯಾಯಿತು.

ಹೊಟ್ಟೆಯಲ್ಲಿ ಬಾಧೆ, ಕರುಳು ಹಿಂಡುವ ನೋವು, ಹೇಗೆ ಹೇಗೂ ಇರಲು ಸಾಧ್ಯವಿಲ್ಲದಷ್ಟು ಹಿಂಸೆ, ಹಾಸಿಗೆಯಲ್ಲಿ ಮಲಗಿರ ಲಾರದೆ ಹೊರಳಾಡ ತೊಡ ಗಿದ್ದ, ವೈದ್ಯರಿಗೆ ಔಷಧಿಗೆ ಹಣ ಖರ್ಚಾದರೆ ಪರವಾಗಿಲ್ಲ"ತನ್ನ ಬಾಧೆ ಕಮ್ಮಿ ಯಾದರೆ ಸಾಕು ಎಂದು ಔಷದೋಪಚಾರವೆಲ್ಲಾ ಮಾಡಿಸಿದ, ಏನೂ ಪ್ರಯೋಜ ನವಾಗಲಿಲ್ಲ. ಕಡೆಗೆ ಅವನ ಹೆಂಡತಿ ಇವನ ಸಂಕಟವನ್ನು ನೋಡಲಾರದೇ ನಮ್ಮ ದೇವರು ದೊಡ್ಡಾಂಜನೇಯ ಸ್ವಾಮಿಗಾದರೂ ಹರಸಿಕೊಳ್ಳಿ, ನಿಮ್ಮ ಖಾಯಿಲೆ ವಾಸಿಯಾಗಲಿ, ಹರಕೆ ತೀರಿಸಿ ಬರೋಣ ಎಂದಳು.

ಸಂಕಟ ಅಂದಾಗ ವೆಂಕಟರಮಣ, ಎನ್ನುವಂತೆ ಜಿಪುಣ ನಂಜಪ್ಪನಿಗೆ ಸದ್ಯ ತನ್ನ ಬಾಧೆ ತಪ್ಪಿದರೆ ಸಾಕೆನ್ನುವಂತಾಗಿತ್ತು. ಹೆಂಡತಿಯನ್ನು ಹತ್ತಿರ ಕರೆದು ಲೇ ಪಾರ್ವತೀ, ಹನುಮಪ್ಪನಿಗೆ ಹರಸಿಕೊಳ್ಳೇ ನನ್ನ ಖಾಯಿಲೆ ವಾಸಿಯಾದರೆ

ಒಂದು ಗೋಣಿ ಹಣ್ಣು, ಒಂದು ಗೋಣಿ ಕಾಯಿ ತಂದು ಮಂಗಳಾರತಿ ಮಾಡಿ ಸಿತ್ತೀನಿ,, ಎಂದು ಹತ್ತು ಪೈಸೆ ಕಾಣಿಕೆ ತೆಗೆದಿಡೇ, ಎಂದು ಹೇಳಿದ.

ಹೆಂಡತಿಗೆ ಎಷ್ಟೋ ಸಮಾಧಾನವಾಯಿತು, ಸಧ್ಯ ಂಡ ಈ ನೆಪದಲ್ಲಾ ದರೂ ದೇವರಿಗೆ ಹಣ್ಣು ಕಾಯಿ, ಮಾಡಿಸ್ತಾನಲ್ಲಾ ಎಂದು, ಕೂಡಲೇ ದೇವರಿಗೆ ಕೈಮುಗಿದು ಹರಕೆ ಕಟ್ಟಿದಳು, ಸ್ವಾಮಿ, ಆಂಜನೇಯ, ಇವರಿಗೆ ಖಾಯಿಲೆ ವಾಸಿ ಯಾದರೆ ಒಂದು ಗೋಣಿ, ಕಾಯಿ ಒಂದು ಗೋಣಿ ಹಣ್ಣು ತಂದು ಒಪ್ಪಿಸುತ್ತಾರೆ, ಕರುಣೆ ತೋರಿ ಖಾಯಿಲೆ ವಾಸಿಮಾಡಪ್ಪಾ, ಎಂದು ಬೇಡಿದಳು.

ದೇವರ ಕೃಪೆ ನಂಜಪ್ಪನಿಗೆ ಬಾಧೆ ಕಡಿಮೆಯಾಯಿತು. ಮಾರನೇ ದಿನದಿಂದ ಆರೋಗ್ಯವಾಗಿ ಓಡಾಡ ತೊಡಗಿದ. ಮೊದಲಿನಂತೆ ವ್ಯಾಪಾರದಲ್ಲಿ ತೊಡಗಿ ಹಣ ಸಂಪಾದಿಸ ತೊಡಗಿದ.

ಹೀಗೆ ಎಷ್ಟೋ ದಿನಗಳು ತಿಂಗಳುಗಳು ಕಳೆದವು ದೇವರಿಗೆ ಹರಕೆ ಒಪ್ಪಿಸ ಲಿಲ್ಲ ಹೆಂಡತಿ ಹೇಳಿದರೆ ಎಲ್ಲಿ ಸಿಟ್ಟು ಮಾಡಿಕೊಳ್ಳುತಾರೋ ಎಂದು ಹೆಂಡತಿಗೆ ಭಯ, ಹಾಗೂ ಒಂದು ದಿನ ಊಟ ಮಾಡುವ ಸಮಯದಲ್ಲಿ ಮೆಲ್ಲನೆ ಹೇಳಿದಳು.

ವಿನ್ರೀ ಹನುಮಪ್ಪನ ಹರಕೆ ತೀರಿಸ ಬೇಡವೇ? ನಿಮಗೆ ಖಾಯಿಲೆ ವಾಸಿ ಯಾಗಿ ಎಷ್ಟೋ ತಿಂಗಳಾಯಿತಲ್ಲಾ, ಅಂದಳು.

ಏನು ಅವಸರಾನೇ ತೀರಿಸಿದರಾಯಿತು ನೀನು ಸುಮ್ಮನಿರು ಎಂದು ಹೆಂಡತಿ ಯನ್ನು ಗದರಿದ.

ಮತ್ತೂ ಒಂದೆರಡು ತಿಂಗಳು ಕಳೆಯಿತು. ಇವನ ವ್ಯಾಪಾರ, ಓಡಾಟದಲ್ಲಿ ಅವನಿಗೆ ಪುರಸತ್ತೇ ಇಲ್ಲ, ಹೆಂಡತಿಯಂತೂ ಪ್ರತಿದಿನ ಜ್ಞಾಪಿಸುತ್ತಿದ್ದಳು.


ಇವಳ ಕಾಟವನ್ನಾದರೂ ತಪ್ಪಿಸಿ ಕೊಳ್ಳಬೇಕಲ್ಲಾ, ಎಂದು ನಂಜಪ್ಪ ಆಂಜನೇಯ ಸ್ವಾಮಿ ಬೆಟ್ಟಕ್ಕೆ ಹೊರಡಲು ಹೆಂಡತಿಯೂ ಜೊತೆಯಲ್ಲಿ ಹೊರಟಳು ಎರಡು ಗೋಣೀ ಚೀಲಗಳನ್ನು ಗಂಡನ ಕೈಯಲ್ಲಿಕೊಟ್ಟು ಒಂದು ಗೋಣಿ ಹಣ್ಣಿಗೆ ಒಂದು ಗೋಣಿ ಕಾಯಿಗೆ ತೆಗೆದುಕೊಳ್ಳಿ,, ಎಂದಳು.

ನಂಜಪ್ಪ ಲೇ ಗೋಣಿ ಚೀಲ ಅಲ್ಲಿ ಹಾಕೇ ನೀನು ಸುಮ್ಮನೆ ಬಾ ಎಂದ. ಹೆಂಡತಿ ತೆಪ್ಪನೆ ಅವನ ಜೊತೆಯಲ್ಲಿ ಹೋದಳು.

ಜಿಪುಣ ನಂಜಪ್ಪ ಒಂದೊಂದು ಗೋಣೀ ಚೀಲ ಹಣ್ಣು-ಕಾಯಿ ದೇವರಿಗೆ ಕೊಟ್ಟಾನೆಯೇ?

ಬೆಟ್ಟಕ್ಕೆ ಹೋಗುವ ದಾರಿಯಲ್ಲಿ ಒಂದು ಗೋಣಿ ಮರಇತ್ತು ಅದರಲ್ಲಿ ಒಂದು ಗೋಣಿ ಹಣ್ಣು ಒಂದು ಗೋಣಿ ಕಾಯಿಕಿತ್ತು ತಂದ.

ದೇವಸ್ಥಾನಕ್ಕೆ ಹೋಗಿ ದೇವರಿಗೆ ಒಂದು ಪ್ರದಕ್ಷಿಣೆ ಹಾಕಿ ಸ್ವಾಮೀ.... ನಮ್ಮಪ್ಪಾ, ನಿನ್ನ ಹರಕೆ ಒಪ್ಪಿಸಿಕೋ ನಾನು ಹೇಳಿದ್ದು "ಒಂದು ಗೋಣಿ-ಕಾಯಿ" ತಾನೇ ಇದೋ ತಂದು ಒಪ್ಪಿಸಿದ್ದೇನೆ. ಎಂದು ಆ ಒಂದು ಗೋಣಿ ಕಾಯಿ ಗೋಣಿ ಹಣ್ಣನ್ನು ದೇವರ ಮುಂದೆ ಇಟ್ಟ.



ಆಂಜನೇಯ ದೇವರ ಮುಂದೆ ಗಂಡಹೆಂಡತಿ ಕೈಮುಗಿದು ಕುಳಿತಿರುವುದು

ಇದೆಲ್ಲಾ ನೋಡುತ್ತಿದ್ದ ಹೆಂಡತಿಗೆ ಆಶ್ಚರ್ಯವಾಯಿಂತು. ತನ್ನ ಗಂಡ ದೇವರಿಗೂ ಮೋಸ ಮಾಡಿ ಹರಕೆಗೂ ಒಂದು ಉಪಾಯ ಹೂಡಿದನಲ್ಲಾ,

ಇವನ ಜಿಪುಣತನಕ್ಕೆ ಇಷ್ಟು ಬೆಂಕಿಹಾಕಿಪರು, ಎಂದು ಕೊಂಡು, ಏನ್ರೀ ನಿಮ್ಮ ಈ ಯುಕ್ತಿ ದೇವರಿಗೆ ಅರ್ಥವಾಗುವುದಿಲ್ಲವೇ? ಎಂದು ಕೇಳಿದಳು.

ನೀನು ಸುಮ್ಮನಿರೆ, ದೇವರಿಗೇನು ನಾವು ಏನು ಕೊಟ್ಟರೂ ತೆಗೆದು ಕೊಳ್ಳುತ್ತಾನೆ. ಈಗ ಇದೇನಾದ್ರೂ ಬೇಡ ಎಂದು ಹೇಳಿದನೇ? ಎಂದ, ಹೆಂಡತಿ ಸುಮ್ಮನಾದಳು.

ಇವನು ದೇವರಿಗೆ ವಂಚನೆ ಮಾಡಿದರೆ ಇವನಿಗೆ ಬುದ್ಧಿ ಕಲಿಸಲು ದೇವರಿಗೆ ಗೊತ್ತಿಲ್ಲವೇ?

ಇವರ ಊರಿಗೂ ಬೆಟ್ಟಕ್ಕೂ 7–8 ಮೈಲಿ ದೂರ ವಿದ್ದುದರಿಂದ ಕತ್ತಲಾದ ಮೇಲೆ ಪ್ರಯಾಣ ಸರಿಯಲ್ಲ ಎಂದು ನಂಜಪ್ಪ, ಅವನ ಹೆಂಡತಿ ರಾತ್ರಿ ಅಲ್ಲಿಯೇ ತಂಗಿದರು.

ಊರಿನಲ್ಲಿ ಮನೆ ಬೀಗ ಹಾಕಿ ಬಂದಿದ್ದರೂ, ಅದೇ ರಾತ್ರಿ ಮನೆಗೆ ಕಳ್ಳರು ನುಗ್ಗಿ ಮನೆಯಲ್ಲಿದ್ದ ಓಡವೆ, ವಸ್ತು ಹಣ, ಕಾಸು ಒಳ್ಳೊಳ್ಳೆಯ ಸೀರೆಗಳು ಎಲ್ಲವನ್ನೂ ಕದ್ದುಕೊಂಡು ಹೋಗಿ ಬಿಟ್ಟರು.

ಬೆಳಗ್ಗೆ ಊರಿಗೆ ಬಂದು ನಂಜಪ್ಪ ಅವನ ಹೆಂಡತಿ ಮನೆ ಬಾಗಿಲು ನೋಡುತ್ತಾರೆ. ಬೀಗ ಒಡೆದು ಬಾಗಿಲು ತೆಗೆದು ಹಾಕಿದೆ ನಂಜಪ್ಪನ ಜೀವವೇ ಹಾರಿ ಹೋದಂತಾಯಿತು.

ಅಯ್ಯೋ, ಇದೇನೇ ಅನ್ಯಾಯ ಎಲ್ಲಾ ಕಳ್ಳತನವಾಗಿ ಹೋಯಿತಲ್ಲೇ, ಇನ್ನೇನು ಗತಿ? ಎಂದು ಎದೆ, ಎದೆ ಹೊಡೆದುಕೊಂಡು ಗೋಳಾಡಲು ಶುರು ಮಾಡಿದ.

ಆಗ ಹೆಂಡತಿ ನಿಧಾನವಾಗಿ ಹೇಳಿದಳು ನೀವು ದೇವರಿಗೇ ಮೋಸಮಾಡಿದಿರಿ ದೇವರು ನಿಮಗೆ ಮೋಸ ಮಾಡಿದ,, ಅಷ್ಟೆ, ಎಂದಳು.

........

# ಅಡಕೆಯಲ್ಲಿ ಹೋದಮಾನ ಆನೆಕೊಟ್ಟರೂ ಬರದು

ಈಗ ಕರ್ಣಾಟಕ, ಎಂದು ಕರೆಯುವ ನಮ್ಮ ನಾಡನ್ನು ಹಿಂದೆ ಮೈಸೂರು, ಎಂದು ಕರೆಯುತ್ತಿದೆವು, ಯದು ವಂಶದ ರಾಜರು ಮೈಸೂರು ದೇಶವನ್ನು ಆಳಿದ ರಾಜರು.

ಮೈಸೂರು ಮಾದರಿಯ ದೇಶ ಕಲೆ ಸಂಸ್ಕೃತಿಗಳಿಗೆ ಹೆಸರು ವಾಸಿಯಾದುದು. ರಾಜರು ಪ್ರಜೆಗಳಲ್ಲಿ ವಾತ್ಸಲ್ಯವುಳ್ಳವರು. ಧರ್ಮದಲ್ಲಿ ಶ್ರದ್ಧೆಯುಳ್ಳವರು. ದೇವರಲ್ಲಿ ಭಕ್ತಿಯುಳ್ಳವರು,

ಹೀಗೆ ಆಳಿದ ಅರಸರಲ್ಲಿ ಮುಮ್ಮಡಿ ಕೃಷ್ಣ ರಾಜ ಒಡೆಯರು ತುಂಬಾ ನಿಷ್ಠಾವಂತರು. ಅನೇಕ ಧರ್ಮ ಕಾರ್ಯಗಳು ಅರಮನೆಯಲ್ಲಿ ಪ್ರತಿದಿನ ನಡೆಯುವಂತೆ ವ್ಯವಸ್ಥೆ ಮಾಡಿದ್ದರು.

ಸ್ವತಃ ತಾವೇ ಪ್ರಾತಃ ಕಾಲ ಸಂಧ್ಯಾ ಕಾಲದಲ್ಲಿ ಮಡಿಯುಟ್ಟು ಶುಚಿರ್ಭೂತರಾಗಿ ದೇವತಾರಾಧನೆ ಮಾಡುತ್ತಿದ್ದರು.

ಅರಮನೆಯಲ್ಲಿ ಪ್ರತಿಯೊಂದು ಕೆಲಸ ಕಾರ್ಯಗಳೂ ನಿಯಮಿತ ವೇಳೆಯಲ್ಲಿ ಅದಕ್ಕಾಗಿಯೇ ಗೊತ್ತು ಮಾಡಿರುವ ಕೆಲಸದವರಿಂದ ನಡೆಯುತ್ತಿತ್ತು. ಮಹಾರಾಜರು ಪೂಜಾ ಗೃಹಕ್ಕೆ ಬರುವ ವೇಳೆಗೆ ಪೂಜೆಗೆ ಎಲ್ಲಾ ಸಿದ್ಧವಾಗಿರಬೇಕಾಗಿತ್ತು. ದೇವರ ಬೆಳ್ಳಿ ದೀಪಗಳಿಗೆಲ್ಲಾ ಎಣ್ಣೆ ಬತ್ತಿ ಹಾಕಿ ಒಬ್ಬ ದಾದಿ ಹಚ್ಚಿಡುತ್ತಿದ್ದಳು ಪುಷ್ಪ ಫಲ, ತಾಂಬೂಲ, ಆರತಿ, ಅಕ್ಷತೆ ಮುಂತಾದ ಮಂಗಳ ದ್ರವ್ಯಗಳನ್ನು ಒಬ್ಬ ದಾದಿ ಸಿದ್ಧ ಪಡಿಸಿಡುತ್ತಿದ್ದಳು. ನೆಲವನ್ನು ಶುಚಿಮಾಡಿ ರಂಗವಲ್ಲಿಯನ್ನು ಅಲಂಕರಿಸಿ ಮಹಾರಾಜರು ಕುಳಿತು ಕೊಳ್ಳುವ ಪೀಠವನ್ನು ಸರಿಯಾಗಿ ಸಿದ್ಧ ಪಡಿಸುವುದು ಒಬ್ಬ ದಾದಿಯ ಕೆಲಸ.

ಇದಾದ ನಂತರ ಮಾಹಾರಾಜರಿಂದ ಪೂಜಾ ಕ್ರಮವನ್ನು ಮಾಡಿಸಿ. ಮಂತ್ರ ಹೇಳಿ ದೇವರಿಗೆ ನೈವೇದ್ಯ ಮಂಗಳಾರತಿಯನ್ನು ಮಾಡಿಸಲು ಒಬ್ಬ ಬ್ರಾಹ್ಮಣ ಪುರೋಹಿತರು ಪ್ರತಿದಿನ ಎರಡು ಹೊತ್ತು ಬಂದು ಮಾಡಿಸುತ್ತಿದ್ದರು. ಈ ಕಾರ್ಯ ಕ್ರಮದಲ್ಲಿ ಎಳ್ಳಷ್ಟೂ ಲೋಪ ಬರ ಬಾರದು ಮಹಾರಾಜರ ಕೋಪಕ್ಕೆ ಪಾತ್ರರಾದರೆಂದರೆ ಆಯಿತು. ಅವರು ಉಳಿಯುವಂತಿಲ್ಲ, ಇಂತಹ

ಕಟ್ಟು ನಿಟ್ಟಾದ ಆಜ್ಞೆಯನ್ನು ಎಲ್ಲಾ ದಾಸ ದಾಸಿಯರೂ ಭಯ ಭಕ್ತಿಯಿಂದ ಪಾಲಿಸುತ್ತಿದ್ದರು.

ಮಹಾರಾಜರು ಪ್ರತಿದಿನ ಎರಡು ಹೊತ್ತೂ ದೇವರ ನೈವೇದ್ಯಕ್ಕಾಗಿ ಒಂದೊಂದು ತೆಂಗಿನಕಾಯಿಯನ್ನು ತಟ್ಟೆಯಲ್ಲಿಇಡಿಸುತ್ತಿದ್ದರು. ಪುರೋಹಿತರು ಆ ಕಾಯಿಯನ್ನು ಒಡೆದು ತಂದು ತಟ್ಟೆಯಲ್ಲಿ ಇಡಬೇಕಾಗಿತ್ತು. ದೇವರಿಗೆ ನೈವೇದ್ಯವಾದನಂತರ ಆ ಎರಡು ಹೋಳುತೆಂಗಿನ ಕಾಯಿಯನ್ನೂ ಮಹಾ ರಾಜರು ಪುರೋಹಿತರಿಗೆ ಕೊಟ್ಟುಬಿಡುತ್ತಿದ್ದರು.

ಹೀಗೆ ಎಷ್ಟೋ ವರ್ಷಗಳಿಂದ ಆಚರಿಸುತ್ತಾ ಬಂದಿದ್ದ ಪುರೋಹಿತರಿಗೆ ಕೇಡುಗಾಲಕ್ಕೆ ಒಂದು ದುರ್ಬುದ್ಧಿ ಹುಟ್ಟಿತು. ಎರಡು ಹೊತ್ತಿನಿಂದ ಒಡೆದ ಕಾಯಿ ಹೋಳು ನಾಲ್ಕು ಪುರೋಹಿತರ ಮನೆಗೆಬರುತ್ತಿತ್ತು. ಅದು ಒಡೆದ ಹೋಳುಗಳಾದ್ದರಿಂದ ಹೆಚ್ಚುದಿನ ಇಡುವಂತಿಲ್ಲ ಇದಕ್ಕೆ ಬದಲು ಉಂಡೆ ಕಾಯಿ ಒಡೆಯದೆಯೇ ತಂದರೆ ಕೆಲವು ದಿನ ಇಟ್ಟು ಒಡೆಯ ಬಹುದು, ಎಂಬ ಯೋಚನೆ ಬಂತು ಆದರೆ ನೈವೇದ್ಯದ ತಟ್ಟೆಯಲ್ಲಿ ಎರಡು ಹೊತ್ತೂ ಒಡೆದ ಕಾಯಿ ಹೋಳು ಇರಲೇ ಬೇಕು. ಆ ನಿಯಮದಲ್ಲಿ ಚಾಚುತಪ್ಪಿದರೂ ಮಹಾರಾಜರ ಆಗ್ರಹಕ್ಕೆ ಪಾತ್ರನಾಗ ಬೇಕಾಗುತ್ತದೆ. ಇದಕ್ಕೇನು ಉಪಾಯ? ಎಂದು ಯೋಚಿಸಿ ಕಡೆಗೆ ಒಂದು ಉಪಾಯವನ್ನು ಕಾರ್ಯ ಗತ ಮಾಡಿಯೇ ಬಿಟ್ಟರು ಪುರೋಹಿತರು.

ಬೆಳಗ್ಗೆ ಒಡೆದ ಕಾಯಿ ಹೋಳನ್ನು ಸಾಯಂಕಾಲಕ್ಕೆ ಹಾಗೆಯೇ ಒಂದು ಸಲ ತೊಳೆದು ತಟ್ಟೆಯಲ್ಲಿ ಇಟ್ಟು ಬಿಡುತ್ತಿದ್ದರು ಸಾಯಂಕಾಲ ತಟ್ಟೆಗೆ ಇಡುತ್ತಿದ್ದ ಕಾಯನ್ನು ಹಾಗೆಯೇ ಉಂಡೆಯಾಗಿ ಬೇರೆ ಕಡೆ ತೆಗೆದಿಟ್ಟು ಮನೆಗೆ ತೆಗೆದು ಕೊಂಡು ಹೋಗಲು ಪ್ರಾರಂಭಿಸಿದರು.

ಒಂದೆರಡು ದಿನಗಳಲ್ಲಿಯೇ ಮಹಾರಾಜರಿಗೆ ಕಾಯಿ ಹೋಳು ನೈವೇದ್ಯ ಮಾಡುವಾಗ ಏನೋ ಅನುಮಾನವಾಯಿತು. ಮಹಾರಾಜರು ಘನತೆ ಗಂಭೀರ ವುಳ್ಳವರು. ಈ ಅಲ್ಪ ವಿಚಾರವನ್ನು ಕೂಡಲೇ ಕೇಳಿ ಬಿಡುವವರಲ್ಲ. ಪರೀಕ್ಷಿಸೋಣವೆಂದು ಸುಮ್ಮನಾದರು.

ಮಾರನೆಯ ದಿನ ಪುರೋಹಿತರು ಬೆಳಗ್ಗೆ ಪೂಜೆ ಮಂಗಳಾರತಿ ಆದ ನಂತರ ಮಂಗಳಾರತಿ ಪ್ರಸಾದವನ್ನು ರಾಣಿವಾಸಕ್ಕೆ ಕೊಡಲು ಹೋಗಿದ್ದಾಗ

ಮಹಾರಾಜರು ತೆಂಗಿನ ಕಾಯಿಹೋಳಿನ ಅಂಚಿಗೆ ಒಂದು ಕಡೆಯಲ್ಲಿ ಮಾತ್ರ ಮೇಲಕ್ಕೆ ಕಾಣದಂತೆ ಒಂದು ಗುಂಡು ಸೂಜಿಯನ್ನು ಚುಚ್ಚಿಟ್ಟರು.


ಪುರೋಹಿತರು ಎಂದಿನಂತೆ ಆ ಹೋಳನ್ನು ತೆಗೆದು ಕೊಂಡು ಹೋಗಿ ಮತ್ತೆ ಸಾಯಂಕಾಲಕ್ಕೆ ಅದೇ ಹೋಳನ್ನು ತಂದು ತಟ್ಟೆಯಲ್ಲಿಟ್ಟರು.

ಮಹಾರಾಜರ ಸೂಕ್ಷ್ಮ ದೃಷ್ಟಿ ತೆಂಗಿನ ಕಾಯನ್ನು ಪರೀಕ್ಷಿಸಿತು. ಬೆಳಗೆ ಒಡೆದ ಕಾಯೀ ಎಂಬುದು ನಿರ್ಧಾರವಾಯಿತು ಮಹಾರಾಜರು ಗಂಭೀರವಾಗಿ ಪುರೋಹಿತರೇ....ನೀವು ಒಂದು ಸಲ ನೈವೇದ್ಯ ಮಾಡಿದುದನ್ನು ಮತ್ತೆ ದೇವರಿಗೆ ನೈವೇದ್ಯ ಮಾಡುವುದುಂಟೋ? ಎಂದು ಕೇಳಿದರು.

ಪುರೋಹಿತರ ಜಂಘಾ ಬಲವೇ ಉಡಿಗಿದಂತಾಯಿತು. ಕೈಕಾಲು ಗಡ_ಗಡನೆ ನಡುಗ ತೊಡಗಿತು. ಭಯದಿಂದ "ಇಲ್ಲ" ಎಂದರು.

ಹಾಗಾದರೆ ಬೆಳಗ್ಗೆ ದೇವರಿಗೆ ನೈವೇದ್ಯ ಮಾಡಿದ ಕಾಯನ್ನೇ ಮತ್ತೆ ಇಟ್ಟಿದ್ದೀರಲ್ಲಾ, ಎಂದರು.

ಪುರೋಹಿತರಿಗೆ ತನಗೇನೋ ಗ್ರಹಚಾರ ಕಾದಿದೆಯೆಂಬ ಅರಿವಾಯಿತು. ತಲೆ ತಗ್ಗಿಸಿ ಸುಮ್ಮನೆ ನಿಂತರು.



ಪುರೋಹಿತರ ಮನೆಯ ಬಾಗಿಲಮುಂದೆ ತೆಂಗಿನಕಾಯಿಗಾಡಿ ನಿಂತಿರುವುದು

ಮಹಾರಾಜರು ಮತ್ತೆ ಏನನ್ನೂ ಹೇಳದೆ ಎದ್ದು ಹೊರಟು ಹೋದರು. ಪುರೋಹಿತರು ಚಿಂತಾಕ್ರಾಂತರಾಗಿ ಮನೆಗೆ ಹೋದರು.

ಮಾರನೆಯದಿನ ಅರಮನೆಯ ಜೋಡೆತ್ತಿನ ಬಂಡಿಯಲ್ಲಿ ತೆಂಗಿನ ಕಾಯಿ ತುಂಬಿದ್ದು ಪುರೋಹಿತರ ಮನೆಯ ಬಾಗಿಲಲ್ಲಿ ಬಂದು ನಿಂತಿತು ಎಲ್ಲರಿಗೂ ಆಶ್ಚರ್ಯ ಸೇವಕರು ಗಾಡಿಯಲ್ಲಿದ್ದ ಕಾಯನ್ನೆಲ್ಲಾ ಪುರೋಹಿತರ ಮನೆಯ ಒಳಕ್ಕೆ ತಂದು ತುಂಬಿದರು, ಪುರೋಹಿತರು ಕಾರಣ ತಿಳಿಯದೆ ಸುಮ್ಮನೆ ನಿಂತಿದ್ದರು.

ನಂತರ ಸೇವಕರು ದೇವರ ಪೂಜಾಕಾರ್ಯಕ್ಕೆ ಮಹಾ ಪ್ರಭುಗಳು ಬೇರೆ ಯವರನ್ನು ನಿಯಮಿಸಿ ಕೊಂಡಿದ್ದಾರಂತೆ. ತಾವು ನಾಳೆಯಿಂದ ಬರಬೇಕಾಗಿಲ್ಲ ವಂತೆ. ಎಂದು ಪ್ರಭುಗಳ ಅಪ್ಪಣೆಯಾಗಿದೆ. ಎಂದರಂತೆ.

ಪುರೋಹಿತರಿಗೆ ಬಹಳ ಅವಮಾನವೂ ದುಃಖವೂ ಆಯಿತು. ತೃಪ್ತಿಯಾಗಿ ತೆಂಗಿನಕಾಯಿ ತಿಂದುಕೊಂಡು ಮನೆಯಲ್ಲಿರಲಿ, ಎಂಬ, ಶಿಕ್ಷೆಯನ್ನು ನನಗೆ ವಿಧಿ ಸಿದ್ದಾರೆ. ಎಂದು ಪಶ್ಚಾತ್ತಾಪ ಪಟ್ಟರು.

ಮಕ್ಕಳೇ....ಹಿಂದಿನ ಕಾಲದಲ್ಲಿ ತಪ್ಪು ಮಾಡಿದವರು ಯಾರೇ ಆಗಿರಲಿ ಅವರನ್ನು ಸರಿಯಾಗಿ ಶಿಕ್ಷಿಸುತ್ತಿದ್ದರು. ಬೇರೊಬ್ಬರು ತಪ್ಪು ಮಾಡಲು ಭಯ ಪಡುತ್ತಿದ್ದರು. ಅಡಕೆಯಲ್ಲಿ ಹೋದ ಮಾನ ಆನೆ ಕೊಟ್ಟರೂ ಬರದು. ಎಂಬಂತೆ ಪುರೋಹಿತರು ಅಲ್ಪ ಆಸೆ ಪಟ್ಟಿದ್ದಕ್ಕಾಗಿ ರಾಜಾನುಗ್ರಹವನ್ನೇ ಕಳೆದು ಕೊಂಡರು

........

## ಕೆಟ್ಟಹುಡುಗ

ಕಲ್ಯಾಣವೆಂಬುದೊಂದು ನಗರ ಅಲ್ಲಿ ಬೀರಯ್ಯ-ಕಾಳಮ್ಮ ಎಂಬ ದಂಪತಿ ಗಳಿದ್ದರು. ಅವರಿಗೆ ಅನೇಕ ವರ್ಷಗಳು ಮಕ್ಕಳಿಲ್ಲದೆ ಕಡೆಗೆ ವಯಸ್ಸಾದ ಕಾಲಕ್ಕೆ ಒಂದು ಗಂಡು ಮಗುವಾಯಿತು

ಆ ಮಗುವಿಗೆ "ಶಿವ" ಎಂದು ನಾಮಕರಣಮಾಡಿ ಬಹು ಮುದ್ದಿನಿಂದ ಸಾಕಿದರು. ಶಿವು ಬೆಳೆಯುತ್ತಾ ಬೆಳೆಯುತ್ತಾ ಬಲು ತುಂಟನಾದ. ತಾಯಿ ತಂದೆಯರು ಯಾವುದು ಬೇಡವೆಂದರೆ ಅದನ್ನೇ ಮಾಡುವನು.

ತಂದೆ ತಾಯಿಯರು ಅತೀ ಮುದ್ದಿನಿಂದ ಅವನು ಮಾಡಿದ ತಪ್ಪನ್ನು ಅಷ್ಟಾಗಿ ತಿದ್ದುತ್ತಿರಲಿಲ್ಲ. ಇದರಿಂದಾಗಿ ದಿನೇ ದಿನೇ ಅವನು ಬಹಳ ಚೇಷ್ಟೆ ಕಲಿತ. 5 ವರ್ಷದ ಬಾಲಕನಾದಾಗ ಶಾಲೆಗೆ ಸೇರಿಸಿದರು. ವಿದ್ಯೆ ಕಲಿತ ಮಗ ಬುದ್ಧಿವಂತನಾಗುತ್ತಾನೆ ಎಂದು ಆಶಾ ಕೋಟೆ ಕಟ್ಟಿದರು.

ಶಿವ ಅಕ್ಷರ ಅಭ್ಯಾಸ ಮಾಡುವುದಕ್ಕೆ ಬದಲು ಜೊತೆಯ ಮಕ್ಕಳನ್ನು ಹೊಡೆದು, ಜಿಗುಟಿ, ಪರಚಿ, ಅವರು ಅಳುವುದನ್ನು ನೋಡಿ ಇವನು ಖುಷಿ ಯಿಂದ ಚಪ್ಪಾಳೆ ತಟ್ಟಿ ನಗುತ್ತಿದ್ದ.

ಗುರುಗಳೂ ಇವನ ಚೇಷ್ಟೆಯನ್ನು ಗಮನಿಸಿದರು. ಹಾಗೆಲ್ಲಾ ಮಾಡ ಬಾರದೆಂದು ಬುದ್ಧಿವಾದ ಹೇಳಿದರು. ಒಂದು ದಿನ ಬೀರಯ್ಯನನ್ನು ಶಾಲೆಗೆ ಕರೆದು "ಬೀರಯ್ಯಾ ! ಹೀಗೆ ಬಿಟ್ಟರೆ ನಿನ್ನ ಮಗ ಬಹಳ ದುಷ್ಟನಾಗುತ್ತಾನೆ, ಅವನು ತಪ್ಪುಮಾಡಿದಾಗ ಶಿಕ್ಷಿಸಬೇಕು, ಮನೆಯಲ್ಲಿ ನೀವೂ ಹೆಚ್ಚು ಗಮನ ಕೊಡಬೇಕು" ಎಂದರು.

ಸ್ವಾಮೀ ! ನಮಗೆ ಒಂದೇ ಮಗು. ಬಹಳ ಮುದ್ದಿನಿಂದ ಸಾಕಿದ್ದೇವೆ ಅವನನ್ನು ಹೊಡೀಬೇಡಿ, ಎಂದು ಮಗನನ್ನು ಮುದ್ದಿಸಿ ಕರೆದುಕೊಂಡು ಹೋದ.

ಬರ ಬರುತ್ತಾ ಶಿವು ಮನೆಯಿಂದ ಶಾಲೆಗೆ ಹೋಗುತ್ತೇನೆ ಎಂದು ಹೊರಟು ಶಾಲೆಗೆ ತಪ್ಪಿಸಿ ಎಲ್ಲೆಲ್ಲೋ ಅಲೆದು ಮನೆಗೆ ಬರುತ್ತಿದ್ದ, ತಾಯಿ, ಮಗ ಏನೋ ಓದಿಬರುತ್ತಾನೆ ಎಂದು ಖುಷಿಪಡುತ್ತಿದ್ದಳು.

ಆದರೆ ಒಂದೊಂದು ದಿನ ಒಂದೊಂದು ಮನೆಯವರು ಇವನ ಮೇಲೆ ದೂರು ತರುತ್ತಿದ್ದರು. ಒಬ್ಬ ಬಡವಿ ಗಡಿಗೆಯಲ್ಲಿ ನೀರು ಹೊತ್ತು ದೂರದಿಂದ ತರುತ್ತಿದ್ದರೆ ಗುರಿಯಿಟ್ಟು ಗಡಿಗೆಗೆ ಕಲ್ಲುಹೊಡೆದ ಗಡಿಗೆಯಿಂದ ಅವಳ ಮೇಲೆಲ್ಲಾ ನೀರು ಸುರಿದರೆ ನೋಡಿ ತಮಾಷೆಮಾಡಿ ನಗುತ್ತಿದ್ದ.

ಯಾರದೋ ಎಳೆ ಮಗು ಬಾಗಿಲಲ್ಲಿ ಆಡುತ್ತಿದ್ದರೆ ಅದರ ತಾಯಿಗೆ ಕಾಣದಂತೆ ಮಗುವನ್ನು ಎತ್ತಿಕೊಂಡು ಹೋಗಿ ದೂರ ಕೂರಿಸಿ ಬಂದುಬಿಡು ತ್ತಿದ್ದ. ತಾಯಿ ಮಗುವನ್ನು ಕಾಣದೆ ಗಾಬರಿಯಿಂದ ಹುಡುಕಾಡಿದರೆ ಅವಳ ಹಿಂದೆ_ಹಿಂದೆ ಚಪ್ಪಾಳೆ ತಟ್ಟಿಕೊಂಡು ಓಡಾಡುತ್ತಿದ್ದ.

ಇವನ ದುಷ್ಟತನ ತಿಳಿದ ಅನೇಕರು ಇವನ ಕಪಾಳಕ್ಕೆ ಚೆನ್ನಾಗಿ ಬಿಗಿದು

ಕಳುಹಿಸುತ್ತಿದ್ದರು. ಮಗನ ಮೇಲೆ ಈ ರೀತಿ ದೂರುಗಳು ಬಂದಾಗ ಕಾಳಮ್ಮನಿಗೆ ಚಿಂತೆಯಾಗತೊಡಗಿತು.

ತಾಯಿ ಮಗನನ್ನು ಹತ್ತಿರ ಕೂರಿಸಿಕೊಂಡು ಮುದ್ದಿನಿಂದ ಶಿವು! ಹಾಗೆಲ್ಲಾ ದುಷ್ಟತನ ಮಾಡಬಾರದಪ್ಪಾ ಎಂದು ಬುದ್ಧಿವಾದ ಹೇಳಿದರೆ ತಾಯಿಯನ್ನೇ ಚೆನ್ನಾಗಿ ಬೈದು ಮನೆಯಿಂದ ಒಡಿ ಬಿಡುತ್ತಿದ್ದ. ಹತೋಟಿಯಿಲ್ಲದೆ ಬೆಳೆಯುತ್ತಿರುವ ಮಗನಿಗಾಗಿ ತಾಯಿ ಕೊರಗುತ್ತಿದ್ದಳು.

ಒಂದು ದಿನ ತೋಟದ ಬಾವಿಯ ಬಳಿ ಕೆಲವು ಮಕ್ಕಳು ಆಡುತ್ತಿದ್ದರು. ಶಿವು ಅವರ ಜೊತೆಗೆ ಆಡಲು ಹೋದ. ಆ ಮಕ್ಕಳೊಂದಿಗೆ ಏನೋ ಜಗಳ ತೆಗೆದು ಒಬ್ಬ ಬಾಲಕನನ್ನು ಬಾವಿಗೆ ತಳ್ಳಿ ಓಡಿಹೋದ ಮಕ್ಕಳೆಲ್ಲ ಹೋ — ಎಂದು ಕೂಗಿಕೊಂಡವು. ಆದರೆ ದೊಡ್ಡವರು ಯಾರೂ ಹತ್ತಿರವಿಲ್ಲದ್ದರಿಂದ ಹುಡುಗನನ್ನು ಬಾವಿಯಿಂದ ಎತ್ತಲು ಯಾರೂ ಬರಲಿಲ್ಲ. ಹುಡುಗ ನೀರಿನಲ್ಲಿ ಮುಳುಗಿ ಸತ್ತುಹೋದ.

ಅವರ ಮನೆಗೆ ಸಮಾಚಾರ ತಿಳಿದ ಕೂಡಲೇ ತಂದೆ-ತಾಯಿ ಎಲ್ಲರೂ ಗೊಳೋ ಎಂದು ಅಳುತ್ತಾ ಬಂದು ಶಿವುವನ್ನು ಹಿಡಿದು ಪೋಲೀಸಿಗೆಕೊಟ್ಟರು. ಇವನು ಚಿಕ್ಕ ಹುಡುಗನಾದರೂ ಇಷ್ಟು ಅಪಾಯ ಕೆಲಸ ಮಾಡುವುದನ್ನು ತಿಳಿದು ಪೋಲಿಸಿನವರು ಇವನನ್ನು ಚೆನ್ನಾಗಿ ಚಾವಟಿಯಿಂದ ಬಾರಿಸಿ ಮೂರು ದಿನ ಅನ್ನ ನೀರು ಕೊಡದೆ ಲಾಕಪ್ಪಿನಲ್ಲಿ ಇಟ್ಟದ್ದು ನಂತರ ಮನೆಗೆ ಬಿಟ್ಟರು.

ಮೈಯೆಲ್ಲಾ ಊದಿಕೊಂಡು ಸುಸ್ತಾಗಿ ಮನೆಗೆ ಬಂದ ಮಗನನ್ನು ನೋಡಿ ತಾಯಿ ತಂದೆಯರು ಗೋಳಾಡಿದರು. ಅವನಿಗ ಎಷ್ಟು ಬುದ್ಧಿ ಕಲಿಸಿದರೂ ಅವನ ದುಷ್ಟತನ ಕಮ್ಮಿಯಾಗಲಿಲ್ಲ.

ಒಂದು ಬಾರಿ ಕಾಳಮ್ಮನ ನೆಂಟರ ಮನೆಯಲ್ಲಿ ಮದುವೆಯ ಸಮಾರಂಭ ವಿತ್ತು. ಹತ್ತಿರದ ಸಂಬಂಧವಾದ್ದರಿಂದ ಕಾಳಮ್ಮ ಮಗನನ್ನೂ ಜೊತೆಯಲ್ಲಿ ಕರೆದುಕೊಂಡು ಮದುವೆಗೆ ಹೋದಳು. ಶಿವು ಎಂಟು ಹತ್ತು ವರ್ಷದ ಹುಡುಗನಾಗಿದ್ದ ಆದರೂ ಅವನಿಗೆ ವಿವೇಕವಮಾತ್ರ ಬಂದಿರಲಿಲ್ಲ.

ಕಾಳಮ್ಮ ಕಣ್ಣೇಕಾವಲಾಗಿ ಮಗನನ್ನು ನೋಡಿಕೊಂಡು ಜೊತೆಯಲ್ಲಿಯೇ ಇಟ್ಟುಕೊಂಡಿದ್ದರೂ ತಾಯಿಯ ಕಣ್ಣು ತಪ್ಪಿಸಿ ಏನಾದರೊಂದು ಚೇಷ್ಟೆ ಮಾಡುತ್ತಿದ್ದ.

ಧಾರೆ ಮುಹೂರ್ತವಾದ ನಂತರ ಎಲ್ಲರೂ ಚಪ್ಪರದ ಕೆಳಗೆ ಊಟಕ್ಕೆ

ಕುಳಿತರು. ಹೋಳಿಗೆ, ಹಪ್ಪಳ ಲಾಡು, ಪಾಯಸ ಎಲ್ಲವನ್ನೂ ಎಲೆಗೆ ಬಡಿಸಿದ್ದರು. ಜನರು ಸಾಲಾಗಿ ಕುಳಿತು ಊಟಮಾಡುತ್ತಿದ್ದರು. ಶಿವು ಏನಾದರೂ ಚೇಷ್ಟೆ ಮಾಡಲು ಸಮಯ ಕಾಯುತ್ತಿದ್ದ. ಎಲ್ಲರಿಗೂ ನೀರು ಬಡಿಸಲು ದೊಡ್ಡ ಕೊಳಗದಲ್ಲಿ ಅಲ್ಲಿಯೇ ನೀರಿಟ್ಟಿದ್ದರು. ಶಿವು ಹೋಗಿದ್ದೇ ಆ ನೀರು ಕೊಳಗವನ್ನು ಉರುಳಿಸಿದ, ನೀರು ಜೋರಾಗಿ ಹರಿದು ಮಣ್ಣನ್ನೆಲ್ಲಾ ಕೊಚ್ಚಿಕೊಂಡು ಊಟದ ಎಲೆಯಮೇಲೆ ಹರಿಯಿತು. ಕುಳಿತಿದ್ದವರ ಬಟ್ಟೆಯೆಲ್ಲಾ ನೆನೆಯಿತು. ಎಲೆಗೆ ಎಂಜಲು ಏಕವಾಯಿತು, ಊಟಕ್ಕೆ ಕುಳಿತಿದ್ದವರೆಲ್ಲಾ ಊಟಬಿಟ್ಟು ಎದ್ದು ಕೈ ತೊಳೆದುರು. ಅಷ್ಟು ಆಹಾರ ಪದಾರ್ಥವೂ ವ್ಯರ್ಥವಾಯಿತು.

ಮದುವೆ ಮನೆಯವರು ಹಸಿದವರಿಗೆ ಮತ್ತೆ ಅಡಿಗೆ ಮಾಡಿ ಹಾಕಬೇಕಾಯಿತು. ಇವನ ಒಂದು ನಿಮಿಷದ ಚೇಷ್ಟೆಯಿಂದ ಎಷ್ಟು ಪರಿಶ್ರಮ? ಎಷ್ಟು ನಷ್ಟ? ಮದುವೆ ಮನೆಗೆ ಬಂದಿದ್ದವರೆಲ್ಲರೂ ಕಾಳಮ್ಮನನ್ನು "ಎಂಥ ಮಗನನ್ನು ಹೆತ್ತೆಯಮ್ಮ ತಾಯೀ" ಎಂದು ಮೂದಲಿಸುವವರೇ; ನೆಂಟರಿಷ್ಟರಲ್ಲಿ ಕಾಳಮ್ಮ ಮಗನ ಸಲುವಾಗಿ ತಲೆ ತಗ್ಗಿಸುವಂತೆ ಆಯಿತು.

ಈ ದುಷ್ಟ ಹುಡುಗ ಇರುವವರೆಗೂ ಇನ್ನೇನು ಕೇಡು ಕಾದಿದೆಯೋ ಎಂದು ಎಲ್ಲರೂ ಭಯ ಪಡುವಂತಾಯಿತು.

ಮದುವೆ ಮನೆಯಲ್ಲಿ ಹೆಣ್ಣು-ಗಂಡನ್ನು ಸಂಜೆ ಹಸೆಯ ಮೇಲೆ ಕುಳ್ಳಿರಿಸಿ ಮತಾಪು ಹೂಬಾಣ, ಇವುಗಳನ್ನು ಮನರಂಜನೆಗಾಗಿ ಹಚ್ಚಿದರು ಹುಡುಗರೆಲ್ಲಾ, ಆದರೆ ಶಿವು ಚೇಷ್ಟೆಯ ಹುಡುಗನೆಂದು ಅವನಿಗೆ ಹಚ್ಚಲು ಮತಾಪನ್ನು ಕೊಡಲಿಲ್ಲ.

ಶಿವುಗೆ ಅವರ ಮೇಲೆಲ್ಲಾ ತುಂಬಾ ಕೋಪಬಂದುಬಿಟ್ಟಿತು ಹೇಗೋ ಒಂದು ಪಟ್ಟಿಗೆ ಮತಾಪನ್ನೂ ಹೂ ಬಾಣವನ್ನುಗಿಟ್ಟಿಸಿ ತೆಗೆದು ಕೊಂಡ. ಎಲ್ಲರೆದುರಿಗೆ ಹಚ್ಚಗೊಡವುದಿಲ್ಲ ಎಂದು ಶಿವು ಯಾರೂ ಇಲ್ಲದ ಕಡೆ ಒಂದು ರೂಮಿನ ಮೂಲೆಯಲ್ಲಿ ಹಚ್ಚ ತೊಡಗಿದ. ಎಲ್ಲರೂ ಆರತಿ ಅಕ್ಷತೆ ಸಂಭ್ರಮದಲ್ಲಿ ಹೊರಗೆ ಇದ್ದರು.

ರೂಮಿನ ಬಳಿ ಯಾರೋ ಬರುವ ಸದ್ದಾಯಿತು. ಕೂಡಲೇ ಶಿವು ತನ್ನ ಕೈಯ್ಯಲ್ಲಿ ಉರಿಯುತ್ತಿದ್ದ ಮತಾಪಿನ ಕಡ್ಡಿಯನ್ನು ಎಸೆದು ಬಟ್ಟ. ಆ ರೂಮಿನಲ್ಲಿ ಹೆಂಗಸರು ಸೀರೆ ಬಟ್ಟೆಗಳನ್ನು ಉಟ್ಟ-ಬಿಚ್ಚಿರಾಸಿ ಹಾಕಿದ್ದರು ಆ ಬಟ್ಟೆ ರಾಶಿಯ

ಮೇಲೆ ಬಿದ್ದು ಹತ್ತಿ ಉರಿಯ ತೊಡಗಿತು. ಉರಿಕಂಡ ಕೂಡಲೇ ಜನರೆಲ್ಲಾ ಗಾಬರಿಯಾಗಿ ಓಡಿ ಬಂದು ನೋಡಿದರು ಕೊಡ-ಕೊಡಗಳಲ್ಲಿ ನೀರನ್ನು ತಂದು ಸುರಿದು ಉರಿಯನ್ನು ಆರಿಸಿದರು.

ಶಿವು ಮಾತ್ರ ಅಲ್ಲಿರಲಿಲ್ಲ. ಎಲ್ಲೋ ದೂರ ಕುಳಿತು ಈ ತಮಾಷಿ ನೋಡುತ್ತಿದ್ದ. ಆದರೂ ಈ ಕೆಲಸ ಆ ಕೆಟ್ಟ ಹುಡುಗನದೇ ಎಂದು ಅವನನ್ನು ಹಿಡಿದು ಒಂದು ರೂಮಿನಲ್ಲಿ ಕೂಡಿ ಹಾಕಿದರು.

ಮದುವೆ ಸಮಾರಂಭ ಮುಗಿದ ನಂತರ ಮದುವೆ ಹೆಣ್ಣು ಗಂಡು ನೆಂಟರಿಷ್ಟರ ಸಮೇತ ಪ್ರಯಾಣ ಹೊರಟರು. ಗಂಡಿನವರ ಮನೆ ನದಿಯ ಆಚೆದಡದಲ್ಲಿ ಇತ್ತು. ದೋಣಿಯಲ್ಲಿ ಕುಳಿತು ನದಿಯನ್ನು ದಾಟಿ ಹೋಗ ಬೇಕಾಗಿತ್ತು. ಕಾಳಮ್ಮನೂ ಗಂಡಿನಕಡೆಯವಳೇ ಆದ್ದರಿಂದ ಅವಳು ದೋಣಿಯಲ್ಲಿ ನದೀ ದಾಟಿ ಹೋಗ ಬೇಕಾಗಿತ್ತು. ಶಿವನನ್ನೂ ಕರೆದು ಕೊಂಡು ನದೀದಾಟಲು ದೋಣಿಯಲ್ಲಿ ಕುಳಿತಳು. ಎಲ್ಲರೂ ಪ್ರಯಾಣ ಹೊರಟರು.



ದೋಣಿಯಲ್ಲಿ ಜನಕುಳಿತು ನದಿದಾಟುತ್ತಿರುವುದು ಹುಡುಗದೋಣಿ ಕೊನೆಯಲ್ಲಿ ಕುಳಿತು ಚೇಷ್ಟೇಮಾಡುತ್ತಿರುವುದು

ನದಿಯ ಏರಿಳಿತಕ್ಕೆ ಸರಿಹೊಂದಿಸಿ ಕೊಳ್ಳುತ್ತಾ, ಅಂಬಿಗನು ದೋಣಿಯನ್ನು ಮುಂದೆ ಸಾಗಿಸುತ್ತಿದ್ದ.

ತುಂಟ ಶಿವು ದೋಣಿಯ ಒಂದು ಮೂಲೆಯಲ್ಲಿ ಕುಳಿತು ತಲೆ ಬಗ್ಗಿಸಿ ಕೊಂಡು ಏನೋ ಮಾಡುತ್ತಿದ್ದ ಗಂಡು-ಹೆಣ್ಣನ್ನು ತಮಾಷೆ ಮಾಡುತ್ತಾ ನಗುತ್ತಾ, ಹಾಸ್ಯಮಾಡುತ್ತಾ ಖುಷಿಯಿಂದ ಇದ್ದ ಆ ಜನಗಳಿಗೆ ಶಿವುನ ಗಮನ ಬರಲಿಲ್ಲ.

ಶಿವು ಅವನಿಗೆ ತೋಚಿದಂತೆ ಭರ್ಜರಿ ಕೆಲಸವನ್ನೇ ಮಾಡಿದ್ದ ದೋಣಿಯ ಒಂದು ಮೂಲೆಗೆ ಭದ್ರವಾಗಿ ಹಾಕಿದ್ದ ಒಂದು ಬಿರಟೆಯನ್ನು ಸಡಲಿಸಿ-ಸಡಲಿಸಿ ಕಿತ್ತುಬಿಟ್ಟ.

ಒಂದೇ ನಿಮಿಷಕ್ಕೆ ನೀರು ದೋಣಿಯೊಳಕ್ಕೆ ತುಂಬಿಕೊಂಡಿತು. ಅಂಬಿಗ ಗಾಬರಿಯಿಂದ ನೀರನ್ನು ಹೊರಕ್ಕೆ ಹಾಕಲು ಪ್ರಯತ್ನ ಪಟ್ಟ ಸಾಧ್ಯವಾಗಲಿಲ್ಲ.

ಗಟ್ಟಿಯಾಗಿ ಕೂಗಿ ಕೊಂಡ "ಅಪಾಯ,....ಅಪಾಯ....ಈಜುಬರುವವರು ಈಜಿಕೊಂಡು ದಡ ಸೇರಿಕೊಳ್ಳಿ ಈಜುಬಾರದವರು ಗಂಗೆಯ ಪಾಲು" ಎಂದು

ಇನ್ನೇನು ದೋಣಿ ಮುಳುಗುವಂತಾಯಿತು. ಶಿವು ಭಯದಿಂದ ನಡುಗುತ್ತಾ "ಅಂಬಿಗಾ! ನನ್ನನು ಹೇಗಾದರೂ ಬದಿಕಿಸು. ನಾನು ಮಾಡಿದ ಕೆಲಸದಿಂದ ಇಂತಹ ಅಪಾಯ ಸಂಭವಸಿತು. ದೋಣಿ ಬಿರಟೆಯನ್ನು ಕಿತ್ತು ತೆಗೆದೆ, ಅಯ್ಯೋ ಅಮ್ಮಾ; ಎಂದು ಕೂಗಿದ.

ಇಷ್ಟು ಜನರ ಪ್ರಾಣವನ್ನೂ ಕಳೆಯುವಂತಹ ಆ ಕೆಟ್ಟ ಹುಡುಗನ ಮೇಲೆ ಎಲ್ಲರಿಗೂ ಅಪಾರ ಸಿಟ್ಟು ಬಂತು. ಕೈಮೀರಿತ್ತು ಏನು ಮಾಡಲು ಸಾಧ್ಯವಿಲ್ಲ. ಅಯ್ಯೋ ! ಪಾಪೀ....ನಿನ್ನಂತಹವನು ಭೂಮಿಯ ಮೇಲೆ ಇರಬಾರದು. ನೀನು ಸಾಯುವುದಲ್ಲದೆ ನಮ್ಮನ್ನೆಲ್ಲಾ ಸಾಯಿಸಿದೆಯೆಲ್ಲಾ ! ಹೋ....ಹೋದೆವು.... ಬದುಕಿಸಿ, ಬದುಕಿಸಿ, ಎಂದು ಕೂಗುತ್ತಲೇ ಎಲ್ಲಾರೂ ನೀರಿನಲ್ಲಿ ಮುಳುಗಿ ಕೊಚ್ಚಿಕೊಂಡು ಹೋದರು, ಕಾಳಮ್ಮನು ಇಂತಹ ಪಾಪಿ ಮಗನನ್ನು ಪಡೆದೆನಲ್ಲಾ ಎಂದು ಸಂಕಟ ಪಡುತ್ತಾ ಶಿವುನ ಜೊತೆಯಲ್ಲಿಯೇ ತೇಲುತ್ತಾ ಮುಳುಗುತ್ತಾ ಪ್ರವಾಹದಲ್ಲಿ ಬಹುದೂರ ಕೊಚ್ಚಿ ಕೊಂಡು ಹೋಗಿಯೇ ಬಿಟ್ಟರು.

ಮಕ್ಕಳೇ ! ಶಿವುನಂತೆ ದುಷ್ಟತನವನ್ನು ನೀವು ಎಂದೂ ಕಲಿಯ ಬಾರದು ಅಂತಹ ದುಷ್ಟರೊಂದಿಗೆ ಬಾಳುವವರಿಗೂ ಸುಖವಿಲ್ಲ.

# ಅಂಗಗಳ ಬೆಲೆ

ಮಕ್ಕಳೇ ! ಚಿಕ್ಕ ವಯಸ್ಸಿನಿಂದ ನಿಮ್ಮ ನಿಮ್ಮ ಕೈಲಾದಷ್ಟು ಕೆಲಸ ಮಾಡುವುದು ಒಳ್ಳೆಯ ಅಭ್ಯಾಸ. "ಕಾಯಕವೇ ಕೈಲಾಸ" ಎಂಬ ಮಾತು ಚಿಕ್ಕವರಿಗೂ ದೊಡ್ಡವರಿಗೂ ಅನ್ವಯಿಸುತ್ತದೆ.

ನಮಗೆ ದೇವರು ಕೊಟ್ಟಿರುವ ಕೈ, ಕಾಲು ಮತ್ತು ಅಂಗಾಂಗಗಳು ದುಡಿಯುವುದಕ್ಕಾಗಿಯೇ. ಕೈ ಕಾಲಿಲ್ಲದ ಅಂಗವಿಕಲರು ಎಲ್ಲಾ ಅಂಗಗಳೂ ಸರಿಯಾಗಿದ್ದು ಓಡಾಡುವವರನ್ನು ನೋಡಿ ಎಷ್ಟು ವ್ಯಥೆ ಪಡುತ್ತಾರೆ?

ನಾವೂ ಅವರಂತೆ ಓಡಾಡುವ ದುಡಿಯುವ ಭಾಗ್ಯವಿಲ್ಲವಲ್ಲಾ ! ಎಂದು ಹಂಬಲಿಸುತ್ತಾರೆ. ಇದಕ್ಕೆ ಒಂದು ಚಿಕ್ಕ ಕತೆ ಹೇಳುತ್ತೇನೆ ಕೇಳಿ.

ಒಬ್ಬ ಮಹಾತ್ಮ ನಿದ್ದ ಅವನು ಮಹಾದಾನಿ. ಆತ ಒಂದು ದೊಡ್ಡ ಛತ್ರವನ್ನು ಕಟ್ಟಿಸಿದ್ದ ಪ್ರತಿದಿನ ನೂರಾರು ಜನ ಅಂಗವಿಕಲರಿಗೆ ಅನ್ನದಾನ ಮಾಡುತ್ತಿದ್ದ.



ಮಹಾತ್ಮನೊಬ್ಬನು ಒಬ್ಬ ಯುವಕನಿಗೆ ಬುದ್ಧಿ ಹೇಳುತ್ತಿರುವುದು

ಕಣ್ಣಿಲ್ಲದವರು, ಕೈಕಾಲಿಲ್ಲದವರು, ಅಶಕ್ತರು ಆ ಛತ್ರದಲ್ಲಿ ಉಂಡು ಆ ಮಹಾತ್ಮನನ್ನು ಹಾಡಿ ಹರಸುತ್ತಿದ್ದರು.

ಇವರ ಮಧ್ಯದಲ್ಲಿ ಒಬ್ಬ ಧೃಢ ಕಾಯನಾದ ಯುವಕ ಸೇರಿಕೊಂಡು ಪ್ರತಿದಿನ ಊಟಮಾಡಿ ಹೋಗುತ್ತಿದ್ದ. ಆ ಮಹಾತ್ಮನು ಇದನ್ನು ಗಮನಿಸಿದ. ಒಂದೆರಡು ದಿನ ನೋಡಿದನಂತರ ಆ ಯುವಕನನ್ನು ಹೀಗೆ ಕೇಳಿದ. "ಅಪ್ಪಾ ! ಯುವಕ ನೀನೇಕೆ ಈ ಅಂಗ ವಿಕಲರೊಂದಿಗೆ ಸೇರಿ ಕೊಂಡು ಊಟ ಮಾಡುತ್ತಿದ್ದೀಯೆ ನಿನಗೆ ಅಂಗಾಂಗಗಳು ಸರಿಯಾಗಿವೆಯಲ್ಲಾ ! ದುಡಿದು ತಿನ್ನು" ಎಂದ.

ಅದಕ್ಕೆ ಆ ಯುವಕ "ಸ್ವಾಮೀ !....ನಾನು ಬಹಳ ಬಡವ. ತಿನ್ನುವುದಕ್ಕೆ ಗತಿಯಿಲ್ಲ." ಎಂದ.

ಮಹಾತ್ಮನು "ನೀನೇಕೆ ಬಡವ ? ನೀನು ಲಕ್ಷಾಧೀಶ್ವರ" ಎಂದ ಯುವಕ ಆಶ್ಚರ್ಯದಿಂದ "ಹಾಂ ; ನಾನು ಲಕ್ಷಾಧೀಶ್ವರನೇ ? ಅದು ಹೇಗೆ ? ಎಂದ.

ಅದಕ್ಕೆ ಮಹಾತ್ಮನು "ನಿನ್ನ ಎರಡು ಕಣ್ಣುಗಳನ್ನು ಕಿತ್ತುಕೊಡು ಈ ಕೂಡಲೇ ನಿನಗೆ ಒಂದು ಲಕ್ಷ ರೂಪಾಯಿಗಳನ್ನು ನಾನೇ ಕೊಡುವೆನು" ಎಂದ.

ಅದಕ್ಕೆ ಯುವಕ "ಅಯ್ಯಯ್ಯೋ !....ಕಣ್ಣಿಲ್ಲದೆ ನಾನು ಹೇಗೆ ಬದುಕಲಿ ? ಸಾಧ್ಯವಿಲ್ಲ" ಎಂದ.

ಹೋಗಲಿ ನಿನ್ನ ಎರಡು ಕೈಗಳನ್ನು ಕತ್ತರಿಸಿ ಕೊಡು ಒಂದು ಲಕ್ಷಕೊಡುತ್ತೇನೆ ಎಂದ ಮಹಾತ್ಮ.

ಯುವಕನು ಕೈಯಿಲ್ಲದವನ ಬಾಳು ಗೋಳು ನಾನು ನೊಡಲಾರೆ" ಎಂದ.

ಹೋಗಲಿ, ನಿನ್ನ ಎರಡು ಕಾಲುಗಳನ್ನು ಕತ್ತರಿಸಿ ಕೊಡು, ಒಂದು ಲಕ್ಷ ಕೊಡುತ್ತೇನೆ ಎಂದ, ಮಹಾತ್ಮ.

ಯುವಕ ನಿರಾಸೆಯಿಂದ ಕಾಲಿಲ್ಲದವನಿಗೆ ಮತ್ತೊಬ್ಬರ ಸಹಾಯ ಬೇಕು ನನಗೆ ಅಂತಹ ದುರವಸ್ಥೆ ಬೇಡಪ್ಪಾ ! ಬೇಡ" ಎಂದ.

ಆಗ ಮಹಾತ್ಮ ಹೇಳಿದ. ಅಪ್ಪಾ !....ತರುಣ ; ನೋಡಿದೆಯೂ ? ನಿನ್ನ ಪ್ರತಿಯೊಂದು ಅಂಗಗಳು ಒಂದು ಲಕ್ಷ ಬೆಲೆ ಬಾಳುತ್ತವೆ, ಎಂದಾಯಿತು.

ಅಂದರೆ ದೇವರು ನಮಗೆ ಎಲ್ಲಾ ಅಂಗಗಳನ್ನೂ ಸರಿಯಾಗಿ ಕೊಟ್ಟಿರುವುದೇ ದೊಡ್ಡ ಐಶ್ವರ್ಯ. ಅಂಗವಿಕಲರಿಗೆ ಆ ಭಾಗ್ಯವಿಲ್ಲದೆ ಎಂಥಾ ಕಷ್ಟ ಜೀವನವನ್ನು ನಡೆಸುತ್ತಾರೆ ಎಂಬುದು ಈಗ ನಿನಗೆ ಅರ್ಥವಾಯಿತೇ ? ನೀನು ಅವರಂತೆ

ಬಿಟ್ಟೆ ಊಟ ಮಾಡುವುದು ಪಾಪಕರ. ಕಷ್ಟ ಪಟ್ಟು ದುಡಿ. ದುಡಿಮೆಯಿಂದ ಲಕ್ಷಾಧೀಶ್ವರನೂ ಆಗಬಹುದು. ಸೋಮಾರಿ ಜೀವನ ನಡೆಸುವವರು ದೇಶದ್ರೋಹಿಗಳು" ಎಂದನು.

ಯುವಕ ನಾಚಿಕೆಯಿಂದ ತಲೆತಗ್ಗಿಸಿ "ನಿಮ್ಮ ಬುದ್ಧಿವಾದದಿಂದ ನನ್ನಲ್ಲಿ ಅರಿವು ಮೂಡಿತು ಸ್ವಾಮಿ ; ಇನ್ನು ನಾನು ಈ ರೀತಿ ಸೋಮಾರಿಯಾಗಿ ಇರುವುದಿಲ್ಲ. ದುಡಿದು ತಿನ್ನುತೇನೆ" ಎಂದು ಕೈಮುಗಿದು ಹೊರಟು ಹೋದ.

ಮಕ್ಕಳೇ ! ಅಂಗವಿಕಲರನ್ನು ಹಾಸ್ಯ ಮಾಡಬಾರದು, ನಿಕೃಷ್ಟ ಮಾಡಬಾರದು. ಕೀಳಾಗಿ ಕಾಣ ಬಾರದು. ಆ ನಿರ್ಭಾಗ್ಯರನ್ನು ಕರುಣೆಯಿಂದ ನೋಡಿ ನಮ್ಮ ಕೈಲಾದ ಸಹಾಯ ಮಾಡ ಬೇಕು. ಅವರೂ ಹರ್ಷದಿಂದ ಬಾಳುವಂತೆ ನಾವು ಸಹಕರಿಸ ಬೇಕು.

---

## ಆನೆಯ ಘನತೆ

ಆನೆಯು ಪ್ರಾಣಿಗಳಲ್ಲೆಲ್ಲಾ ದೊಡ್ಡ ಆಕಾರವುಳ್ಳದ್ದು. ಅಷ್ಟೇ ಬಲಶಾಲಿಯೂ ಹೌದು. ಕಾಡಿನಲ್ಲಿರುವಾಗ ಅದು ಗಜರಾಜ, ಆದರೆ ಮಾನವನ ಕೈಗೆ ಸಿಕ್ಕಿ ಬಿದ್ದಾಗ ನಮ್ರತೆಯ ಸೇವಕನಂತೆ ದುಡಿಯುತ್ತದೆ.

ಇಂತಹ ಬಲಶಾಲಿಯಾದ ಆನೆಯನ್ನೂ ಹಿಡಿದು ಪಳಗಿಸಿ ತಮಗೆ ಬೇಕಾದ ಕೆಲಸಕ್ಕೆ ಉಪಯೋಗಿಸಿ ಕೊಳ್ಳುವುದು ಮನುಷ್ಯನ ಬುದ್ಧಿವಂತಿಕೆ.

ಬಹಳ ಹಿಂದಿನ ಕಾಲದಿಂದಲೂ ಆನೆಯನ್ನು ಹಿಡಿದು ಪಳಗಿಸುವುದು ವಾಡಿಕೆಯಲ್ಲಿದೆ. ರಾಜರುಗಳು ಆನೆಯನ್ನು ಯುದ್ಧ ಮಾಡುವಾಗ ಉಪಯೋಗಿಸುತ್ತಿದ್ದರು.

ರಥ, ಗಜ, ತುರಗ, ಪದಾತಿ, ಎಂಬ ನಾಲ್ಕು ಬಗೆಯ ಸೈನ್ಯವನ್ನು ಸಿದ್ಧವಾಗಿ ಇಟ್ಟು ಕೊಳ್ಳುತ್ತಿದ್ದರು ಹಿಂದಿನ ರಾಜರುಗಳು "ಅದರಲ್ಲಿ ಗಜ" ಎಂದರೆ ಆನೆ. ಆನೆಯನ್ನೂ ಯುದ್ಧಕ್ಕೆ ಸಿದ್ಧ ಮಾಡುತ್ತಿದ್ದರು. ಮಹಾಭಾರತದ ಯುದ್ಧದಲ್ಲಿ ಕೂಡ ಆನೆಯನ್ನು ಉಪಯೋಗಿಸಿದ ಉದಾಹರಣೆಗಳಿವೆ.

ರಾಜ ಗೌರವದ ಚಿಹ್ನೆಯಾಗಿ ಆನೆಯನ್ನು ಪಳಗಿಸಿ ಪಟ್ಟದಾನೆಯೆಂದು ಪೂಜಿಸುತ್ತಿದ್ದರು. ಮಠಾಧಿ ಪತಿಗಳು ಮಠದ ಗೌರವಾರ್ಥವಾಗಿ ಆನೆಯನ್ನು ಇಟ್ಟು ಕೊಂಡಿರುತ್ತಾರೆ.

ವಾಹನ ಸೌಕರ್ಯವಿಲ್ಲದ ಕಾಡುಗಳಲ್ಲಿ ಮರದ ದಿಮ್ಮಿಗಳನ್ನು ಸಾಗಿಸಲು ಈಗಲೂ ಉಪಯೋಗಿಸಿಕೊಳ್ಳುತ್ತಾರೆ. ಎಲ್ಲದಕ್ಕಿಂತ ಈಗೀಗ ಸರ್ಕಸ್ಸುಗಳಲ್ಲಿ ಆನೆಯಿಲ್ಲದಿದ್ದರೆ ಶೋಭಿಸುವುದೇ ಇಲ್ಲ. ಸಾಧ್ಯವಿಲ್ಲದಂತಹ ಸಾಹಸವನ್ನು ಆನೆಯ ಕೈಯಿಂದ ಮಾಡಿಸುತ್ತಾರೆ.

ಎಲ್ಲಕ್ಕಿಂತ ಇತ್ತೀಚಿಗೆ ಚಿತ್ರರಂಗದಲ್ಲೂ ಆನೆಯ ಆಶ್ಚರ್ಯಕರವಾದ ಕೆಲಸ ಕಾರ್ಯಗಳನ್ನು ನಾವು ನೋಡುತ್ತಿದ್ದೇವೆ. ಆನೆಯ ಬುದ್ಧಿ ಅತಿಸೂಕ್ಷ್ಮ ಅತಿ ಚುರುಕು. ಮಾನವನಿಗೆ ನಮ್ರತೆಯಿಂದ ನಡೆದುಕೊಂಡರೂ ಸ್ವಾತಂತ್ರ್ಯವಿಲ್ಲದ ಅಂತಹ ಜೀವನವನ್ನು ಅದು ಇಷ್ಟ ಪಡುವುದಿಲ್ಲ.

ಕಾಡಿನಲ್ಲಿ ಹಿಂಡು ಹಿಂಡಾಗಿ ಸ್ವೇಚ್ಛೆಯಾಗಿ ಅಲೆದಾಡುವ ಅಷ್ಟು ಬಲಶಾಲಿಯಾದ ಪ್ರಾಣಿ ಮಾನವನು ಹಾಕಿದ ಮೇವಿನಲ್ಲಿ ಜೀವಿಸಬೇಂದರೆ ಅದು ಎಷ್ಟು ಸಂಕಟ ಪಡುತ್ತದೆ ? ಬಲ್ಲಿರಾ ?

ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ ಮೈಸೂರು ಮಹಾರಾಜರಾಗಿದ್ದ ಕೃಷ್ಣರಾಜ ಒಡೆಯರ ತಮ್ಮ ಕಂಠೀರವ ನರಸರಾಜ ಒಡೆಯರು ಪ್ರಾಣಿಗಳನ್ನು ತಂದು ಪಳಗಿಸಿ ಸಾಕುವುದರಲ್ಲಿ ಆಸಕ್ತಿಯುಳ್ಳವರು, ಅವರು ಪರದೇಶಗಳಿಗೆ ಹೋದಾಗ ಅಲ್ಲಿಯ ಅಪರೂಪದ ಪ್ರಾಣಿಗಳನ್ನು ತರುವುದು ವಾಡಿಕೆ. ಹೀಗೆ ಅವರು ಪ್ರಾಣಿಗಳನ್ನು ಸಂಗ್ರಹಿಸಿ ಮೈಸೂರಿನಲ್ಲಿ ಒಂದು ಪ್ರಾಣಿ ಸಂಗ್ರಹಾಲಯ ವನ್ನು ಸ್ಥಾಪಿಸಿ ಅದರ ಮೇಲ್ವಿಚಾರಣೆಯನ್ನು ತಾವೇ ನೋಡಿಕೊಳ್ಳುತ್ತಿದ್ದರು. ಒಂದು ಬಾರಿ ಕಾಕನ ಕೋಟೆ ಕಾಡಿನಿಂದ ಒಂದು ಭಾರಿ ಸಲಗನನ್ನು ಅತಿಸಾಹಸ ದಿಂದ ಹಿಡಿಸಿ ತರಿಸಿದರು. ಪಳಗಿದ ಆನೆಗಳ ಸಹಾಯದಿಂದ ಅದರ ಕಾಲಿಗೆ ಕುತ್ತಿಗೆಗೆ ಸರಪಣಿಯನ್ನು ಕಟ್ಟಿ ಮರಕ್ಕೆ ಬಂಧಿಸಿದರು.

ಸ್ವಲ್ಪ ಪಳಗಿದ ನಂತರ ಅದಕ್ಕೆ ಆಹಾರವನ್ನು ಕೊಡಿ ಎಂದು ಮಾವುತರಿಗೆ ಅಪ್ಪಣೆ ಮಾಡಿದರು, ಮೂರುದಿನ ಒಂದೇ ಸಮನೆ ಆನೆಯು ಕಣ್ಣಲ್ಲಿ ನೀರು ಸುರಿಸುತ್ತಾ ಘೀ....ಎಂದು ಗೋಳಿಟ್ಟಿತು. ಮತ್ತೆ ಅಲುಗಾಡದೆ ತಪಸ್ವಿಯಂತೆ ಸುಮ್ಮನೆ ನಿಂತು ಬಿಟ್ಟಿತು.

ಮಾವುತರು ಆನೆಗೆ ಆಹಾರವನ್ನು ತಿನ್ನಿಸಲು ಪ್ರಯತ್ನಪಟ್ಟರು ಒಳ್ಳೆ ರಸಕಬ್ಬನ್ನು ತಂದು ಆನೆಯ ಮುಂದೆ ರಾಶಿ ಹಾಕಿದರು. ಆನೆ ಕಣ್ಣೆತ್ತಿಯೂ ನೋಡಲಿಲ್ಲ.

ಜೊಂಡು ಹುಲ್ಲು, ಚಿಗುರು ಮುಂತಾದ ಆನೆಗೆ ಇಷ್ಟವಾದ ಆಹಾರವನ್ನೆಲ್ಲಾ ತಂದು ಮುಂದೆ ಒಡ್ಡಿದರು. ಸೊಂಡಿಲಿನಿಂದಲೂ ಮುಟ್ಟಲಿಲ್ಲ- ಹೀಗೆ ಒಂದು ವಾರ ಕಳೆಯಿತು. ಉಪವಾಸದಿಂದ ಸೊರಗುವ ಆ ಮೂಕಪ್ರಾಣಿಯ ಸಂಕಟವನ್ನು ಯಾರೂ ನೋಡಿ ಸಹಿಸಲಾಗಲಿಲ್ಲ. ಯುವ ರಾಜರಿಗೆ ಈ ಸಮಾಚಾರ ಮುಟ್ಟಿತು.

ಕೂಡಲೇ ಯುವರಾಜರು ಆನೆಯ ಬಳಿಗೆ ಬಂದು ನೋಡಿದರು. ಭಾರಿ ದೇಹದ ಆ ಗಜರಾಜ ಜೀವವನ್ನು ತೃಣವಾಗಿಸಿ ಆಹಾರವನ್ನು ಮುಟ್ಟದೆ ಘನತೆಯಿಂದ ಉಪವಾಸ ಸತ್ಯಾಗ್ರಹವನ್ನು ಮಾಡಿದೆ. ಯುವರಾಜರ ಕರುಳು ಮಿಡಿಯಿತು.

ಕೂಡಲೇ ಒಂದು ದೊಡ್ಡ ಬಕೆಟ್ಟಿನ ತುಂಬ ಹಸುವಿನ ಹಾಲನ್ನು ತರಿಸಿ ಅದರ ಮುಂದಿಡಿಸಿದರು. ಹಾಲನ್ನಾದರೂ ಕುಡಿಯಲಿ ಎಂದು ಅನೇಕ ಪ್ರಯತ್ನ ಮಾಡಿದರು ಸೊಂಡಿಲನ್ನು ಸೋಂಕಿಸಲೂ ಇಲ್ಲ.

ಅದಕ್ಕೆ ಹೇಗಾದರೂ ತಿನ್ನಿಸ ಬೇಕೆಂಬ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ಒಂದು ವಾರದಿಂದ ಜಲಪಾನವನ್ನೂ ಮಾಡಿದ ಆನೆಯ ದೇಹ ಬಳಲಿತು ನಿಲ್ಲಲ್ಲೂ ತ್ರಾಣವಿಲ್ಲದೆ ತತ್ತರಿಸಿತು. ಆದರೆ ಇಂತಹ ಬಂಧನದ ಜೀವನದಲ್ಲಿ ಬದುಕಿರುವುದಕಿಂತ ಪ್ರಾಣ ಬಿಡುವುದೇ ಲೇಸೆಂದು ಆ ಸ್ವಾತಂತ್ರ್ಯ ಪ್ರಿಯ ಗಜ ರಾಜ ಹಟ ತೊಟ್ಟಿತ್ತೆಂದು ಕಾಣುತ್ತೆ. ಆಹಾರದ ರಾಶಿ ಮುಂದಿದ್ದರೂ ತೃಣವನ್ನೂ ಮುಟ್ಟಲಿಲ್ಲ.

ಕಡೆಗೆ ಮಹಾರಾಜರವರೆಗೂ ಈ ಸುದ್ದಿ ಮುಟ್ಟಿತು. ಆನೆಯ ಹಠ ಎಲ್ಲರಿಗೂ ಆಶ್ಚರ್ಯವನ್ನು ತಂದಿತು. ಒಂದು ಪ್ರಾಣಿ ಉಪವಾಸದಿಂದ ತಳಮಳಿಸಿ ಸಾಯುವುದನ್ನು ಸಹಿಸಲಾರದೆ ಮಹಾಜರು ಅದನ್ನು ಕೂಡಲೇ ಬಂಧನದಿಂದ ಬಿಡುಗಡೆ ಮಾಡಿ ದೂರದ ಕಾಡಿಗೆ ಬಿಟ್ಟುಬನ್ನಿ ಎಂದು ಅಪ್ಪಣೆ ಮಾಡಿದರು. ಪಳಗಿದ ಆನೆಯ ಸಹಾಯದಿಂದ ಅದರ ಬಂಧನವನ್ನು ಸೇವಕರು ಬಿಚ್ಚಿದರು. ಬಳಲಿದ್ದ ಆನೆ ಕೂಡಲೇ ನೆಲಕ್ಕುರುಳಿ ಅಸುನೀಗಿತು.

ಮಕ್ಕಳೇ ಆನೆಯು ಘನತೆ ಎಷ್ಟು ದೊಡ್ಡದು ನೋಡಿದಿರಾ !

ಆನೆಯು ನಿಷ್ಠಾವಂತ ಸೇವಕನಂತೆ ತನ್ನ ಯಜಮಾನನಿಗೆ ವಿಧೇಯವಾಗಿ ನಡೆಯುತ್ತದೆ. ಅದಕ್ಕೆ ಒಂದು ಉದಾಹರಣೆ ಇದೆಕೇಳಿ

ಒಂದು ಊರಿಗೆ ದೊಡ್ಡ ಸರ್ಕಸ್ ಕಂಪನಿ ಬಂದಿತ್ತು. ಅದರಲ್ಲಿ ಅನೇಕ ಆನೆಗಳಿಂದ ಸರ್ಕಸ್ ಮಾಡಿಸುತ್ತಿದ್ದರು. ಒಂದುದಿನ ಬೆಳಿಗ್ಗೆ ಒಂದು ಆನೆ ಕಟ್ಟಿದ್ದ ಹಗ್ಗವನ್ನು ಬಿಚ್ಚಿಕೊಂಡು ಊರೊಳಗೆ ನುಗ್ಗಿತು, ಜನಗಳಿಗೆ ತುಂಬಾ ಗಾಬರಿಯಾಯಿತು. ಧಡ-ಧಡನೆ ಅಂಗಡೀ ಬೀದಿಗೆ ನುಗ್ಗಿತು. ಅಂಗಡಿಯ ವರು ಬಿಟ್ಟಿದ್ದು ಬಿಟ್ಟಹಾಗೆ ಇನ್ನೇನು ಗತಿ ಎಂದು ಗಾಬರಿಯಿಂದ ಓಡಿಹೋದರು. ಬೀದಿಯಲ್ಲಿ ಓಡಾಡುತ್ತಿದ್ದ ಜನ ಅಲ್ಲಲ್ಲೇ ಬಚ್ಚಿಟ್ಟುಕೊಂಡರು. ಆನೆ ಅಂಗಡಿ ಬೀದಿಯುದ್ದಕ್ಕೂ ಹೋಗುತ್ತಾ ಹೋಗುತ್ತಾ ಬಾಳೆ ಹಣ್ಣಿನ ಗೊನೆ, ಎಳೆ ನೀರು, ಕಾಯಿ ಬೆಲ್ಲ, ಎಲ್ಲವನ್ನೂ ತಿನ್ನುತ್ತಾ ಉರುಳಿಸುತ್ತಾ ಅಂಗಡಿಗಳನ್ನೆಲ್ಲಾ ಲೂಟಿ ಹೊಡೆಯುತ್ತಿತ್ತು.

ಈ ಸಮಾಚಾರವನ್ನು ಜನಗಳು ಓಡಿಹೋಗಿ ಸರ್ಕಸ್ ಯಜಮಾನನಿಗೆ ಮುಟ್ಟಿಸಿದರು. ಆದರೆ ಯಜಮಾನ ಏನುಮಾಡಲೂ ಸಾಧ್ಯವಿರಲಿಲ್ಲ. ಆ ಆನೆಯ ಯಜಮಾನ ಮಾವಟಿಗ ಊರಲ್ಲಿರಲಿಲ್ಲ, ಒಂದು ದಿನ ಮಾತ್ರ ಬೆಂಗಳೂರಿಗೆ ಹೋಗಿ ಬರುತ್ತೇನೆ ಎಂದು ಹೋಗಿದ್ದ. ಬೇರೆ ಮಾವಟಿಗಳು ಅದನ್ನು ತಡೆಯಲು ಪ್ರಯತ್ನಪಟ್ಟು ಸಾಧ್ಯವಾಗದೆ ಓಡಿದರು.

ಆನೆಯು ಪೇಟೆಯಲ್ಲಾ ಲೂಟಿ ಹೊಡೆದು ಊರಿಗೆಹತ್ತಿರವಿದ್ದ ಕಬ್ಬಿನ ಗದ್ದೆಗೆ ನುಗ್ಗಿತು. ಸಮೃದ್ಧವಾಗಿ ಬೆಳೆದಿದ್ದ ಕಬ್ಬಿನ ಮಧ್ಯೆ ನುಗ್ಗಿದಾಗ ಅದಕ್ಕೆ ಖುಷಿಯೋ-ಖುಷಿ ಯಾರನ್ನೂ ಲೆಕ್ಕಿಸದೆ ಕಬ್ಬನ್ನು ಮುರಿದು-ಮುರಿದು ತಿನ್ನುತ್ತಿದೆ. ಗದ್ದೆಯ ಯಜಮಾನ ಸರ್ಕಸ್ಸಿನವರ ಬಳಿ ಹೋಗಿ ಗೋಳಾಡಿದ.

ಆನೆಗೆ ಮದವೇರಿದಂತಾಗಿತ್ತು ಯಾರು ಹತ್ತಿರ ಹೋಗಿದ್ದರೂ ಎಳೆದು ತುಳಿದುಬಿಡುತ್ತಿತ್ತು. ಕೂಡಲೇ ಹೇಗಾದರೂ ಅದರ ಮಾವಟಿಗನನ್ನು ಕರಸಲೇ ಬೇಕು ಇನ್ನೂ ಏನೇನು ಅನಾಹುತಮಾಡಿಬಿಡುವುದೋ ಎಂದು ಭಯದಿಂದ ಸರ್ಕಸ್‌ಯಜಮಾನ ಒಬ್ಬ ಆಳನ್ನು ಕೂಡಲೇ ಬೆಂಗಳೂರಿಗೆ ಕಳುಹಿಸಿ ಮಾವಟಿ ಗನನ್ನು ಕರೆಸಿದ, ಮಾವಟಿಗ ವಿಷಯ ತಿಳಿದ, ಗಾಬರಿಯಾದ. ಬಿಚ್ಚಿಕೊಂಡು

ಓಡಿಹೋಗುವಾಗ ಆನೆ ಯಾರನ್ನೂ ತುಳಿಯದಿದ್ದುದೇ ಹೆಚ್ಚು ಎಂದು ಕಬ್ಬಿನ ಗದ್ದೆಯ ಬಳಿ ಓಡಿಹೋದ ಗದ್ದೆಯೆಲ್ಲಾ ಲೂಟಿ ಹೊಡೆದಿದ್ದರೂ ಆನೆ ಇನ್ನೂ ಕಬ್ಬನ್ನು ಮುರಿದು-ಮುರಿದು ತಿನ್ನುತ್ತಲೇ ಇದೆ.



ಕಬ್ಬಿನ ಗದ್ದೆಯಲ್ಲಿ ಆನೆಕಬ್ಬನ್ನು ಮುರಿದು ತಿನ್ನುತ್ತಿರುವುದು

ಮಾವಟಿಗ ದೂರದಿಂದಲೇ ಕೂಗಿದ "ಏಯ್, ಕಿಶೋರ್" ಭಲ್-ಭಲ್, ಆವ್.ಆವ್ ಎಂದು ಕರೆದ ಆನೆ ತನ್ನ ಯಜಮಾನನ ಧ್ವನಿಯನ್ನು ಕೇಳಿಸಿಕೊಂಡಿತು, ಬೆಳಿಗ್ಗೆಯಿಂದ ಸಂಜೆಯುವರೆಗೂ ಯಾರಿಗೂ ಸಗ್ಗದೆ ಸ್ವೇಚ್ಛೆಯಾಗಿ ತಿರುಗುತ್ತಿದ್ದ ಆನೆ ತನ್ನ ಯಜಮಾನ ಕರೆದ ಕೂಡಲೇ ವಿಧೇಯನಾದ ಮಗು ತಾಯಿಯು ಬಳಿ ಬಂದು ನಿಲ್ಲುವಂತೆ ಮಾವಟಿಗನ ಬಳಿ ಬಂದುನಿಂತಿತು. ಮಾವಟಿಗ ಸಲೀಸಾಗಿ ಆನೆಯ ಮೇಲೇರಿ ಕುಳಿತು ಡೇರೆಯಬಳಿ ಕರೆದುಕೊಂಡು ಹೋದ.

ಮಕ್ಕಳೇ ಆನೆಯಲ್ಲಿ ಎಷ್ಟು ವಿಧೇಯತೆ ಇದೆ ತಿಳಿದಿರಾ ? ಆನೆಯು ಕೃತಜ್ಞತೆಯುಳ್ಳ ಪ್ರಾಣಿ ತನಗೆ ಮಾಡಿದ ಉಪಕಾರವನ್ನು ಮರೆಯುವುದಿಲ್ಲ. ಅದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ.

ಒಂದು ಊರಿನಲ್ಲಿ ಒಂದು ಮಠ ಅಲ್ಲಿ ಆನೆಯನ್ನುಸಾಕಿದ್ದರು. ಪ್ರತಿದಿನ

ಬೆಳಗ್ಗೆ ಮಾವಟಿಗನು ಆನೆಯನ್ನು ಕೆಲವು ಬೀದಿಗಳ ಮನೆ ಮನೆ ಬಳಿ ಕರೆತರುತ್ತಿದ್ದ. ಮನೆಯವರು ಆನೆಗೆ ಅಕ್ಕಿಕಾಯಿ ಹಣ್ಣುಗಳನ್ನು ಮೊರದಲ್ಲಿ ತಂದು ಇಡುತ್ತಿದ್ದರು ಆನೆ ತಿಂದು ಮುಂದೆ ಹೋಗುತ್ತಿತ್ತು.

ಯಾರ ಮನೆಯಲ್ಲಿ ತಪ್ಪಿದರೂ ಲಲಿತಮ್ಮನ ಮನೆಯಲ್ಲಿ ಆನೆಗೆ ತಿಂಡಿ ತಪ್ಪುತ್ತಿರಲಿಲ್ಲ. ಅವಳು ಪ್ರತಿದಿನವೂ ಕಾಯಿಚೂರು, ಬೆಲ್ಲ, ಅಕ್ಕಿಯನ್ನು ಆನೆಗೆ ಕೊಟ್ಟು ಅದರ ಹಣೆಗೆ ಕುಂಕುಮ ಹಚ್ಚಿ ಕಣ್ಣಿಗೆ ಒತ್ತಿಕೊಳ್ಳುತ್ತಿದ್ದಳು. ಆನೆಯು ಕೃತಜ್ಞತೆಯಿಂದ ಸೊಂಡಿಲೆತ್ತಿ ಸಲಾಂಮಾಡಿ ಹೋಗುತ್ತಿತ್ತು.

ಒಂದು ಸಲ ಆನೆಗೆ ಮದವೇರಿ ಮಾವಟಿಗನ ಹತೋಟಿಗೂ ಸಿಕ್ಕದೆ ಸಿಕ್ಕಾಪಟ್ಟೆ ಓಡಲು ಶುರುಮಾಡಿತು. ಎದುರಿಗೆ ಸಿಕ್ಕಿದವರನ್ನು ಸೊಂಡಿಲಿನಿಂದ ಎತ್ತಿ ಒಗೆದು ಕಾಲಿನಿಂದ ತುಳಿಯುತ್ತಿತ್ತು. ಜನರು ಭಯ ಭೀತರಾಗಿ ಮನೆಯೊಳಗೇ ಸೇರಿ ಬಾಗಿಲು ಹಾಕಿಕೊಂಡರು ಆನೆಯು ಅನೇಕರನ್ನು ಕೊಂದು ಹಾಕಿತೆಂಬ ಸಮಾಚಾರ ಲಲಿತಮ್ಮನಿಗೂ ತಿಳಿಯಿತು.

ಅವಳ ಎರಡು ವರ್ಷದ ಗಂಡುಮಗು ಮನೆಯ ಮುಂದೆ ಬೀದಿಯಲ್ಲಿ ಆಡುತ್ತಿತ್ತು. ಆನೆಯು ಇತ್ತಲೇ ನುಗ್ಗಿ ಬರುತ್ತಿದೆ. ಮಗುವನ್ನು ಬೇಗ ಎತ್ತಿಕೊಂಡು ಒಳಗೆ ಹೋಗಿ ಬಾಗಿಲು ಹಾಕಿಕೊಳ್ಳುವುದು. ಎಂದು ತೀರ್ಮಾನಿಸಿ ಓಡೋಡಿ ಬಂದಳು ಮಗುವಿನ ಬಳಿ ಇವಳು ಬರುವ ವೇಳೆಗೆ ಆನೆಯು ಮಗುವಿನ ಹತ್ತಿರ ಬಂದುಬಿಟ್ಟಿತ್ತು.

ಲಲಿತಮ್ಮನಿಗೆ ಕೈಕಾಲು ಗಡ-ಗಡ ನಡುಗಿದುವು, ಅವಳು ಮಗುವನ್ನು ಅಲ್ಲಿಯೇ ಬಿಟ್ಟು ಮನೆಯೊಳಕ್ಕೆ ಓಡಿದಳು. ಆದರೆ ಮುಂದಿನ ದೃಶ್ಯ ನೆನೆಸಿಕೊಂಡಕೂಡಲೇ "ಅಯ್ಯೋ ಮಗು" ಆನೆ ಎಂದು ಕಿರುಚಿದ್ದೇ ಪ್ರಜ್ಞಾಹೀನಳಾಗಿ ಅಲ್ಲಿಯೇ ಬಿದ್ದುಬಿಟ್ಟಳು. ಆನೆ ಮಗುವನ್ನು ತುಳಿದುಹಾಕಿದೆ ಮಗು ಸತ್ತೇ ಹೋಗಿದೆ ಎಂಭ ಭಾವನೆ ಅವಳಿಗೆ.

ಆದರೆ ಆನೆ ಮಗುವಿನ ಬಳಿ ಬಂದಿದ್ದೇ ಓಡುವುದನ್ನು ನಿಲ್ಲಿಸಿ ಮಗುವಿಗೆ ಏನೂ ಅಪಾಯವಾಗದಂತೆ ಮೆಲ್ಲನೆ ಸೊಂಡಿನಲ್ಲಿ ಎತ್ತಿ ತಂದು ಮನೆಯ ಒಳಗೆ ಕೂರಿಸಿ ಮುಂದೆ ಹೊರಟುಹೋಯಿತು. ಮಗು ತಾಯಿಯಬಳಿ ಬಂದು ತಾಯಿಯನ್ನು ಅಪ್ಪಿಕೊಂಡಿತು,

ಲಲಿತಮ್ಮ ಕಣ್ಣು ತೆರೆದು ನೋಡುತ್ತಾಳೆ ಮಗು ಸುರಕ್ಷಿತವಾಗಿ ತನ್ನ ಬಳಿ ಇದೆ ಮಗು "ಅಮ್ಮಾ ! ಆನೆ ತಂದು ಬಿತ್ತು. ನನ್ನ ಎಂದು ಮುದ್ದು-ಮುದ್ದಾಗಿ ಹೇಳಿತು. ತಾನು ಪ್ರತಿದಿನ ತಿಂಡಿಕೊಟ್ಟುದರ ಕೃತಜ್ಞತೆಯನ್ನು ಆನೆ ಹೇಗೆ ಸಲ್ಲಿಸಿತ್ತು ಎಂದು ಆಶ್ಚರ್ಯಪಟ್ಟಳು ಲಲಿತಮ್ಮ.

## ಈ ಲೇಖಕರ ಇತರ ಕೃತಿಗಳು :-

ಲಂಬಾಣಲಕ್ಷ್ಮಿ - ಕಾದಂಬರಿ

## ಸಣ್ಣ ಕತೆಗಳು :

ಸಮಾನ ಪ್ರಕಾಶ
ಅಂತರಂಗದ ಅಲೆ
ಅಭಿಮಾನ
ಹೆಣ್ಣು ಒಗಟಿನ ಉತ್ತರ
ಪರೋಪಕಾರ್ಯ ಫಲ
ಬ್ರಹ್ಮಚಾರಿ
ನಾಗ-ನಾರಿ (ಮಕ್ಕಳ ಕತೆ) ಇನ್ನೂ ಮುಂತಾದುವು

## ಪ್ರಕಟಣೆಗೆ ಸಿದ್ಧವಾಗಿರುವ ನಾಟಕಗಳು :

ವರಸಾಮ್ಯ ಅಥವಾ ಮಾದರಿ ಮದುವೆ (ಸಾಮಾಜಿಕ)
ಅದೃಷ್ಟ - ಸಾಮಾಜಿಕ
ಮಿತಸಂತಾನವೇ ಸುಖಸಂಸಾರ - ನಾಟಕ
ರಾಧಾಮಾಧವ - ಪೌರಾಣಿಕ
ಬಂಧವಿಮೋಚನೆ - ಪೌರಾಣಿಕ
ಮತ್ತು ಕವನಗಳು